ಕನಕದಾಸ ಅಧ್ಯಯನ ಕೇಂದ್ರ ಸಾಹಿತ್ಯ ಸರಣಿ-೧
ಪ್ರಧಾನ ಸಂಪಾದಕ : ಕಾ ತ ಚಿಕ್ಕಣ್ಣ

ಸಂತಕವಿ ಕನಕದಾಸರು

(ಸಂಕ್ಷಿಪ್ತ ಜೀವನ-ಕಾವ್ಯ-ದರ್ಶನ)

ಡಾ. ಚಿಕ್ಕಮಗಳೂರು ಗಣೇಶ

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ
ಬೆಂಗಳೂರು

ಕನಕದಾಸ ಅಧ್ಯಯನ ಕೇಂದ್ರ ಸಾಹಿತ್ಯ ಸರಣಿ-೧

ಪ್ರಧಾನ ಸಂಪಾದಕ : ಕಾ ತ ಚಿಕ್ಕಣ್ಣ

ಸಂತಕವಿ ಕನಕದಾಸರು

ಡಾ. ಚಿಕ್ಕಮಗಳೂರು ಗಣೇಶ

ಪ್ರಕಾಶಕರು

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ

2ನೆಯ ಮಹಡಿ, ಚಾಲುಕ್ಯ ವಿಭಾಗ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-02

ದೂರವಾಣಿ: 080-22113147, E-mail: kanakaresearchcentre@gmail.com

www. saintpoetkanaka.in

ಸಂತಕವಿ ಕನಕದಾಸರು

ಲೇಖಕರು : ಡಾ. ಚಿಕ್ಕಮಗಳೂರು ಗಣೇಶ
ಕನ್ನಡ ಸಹಾಯಕ ಪ್ರಾಧ್ಯಾಪಕ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿಳಿಕೆರೆ
ಮೈಸೂರು ಜಿಲ್ಲೆ
ಮೊಬೈಲ್ : 9844767859

ಪ್ರಕಾಶಕರು : ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ
ಸದಸ್ಯ-ಕಾರ್ಯದರ್ಶಿ, ರಾಷ್ಟ್ರೀಯ ಸಂತಕವಿ
ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ
2ನೇ ಮಹಡಿ, ಚಾಲುಕ್ಯ ವಿಭಾಗ, ಕನ್ನಡ ಭವನ
ಜೆ.ಸಿ. ರಸ್ತೆ, ಬೆಂಗಳೂರು – 02.
ದೂರವಾಣಿ : 080-22113147
E-mail : kanakaresearchcentre@gmail.com
www.saintpoetkanaka.in

ಮೊದಲ ಮುದ್ರಣ : 2014

ಎರಡನೆಯ ಮುದ್ರಣ : 2015

ಹಕ್ಕುಗಳು : ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ
ಮತ್ತು ಸಂಶೋಧನಾ ಕೇಂದ್ರ

ಪುಟಗಳು : 72

ಪ್ರತಿಗಳು : 5000

ಆಕಾರ : 1/8 ಡೆಮಿ

ಕನಕ ಜಯಂತಿ ಪ್ರಯುಕ್ತ ಉಚಿತ ವಿತರಣೆ

ಮುದ್ರಣ : ಪೂಜಾಶ್ರೀ ಪ್ರಿಂಟರ್ಸ್, ಬೆಂಗಳೂರು

ಆಶಯ ನುಡಿ

ಕವಿಗಳು, ಚಿಂತಕರು, ಕಲಾವಿದರು ಒಂದು ನಾಡಿನ ಸಂಸ್ಕೃತಿಯ ನಿರ್ಮಾತೃಗಳೂ ಹೌದು. ಈ ದೃಷ್ಟಿಯಿಂದ ಕನ್ನಡ ನಾಡು ಪುಣ್ಯದ ಬೀಡು, ಕವಿ, ಋಷಿ, ಸಂತರು ಈ ಮಣ್ಣಿನಲ್ಲಿ ಸಮೃದ್ಧ ಚಿಂತನೆಗಳನ್ನು ಬಿತ್ತಿ ಬೆಳೆಸಿದ್ದಾರೆ. ವಚನಕಾರರಾದ ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ, ಡೊಹರ ಕಕ್ಕಯ್ಯ, ಮಡಿವಾಳ ಮಾಚಯ್ಯ ಮುಂತಾದವರೆಲ್ಲರೂ 800 ವರ್ಷಗಳ ಹಿಂದೆಯೇ ಈ ನಾಡಿನಲ್ಲಿ ಸಮ ಸಮಾಜದ ಕನಸು ಕಂಡವರು. ಪ್ರಜಾಪ್ರಭುತ್ವದ ಗಟ್ಟಿಬೀಜಗಳನ್ನು ಬಿತ್ತಿದವರು. ಮುಂದೆ ದಾಸಪರಂಪರೆಯು ಈ ಸಮಾಜದ ಮೌಢ್ಯವನ್ನು ತೊಡೆದು ಮನುಕುಲವೆಲ್ಲ ಒಂದೇ ಎಂಬ ಏಕತೆಯ ಮಂತ್ರವನ್ನು ಸಾರಿದೆ. ಇವರೆಲ್ಲರಲ್ಲಿ ಬಹುಮುಖ್ಯರು ಸಂತಕವಿ ಕನಕದಾಸರು.

ಇಂದಿನ ಹಾವೇರಿ ಜಿಲ್ಲೆಯ, ಶಿಗ್ಗಾಂವಿ ತಾಲ್ಲೂಕಿನ ಬಾಡಾ ಎಂಬ ಪುಟ್ಟ ಹಳ್ಳಿಯಲ್ಲಿ ಹುಟ್ಟಿ ಬೆಳೆದ ತಿಮ್ಮಪ್ಪ ನಾಯಕ ಬೆಳೆಯುತ್ತಾ ಕವಿಯಾಗಿ, ಸಂತನಾಗಿ, ಕನಕದಾಸನಾಗಿ ಈ ನಾಡಿನ ಸಾಂಸ್ಕೃತಿಕ ಚಿಂತಕರಲ್ಲಿ ಅಗ್ರಗಣ್ಯನಾಗಿ ಸ್ಥಾನ ಪಡೆದಿದ್ದು ಒಂದು. ಮಹಾ ಜೀವನಯಾತ್ರೆ, ಲೌಕಿಕ ಬದುಕಿನ ಎಲ್ಲಾ ನೋವು ನಲಿವುಗಳನ್ನುಂಡು ಅವುಗಳನ್ನು ಮೀರಿ ಆಧ್ಯಾತ್ಮದ ಕಡೆಗೆ ನಡೆದ ಸಂತ ಇವರು.

"ಕುಲಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನ್ನೇನಾದರೂ ಬಲ್ಲಿರಾ"

ಎಂಬ ಅವರ ಚಿಂತನೆ ಇಂದಿಗೂ ಈ ಸಮಾಜದಲ್ಲಿ ಅತ್ಯಂತ ಪ್ರಸ್ತುವೆನಿಸುತ್ತದೆ. ನಾನು, ನನ್ನದು ಎಂಬ ಸ್ವಾರ್ಥದಿಂದ ಮೇಲು, ಕೀಳು ಎಂಬ ಭೇದಭಾವಗಳಿಂದ ಕಲುಷಿತವಾಗುತ್ತಿರುವ ಮನುಷ್ಯನ ಬದುಕನ್ನು ಹಸನುಗೊಳಿಸುವ ದಿಕ್ಕಿನಲ್ಲಿ ಸಮಾನತೆಯ ಹರಿಕಾರರಾದ ಸಂತಕವಿ ಕನಕದಾಸರ ಚಿಂತನೆಗಳು ಸಮಾಜದ ಎಲ್ಲಾ ಜನರನ್ನು ತಲುಪಲೆಂಬ ಆಶಯದೊಂದಿಗೆ ಅವರ ಜೀವನ, ಸಾಧನೆ, ವಿಚಾರಗಳನ್ನು ಒಳಗೊಂಡ ಈ ಪುಟ್ಟ ಕೃತಿಯನ್ನು ಕನಕ ಜಯಂತಿಯಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ಪ್ರಕಟಿಸಿ ಉಚಿತವಾಗಿ ವಿತರಿಸುತ್ತಿದ್ದು ನಾಡಿನ ಜನತೆ ಇದರ ಪ್ರಯೋಜನ ಪಡೆಯಲೆಂದು ಆಶಿಸುತ್ತೇನೆ.

ಉಮಾಶ್ರೀ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಹಿರಿಯ ನಾಗರಿಕರ ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಅಧ್ಯಕ್ಷರ ನುಡಿ

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವು ಕನಕದಾಸರ ಜೀವನದರ್ಶನ ಮತ್ತು ಅವರ ಕಾವ್ಯ - ಕೀರ್ತನೆಗಳ ಕುರಿತು ಅಧ್ಯಯನ, ಸಂಶೋಧನೆ, ಪ್ರಕಟಣೆ ಮತ್ತು ಪ್ರಸಾರ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ. ಈ ಬಗೆಯ ಕಾರ್ಯಾಧ್ಯಯನಗಳಿಗೆ ಯುವ ಸಮುದಾಯವನ್ನು ತೊಡಗಿಸಿಕೊಳ್ಳುವುದು ಇದರ ಆಶಯವಾಗಿದೆ. ಈ ನೆಲೆಯಲ್ಲಿ ಹೊಸ ಹೊಸ ದೃಷ್ಟಿಕೋನದಿಂದ ಅಧ್ಯಯನಶೀಲ ವಿದ್ವಾಂಸ, ಸಂಶೋಧನಾರ್ಥಿಗಳಿಗೆ ಫೆಲೋಶಿಪ್ ನೀಡಿಕೆ, ಅಧ್ಯಯನಗಳಿಗೆ ಅನುದಾನ, ರಾಜ್ಯ-ರಾಷ್ಟಮಟ್ಟದಲ್ಲಿ ವಿಚಾರ ಸಂಕಿರಣ-ಸಂವಾದಗೋಷ್ಠಿಗಳ ಏರ್ಪಾಟು, ವಿವಿಧ ಮಾಧ್ಯಮಗಳಲ್ಲಿ ಕನಕದಾಸರ ತತ್ವಾದರ್ಶಗಳ ಪ್ರದರ್ಶನ-ಪ್ರಸಾರ ಕಾರ್ಯ, ವಿವಿಧ ಭಾಷೆಗಳಿಗೆ ಕನಕದಾಸರ ಸಮಗ್ರ ಸಾಹಿತ್ಯ ಅನುವಾದ, ತೌಲನಿಕ ಅಧ್ಯಯನದ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳು, ಕರ್ನಾಟಕ ತತ್ವಪದಕಾರರ ಸಮಗ್ರ ಸಾಹಿತ್ಯ ಪ್ರಕಟಣೆ, ಯುವಜನ - ವಿದ್ಯಾರ್ಥಿ ಸಮುದಾಯಕ್ಕಾಗಿ ಕನಕ ಸಂಸ್ಕೃತಿ ಕಮ್ಮಟ-ರಸಗ್ರಹಣ ಶಿಬಿರಗಳ ಸಂಘಟನೆ, ಹಿರಿಯ ಹಾಗೂ ಯುವ ವಿದ್ವಾಂಸರಿಗೆ ಪುರಸ್ಕಾರ ಮುಂತಾದ ಹಲವಾರು ರಚನಾತ್ಮಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೊಳಿಸುತ್ತಿದೆ.

ಪ್ರಸ್ತುತ, ಕನಕದಾಸರ ಜೀವನ ವಿಚಾರ, ಸಂದೇಶ, ಕಾವ್ಯಗಳ ಕುರಿತಂತೆ ಓದುಗರಿಗೆ ಸರಳವಾಗಿ ಓದಿಸಿಕೊಳ್ಳುವ ಹಾಗೂ ಸುಲಭವಾಗಿ ತಲಪುವ ಉದ್ದೇಶದಿಂದ 'ಸಂತಕವಿ ಕನಕದಾಸರು' ಎಂಬ ಜನಪ್ರಿಯ ಆವೃತ್ತಿಯನ್ನು ಹೊರತರಲಾಗುತ್ತಿದೆ. ಇದನ್ನು ಇಂಗ್ಲಿಷ್ ಸೇರಿದಂತೆ ಭಾರತೀಯ ಭಾಷೆಗಳಿಗೆ ಅನುವಾದಿಸಿ ಪ್ರಕಟಿಸುವುದೂ ಆಗುತ್ತಿದೆ. ಈ ಪುಸ್ತಕವನ್ನು ರಚಿಸಿಕೊಟ್ಟ ಶ್ರೀ ಚಿಕ್ಕಮಗಳೂರು ಗಣೇಶ ಅವರಿಗೆ ಕೃತಜ್ಞತೆಗಳು. ಕೃತಿರಚನೆಯ ಪರಿಶೀಲನೆ ಮಾಡಿ, ಸಲಹೆ ನೀಡಿ ಪುಸ್ತಕ ಬರಲು ಕಾರಣರಾದ ಅಧ್ಯಯನ ಕೇಂದ್ರದ ಸಮನ್ವಯಾಧಿಕಾರಿಗಳಾದ ಶ್ರೀ ಕಾ.ತ. ಚಿಕ್ಕಣ್ಣ ಅವರಿಗೆ, ಹಸ್ತಪ್ರತಿ ಓದಿದ ಪ್ರೊ. ಜ್ಯೋತಿ ಹೊಸೂರ ಅವರಿಗೆ ವಂದನೆಗಳು. ಕನಕದಾಸರ ಸಮಗ್ರ ಸಾಹಿತ್ಯ ಅನುವಾದ ಯೋಜನೆಗೆ ಅನುಮತಿ ನೀಡಿ ಪ್ರಥಮ ಹಂತದಲ್ಲಿಯೇ 100 ಲಕ್ಷಗಳನ್ನು ನೀಡಿದ ಮಾನ್ಯ ಮುಖ್ಯಮಂತ್ರಿಗಳೂ ಹಣಕಾಸು ಸಚಿವರೂ ಆದ ಸನ್ಮಾನ್ಯ ಸಿದ್ಧರಾಮಯ್ಯ ಅವರಿಗೆ, ಪ್ರೋತ್ಸಾಹ ನೀಡುತ್ತಿರುವ ಕನ್ನಡ-ಸಂಸ್ಕೃತಿ ಸಚಿವರಾದ ಶ್ರೀಮತಿ ಉಮಾಶ್ರೀ ಅವರಿಗೆ, ಅಧ್ಯಯನ ಕೇಂದ್ರದ ಕಾರ್ಯಾನುಷ್ಠಾನ ಮಂಡಳಿಯ ಸದಸ್ಯಕಾರ್ಯದರ್ಶಿ ಹಾಗೂ ಸದಸ್ಯರಿಗೆ ಕೃತಜ್ಞತೆಗಳು.

ಸಾಹಿತ್ಯಾಭಿಮಾನಿಗಳು ಪುಸ್ತಕದ ಪ್ರಯೋಜನವನ್ನು ಪಡೆಯುವರೆಂದು ಭಾವಿಸುತ್ತೇನೆ.

ದಿನಾಂಕ: 15.09.2014

ಕೆ.ಎ. ದಯಾನಂದ

ಅಧ್ಯಕ್ಷರು

ಮುಂಮಾತು

ಸಂತ ಕವಿ ಕನಕದಾಸರು ಇವತ್ತಿನ ಸಾಮಾಜಿಕ ಸನ್ನಿವೇಶದಲ್ಲಿ ಹೆಚ್ಚು ಪ್ರಸ್ತುತವಾಗಿದ್ದಾರೆ. ಇದು ಈ ಕವಿಗಿರುವ ಅನನ್ಯತೆ. 16 ನೆಯ ಶತಮಾನದ ತರುವಾಯ ಮುಖ್ಯವಾಗಿ ಆಧುನಿಕ ಕಾಲಮಾನದ ಸಾಹಿತ್ಯ ಚರಿತ್ರೆಯಲ್ಲಾಗಲಿ ಅಥವಾ ಭಕ್ತಿಪಂಥದ ಚರಿತ್ರೆಯಲ್ಲಾಗಲಿ ಕನಕದಾಸರನ್ನು ಒಬ್ಬ 'ಭಕ್ತ' ಎಂತಲೋ 'ದಾಸ' ಎಂತಲೋ ನಿಗದಿಪಡಿಸಿಕೊಂಡು ಬರಲಾಗಿದೆ. ಶಿಕ್ಷಣ ನೀಡಿದ ಶಾಲಾಕಾಲೇಜುಗಳ ಪಠ್ಯಗಳು, ಬೋಧನೆಗಳು ಸಹಿತ ಹೀಗೆಯೇ ಪ್ರತಿಬಿಂಬಿಸಿವೆ. ವಾಸ್ತವವಾಗಿ ಕನಕದಾಸರು ಲೌಕಿಕ ಅಂಟುಗಳನ್ನು ಬಿಡಿಸಿಕೊಂಡು ದಾಸನಾಗಿ ಹೊರಬಂದ ಮೇಲೆ ಕವಿಯಾಗಿ ಬೆಳೆದ ವೈವಿಧ್ಯಪೂರ್ಣ ಘಟ್ಟಗಳನ್ನು ನಾವು ಹೆಚ್ಚು ಗಂಭೀರವಾಗಿ ಅರ್ಥೈಸಿಕೊಳ್ಳಲಾಗಿಲ್ಲ. ಆದರೆ ಪ್ರಭುತ್ವವನ್ನು ಹಿನ್ನೆಲೆಗೆ ಸರಿಸಿ, ಬದುಕಿನ ಜ್ಞಾನ ಮಾರ್ಗವನ್ನು ಮುನ್ನೆಲೆಗಿರಿಸಿಕೊಂಡು ಊರು-ಕೇರಿ, ಕ್ಷೇತ್ರ-ಕಾವಲುಗಳನ್ನು ಅರಸುತ್ತಾ ಹೊರಟ ತಿಮ್ಮಪ್ಪನಾಯಕನಿಗೆ ಆಗ ಎದುರಾದ ಸಂಕೀರ್ಣ ಸಮಾಜದ ಸ್ಥಿತಿಗತಿಗೆ ತಲ್ಲಣಗೊಳ್ಳುತ್ತಲೇ ತಾಳ್ಮೆಯ ಸಂತನಾದ ಬಗೆಯನ್ನು ಕವಿ ನೆಲೆಯಿಂದಲೇ ನಾವಿಂದು ನೋಡುವ ಅಗತ್ಯವನ್ನು ಕನಕಸಾಹಿತ್ಯವು ಒತ್ತಾಯಿಸುತ್ತದೆ. ಭಾಗವತನಾಗುತ್ತೇನೆಂದು ಒಂಟಿಯಾಗಿ ಬಂದ ಕನಕದಾಸರಿಗೆ ಎಲ್ಲಿಯೂ ಪ್ರವೇಶ ಅಷ್ಟು ಸುಲಭವಾಗಲಿಲ್ಲ. ತಾನು ಹೋಗುತ್ತಿರುವ ಸ್ವಾಮಿ ದರ್ಶನಕ್ಕೆ ಅವಕಾಶ ಸಿಗದೆಂದು ತಿಳಿದಿದ್ದರೂ ಅಲ್ಲಿಗೆ ಹೋಗಿ ಪ್ರತಿರೋಧವನ್ನು ಎದುರಿಸಿಯೇ ಯಶಸ್ವಿಯಾಗುವ ಸಂಗತಿ ಉಲ್ಲೇಖನಾರ್ಹ. ಹಾಗಾಗಿ ಅವರು ಒಳಗೂ ಒಂಟಿಯಾದರು, ಹೊರಗೂ ಒಂಟಿಯಾದರು. ಆಗ ಕನಕದಾಸರೊಳಗಿದ್ದ 'ಸಂತ-ಕವಿ' ಪ್ರಕಟವಾಗುವುದು ಸನ್ನಿವೇಶ-ಸಂದರ್ಭದ ಅಗತ್ಯವಾಯಿತು. ಒಳಗಿನ ಒಂಟಿತನಕ್ಕೆ ಆದಿಕೇಶವನನ್ನೇ ಆತ್ಮ ಬಲವಾಗಿಸಿಕೊಂಡು ಹೊರಗಿನ ಒಂಟಿತನಕ್ಕೆ ಸಮುದಾಯದ ತಲ್ಲಣಗಳನ್ನು ಪ್ರೇರಕ ಶಕ್ತಿಯಾಗಿಸಿಕೊಂಡು ಹಾಡುತ್ತಾ ಬರೆಯುತ್ತಾ ನಡೆದ ಕನಕದಾಸರ ಜಂಗಮತನದ ದರ್ಶನ ನಿರಂತರವಾಗಿ ಕಾಲಘಟ್ಟಗಳಿಗೆ ಸ್ಪಂದಿಸುತ್ತಲೇ ಸಾಗಿಬಂದಿದೆ. ಗಮನಿಸಬೇಕಾದ ಸಂಗತಿಯೆಂದರೆ, ಈ ಸಾಂಸ್ಕೃತಿಕ ಪ್ರಕ್ರಿಯೆಯೊಳಗೆ ಹುದುಗಿಕೊಂಡ ಕವಿ, ಸಮಾಜವಿಜ್ಞಾನಿ, ಬಂಡಾಯಗಾರ, ದಾರ್ಶನಿಕ, ಕೃಷಿಕ, ಜನಪದಜಿಜ್ಞಾಸು, ಕಲಾವಿದ ಮುಂತಾದ ಹಲವು ವ್ಯಕ್ತಿತ್ವಗಳನ್ನು ನಾವು ಪರಿಶೀಲಿಸಬೇಕಾಗಿದೆ. ಇದು ಕನಕದಾಸರಿಗೆ ನೀಡುವ ಗೌರವ ಮಾತ್ರವಲ್ಲ ಇವತ್ತಿನ ಸಾಂಸ್ಕೃತಿಕ ಅಗತ್ಯವೂ ಹೌದು. ಯಾಕೆಂದರೆ ಇವತ್ತೂ ಸಹಿತ ಜಾತಿ, ವರ್ಗ, ಧರ್ಮಗಳ ಹೆಸರಿನಲ್ಲಿ ಭಿನ್ನ ಭಿನ್ನ ವೇಷತೊಟ್ಟು ಮಾನವ ಸಮಾಜ ಅನುಭವಿಸುತ್ತಿರುವ ಅಸಮಾನತೆ, ಅಸಮಾಧಾನಗಳಿಗೆ ಕನಕದಾಸರಲ್ಲಿ ಉತ್ತರಗಳಿವೆ ಎಂಬುದನ್ನು ನಾವು ಗಮನಿಸಬೇಕು. ಅವು ಕೇವಲ ಸಂದೇಶವಲ್ಲ. ಅವರು ಮನುಷ್ಯರೊಳಗಿನ ಹಲವು ಮುಖವಾಡಗಳನ್ನು, ಧರ್ಮಪಂಥಾನುಯಾಯಿಗಳ ಆಷಾಢಭೂತಿ ಅವಾಂತರಗಳನ್ನು ಕಳಚುತ್ತಾ ಸಮಾಜಮುಖಿ ರುಜುಮಾರ್ಗದ ನಿಚ್ಚಳ ಹಾದಿಯನ್ನು ಬಹು ಕಾವ್ಯಾತ್ಮಕವಾಗಿ, ವಿಡಂಬನಾತ್ಮಕವಾಗಿ,

ವಿಮರ್ಶಾತ್ಮಕವಾಗಿ, ಮಾರ್ಮಿಕವಾಗಿ ತೆರೆದಿಟ್ಟಿದ್ದಾರೆ. ಕನಕದಾಸರ ಈ ಬಗೆಯ ವಿಚಾರಗಳನ್ನು ಸಾಹಿತ್ಯಾಭಿಮಾನಿಗಳಿಗೆ, ವಿಶೇಷವಾಗಿ ಯುವ ಸಮುದಾಯಕ್ಕೆ ತಲುಪಿಸುವ ಅಗತ್ಯವನ್ನು ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಮನಗಂಡಿದೆ.

ಈ ಹಿನ್ನೆಲೆಯಲ್ಲಿ ಕನಕದಾಸರ ಜೀವನ ಹಾಗೂ ಸಾಹಿತ್ಯ ವಿಚಾರಗಳನ್ನು ತುಂಬ ಸರಳವಾಗಿಯೂ, ಸುಲಭ ಓದಿಗೆ ನಿಲುಕುವಂತೆಯೂ ಇರಬೇಕೆಂಬ ಉದ್ದೇಶದಿಂದ 'ಸಂತ ಕವಿ ಕನಕದಾಸರು' ಎಂಬ ಪುಸ್ತಕವನ್ನು ಹೊರತರಲಾಗುತ್ತಿದೆ. ಕನಕದಾಸರ ಜೀವನ, ವಿಚಾರ ಕುರಿತಾದ ಹಲವಾರು ಪುಸ್ತಕಗಳು ಹೊರ ಬಂದಿವೆ ನಿಜ. ಅವುಗಳ ಮುಂದುವರಿದ ಮಾದರಿ 'ಸಂತಕವಿ ಕನಕದಾಸರು' ಪುಸ್ತಕವೇನಲ್ಲ. ಈಗಾಗಲೇ ತಿಳಿಸಿದಂತೆ ಕನಕದಾಸರ ಜೀವನ, ಸಾಧನೆ, ಅವರ ಸಂದೇಶ ಕುರಿತಂತೆ ಪರಿಚಯಾತ್ಮಕವೂ, ವಿಚಾರ ಪ್ರಚೋದಕವೂ, ಸೃಜನಶೀಲವೂ ಆಗಿರುವಂತೆ ಈ ಪುಸ್ತಕವನ್ನು ಯುವ ಲೇಖಕರೂ ಹಾಗೂ ಚಿಂತಕರೂ ಆದ ಡಾ. ಚಿಕ್ಕಮಗಳೂರು ಗಣೇಶ ಸಿದ್ಧಪಡಿಸಿಕೊಟ್ಟಿದ್ದಾರೆ. ಅಧ್ಯಯನ ಕೇಂದ್ರದ ಆಶಯಕ್ಕೆ ತಕ್ಕಂತೆ ರೂಪಿಸಲು ಮೇಲಿಂದ ಮೇಲೆ ನೀಡಿದ ಸೂಚನೆ, ತಿದ್ದುಪಡಿ, ಸೇರ್ಪಡೆಗಳನ್ನು ಪ್ರೀತಿಯಿಂದಲೇ ಸ್ವೀಕರಿಸಿ ಕೃತಿ ರಚನೆಮಾಡಿದ್ದಾರೆ. ಅವರಿಗೆ ಮತ್ತು ಇದರ ಹಸ್ತಪ್ರತಿ ಹಂತದಲ್ಲಿ ಓದಿಕೊಟ್ಟ ಪ್ರೊ. ಜ್ಯೋತಿ ಹೊಸೂರ ಅವರಿಗೆ ಕೃತಜ್ಞತೆಗಳು.

ಕನಕದಾಸರ ಕುರಿತ ಈ ಜನಪ್ರಿಯ ಆವೃತ್ತಿಯನ್ನು ಹೊರತರಬೇಕೆಂಬ ಸಲಹೆಯನ್ನು ಅಧ್ಯಯನ ಕೇಂದ್ರದ ಕಾರ್ಯಾನುಷ್ಠಾನ ಮಂಡಳಿ ಸಭೆಯ ಮುಂದಿರಿಸಿದಾಗ ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿಗಳು ಹಾಗೂ ಎಲ್ಲ ಸದಸ್ಯರು ಸಂತೋಷದಿಂದ ಒಪ್ಪಿಗೆ ಸೂಚಿಸಿದರು. ಈ ಆವೃತ್ತಿಯನ್ನು ಇಂಗ್ಲಿಷ್ ಸೇರಿದಂತೆ ಹಿಂದಿ, ಮರಾಠಿ, ತೆಲುಗು, ತಮಿಳು, ಕೊಂಕಣಿ, ಕೊಡವ, ಬ್ಯಾರಿ, ತುಳು, ಉರ್ದು, ಮಲಯಾಳಂ, ಸಂಸ್ಕೃತ, ಪಂಜಾಬಿ, ಬೆಂಗಾಲಿ, ಅಸ್ಸಾಮಿ ಒಟ್ಟು 15 ಭಾಷೆಗಳಿಗೆ ಅನುವಾದಿಸಬೇಕೆಂಬ ಸಲಹೆಯನ್ನು ಸಮಿತಿಯು ಅನುಮೋದಿಸಿ ಒಪ್ಪಿಗೆ ನೀಡಿತು. ಕಾರ್ಯಾನುಷ್ಠಾನ ಮಂಡಳಿ ಅಧ್ಯಕ್ಷರಾದ ಶ್ರೀ ಕೆ.ಎ. ದಯಾನಂದ, ಸದಸ್ಯ ಕಾರ್ಯದರ್ಶಿಗಳಾದ ಶ್ರೀ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಮತ್ತು ಎಲ್ಲ ಸದಸ್ಯರಿಗೆ, ಅಧ್ಯಯನ ಕೇಂದ್ರದ ಸಿಬ್ಬಂದಿ ಸ್ನೇಹಿತರಿಗೆ, ಕನಕ ಚಿತ್ರಕಲಾ ಶಿಬಿರದಲ್ಲಿ ರಚಿಸಿದ್ದ ಮುಖಪುಟ ಚಿತ್ರದ ಶ್ರೀ ವಿ.ಜಿ. ಅಂದಾನಿ ಅವರಿಗೆ, ವಿನ್ಯಾಸ ರಚಿಸಿಕೊಟ್ಟ ಶ್ರೀ ಕೃಷ್ಣ ರಾಯಚೂರು, ಮುದ್ರಣಮಾಡಿ ಕೊಟ್ಟ ಪೂಜಾಶ್ರೀ ಪ್ರಿಂಟರ್ಸ್, ಬೆಂಗಳೂರು ಅವರಿಗೆ ನನ್ನ ನೆನಕೆಗಳು.

ಕಾ ತ ಚಿಕ್ಕಣ್ಣ
ಪ್ರಧಾನ ಸಂಪಾದಕ
ಹಾಗೂ
ಸಮನ್ವಯಾಧಿಕಾರಿ

ಸಂತಕವಿ ಕನಕದಾಸರು

ಪ್ರವೇಶ

'ಬಾಡ' ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ ದಕ್ಷಿಣಕ್ಕಿರುವ ಒಂದು ಪುಟ್ಟಹಳ್ಳಿ. ಇತಿಹಾಸಪ್ರಸಿದ್ಧ ಪಟ್ಟಣವಾದ ಬಂಕಾಪುರಕ್ಕೆ ಹೊಂದಿಕೊಂಡಿರುವ ಇದು ಚಿಕ್ಕದಾಗಿದ್ದರೂ ತನ್ನ ಚೊಕ್ಕತನದಿಂದ ಹೆಸರುವಾಸಿಯಾಗಿತ್ತು. ವಿಜಯನಗರ ಅರಸರ ಸಾಮ್ರಾಜ್ಯ ಮೆರೆಯುತ್ತಿದ್ದ ಕಾಲಕ್ಕೆ ಇದು ಅದರ ಅಧೀನಕ್ಕೊಳಪಟ್ಟ ಒಂದು ಮುಖ್ಯ ಆಡಳಿತ ಕೇಂದ್ರವಾಗಿತ್ತು. ರಾಜಧಾನಿ ಹಂಪೆಯಿಂದ ಗೋವೆಯ ಕಡೆಗೆ ಸಾಗಬೇಕಾದರೆ, ಬಾಡದಿಂದಲೇ ಹಾದುಹೋಗುವಂತೆ ಇದನ್ನು ಕೈಮರವನ್ನಾಗಿ ಮಾಡಿಕೊಂಡಿದ್ದರು. ಹಾಗಾಗಿ ಭಟ್ಕಳದಿಂದ ವಿಜಯನಗರಕ್ಕೆ ಅರಬ್ಬರ ಕುದುರೆಗಳು ಬಾಡ ಮಾರ್ಗವಾಗಿಯೇ ಸಾಗಿಬರುತ್ತಿದ್ದವು. ಪ್ರವಾಸಿಗರು, ವರ್ತಕರು, ಕಲಾಪ್ರೇಮಿಗಳು ತಮ್ಮ ದೂರಪ್ರಯಾಣದ ನಡುವೆ ಬಾಡವನ್ನು ಕಣ್ತುಂಬಿಕೊಳ್ಳುತ್ತಿದ್ದರು. ಅಷ್ಟರಮಟ್ಟಿಗೆ ಇದು ಜನಾಕರ್ಷಣೆಯ ಊರಾಗಿ ಹೆಸರು ಮಾಡಿತ್ತು.

ಕೌಟುಂಬಿಕ ಹಿನ್ನೆಲೆ

ಆ ಊರಿನ ನಾಯಕ 'ಬೀರಪ್ಪ'. ಅದು ಅವನ ಹುಟ್ಟು ಹೆಸರು. 'ಬೀರಪ್ಪನಾಯಕ' ಎಂಬುದು ಜನರು ತಮ್ಮ ಪ್ರೀತಿಯ ಗುರುತಾಗಿ ಕೊಟ್ಟ ಬಿರುದು. ಅವನು ಅಲ್ಲಿನ 'ಊರ ದಣ್ಣಾಯಕ'. ಅಂದರೆ 'ನಾಡಗೌಡ'. ಬಾಡ ಹಾಗೂ ಬಂಕಾಪುರ ಭಾಗದ ಒಟ್ಟು 78 ಗ್ರಾಮಗಳ ನಾಡಗೌಡಿಕೆ ಆತನದ್ದಾಗಿತ್ತು. ಅವನು ಅದಾಗಲೇ ತನ್ನ ವರ್ಚಸ್ವಿ ವ್ಯಕ್ತಿತ್ವದಿಂದಲೂ, ಪರಾಕ್ರಮದಿಂದಲೂ ವಿಜಯನಗರ ನಾಡರಸರಿಗೆ ಮೆಚ್ಚಿನವನಾಗಿದ್ದ. ವಿಶೇಷವೆಂದರೆ, ಅವನು ವೀರಭಂಟನಾಗಿದ್ದರೂ ಧರ್ಮಸಹಿಷ್ಣುವಾಗಿದ್ದ. ಈ ಮುಖ್ಯ ಗುಣಕ್ಕೆ ಮನಸೋತು ಅವನನ್ನು ಈ ಕೂಡುಹಳ್ಳಿಗಳಿಗೆ ದಣ್ಣಾಯಕನನ್ನಾಗಿ ನೇಮಿಸಿದ್ದರು. ಅದನ್ನು ಬೀರಪ್ಪ ಅತ್ಯಂತ ಜವಾಬ್ದಾರಿಯಿಂದ ನಿಭಾಯಿಸುತ್ತಿದ್ದ. ಅವನೊಬ್ಬ ದೂರದರ್ಶಿತ್ವ ಇದ್ದ ಕನಸುಗಾರ. ಬಾಡ–ಬಂಕಾಪುರಗಳನ್ನು ನಾಡಿನಲ್ಲೇ ಹೆಸರಾಂತ ಪಟ್ಟಣವಾಗಿಸಬೇಕೆಂಬ ಮಹತ್ವಾಕಾಂಕ್ಷೆ ಅವನದು.

ಬೀರಪ್ಪನಾಯಕ ಮತ್ತು ಅವನ ಪೂರ್ವಿಕರು ಹಾಲುಮತದ ಅಂಡೆ ಕುರುಬರು. ಒಂದು ಕಾಲದಲ್ಲಿ ಇಡೀ ಬಂಕಾಪುರ ಸಂಸ್ಥಾನದಲ್ಲೇ ಹೆಸರಾಗಿ ಬಾಳಿ ಬದುಕಿದವರು. ತನ್ನಜ್ಜನಿಗಿಂತ ಹಿಂದೆ ಅವರೆಲ್ಲ ತಮ್ಮ ಪ್ರಾಚೀನ ಕುಲಕಸುಬಾದ ಪಶುಪಾಲನೆಯನ್ನಷ್ಟೇ ಮಾಡುತ್ತ ಜೀವನ ಸಾಗಿಸುತ್ತಿದ್ದರು. "ಹಾಲು ಕೆಟ್ಟರೆ ಕೆಡಲಿ ; ಹಾಲುಮತದವರು ಕೆಡಬಾರದು" ಎಂಬ ನೀತಿಪಾಠವನ್ನು ಎಳವೆಯ ಕಾಲದಿಂದಲೇ ಕೇಳಿ ಬೆಳೆದವರು. ಏನೇ ಬಂದರೂ ಮರೆಮೋಸ ಮಾಡದಂತೆ ಬದುಕಬೇಕೆಂದು ಪಣತೊಟ್ಟು ಸಾಧಿಸಿದವರು.

ಕುರುಬರು ಮೂಲತಃ ಶಿವನ ಉಪಾಸಕರು. ಪಾಶುಪತ ಶೈವ ಕುಲಮೂಲದ ಶಾಕ್ತ ಪರಂಪರೆಗೆ ಒಲಿದವರು. ತಮ್ಮ ಸಹಜೀವಿಗಳಾದ ಕುರಿಬಳಗದ ಹಿಕ್ಕೆಗಳನ್ನೇ ಶಿವದೇವರ ಕೋಟಿಲಿಂಗಗಳೆಂದು ನಂಬಿ ಆರಾಧಿಸಿದವರು. ಶಿವದೇವರನ್ನು ಅವರ ಪರಿಪಕ್ವ ಮುಗ್ಧತೆಯಲ್ಲಿ ಕರೆಯುತ್ತಿದ್ದುದು 'ಬೀರಲಿಂಗ', 'ಬೀರದೇವ', 'ಬೀರಪ್ಪ'ನೆಂದು. ಬೀರಪ್ಪನ ಹೆಸರಿನಲ್ಲೇ ಅವರು ತಮ್ಮೆಲ್ಲ ಶುಭಕಾರ್ಯಗಳನ್ನು ಸರಳವಾಗಿ ನೆರವೇರಿಸುತ್ತಿದ್ದರು. ಕುರುಬರ ಪಾಳ್ಯದ ಕುಟುಂಬಗಳಲ್ಲಿ ಒಬ್ಬರ ಹೆಸರಾದರೂ 'ಬೀರಪ್ಪ' ಎಂದಾಗಿರುತ್ತಿದ್ದುದು ಕುಲದ ವಾಡಿಕೆ. ಅದೇ ವಾಡಿಕೆಯಂತೆ ಬಾಡದ ನಾಯಕನಿಗೂ 'ಬೀರಪ್ಪ'ನೆಂಬ ಹೆಸರು ನಾಮಕರಣವಾಯಿತು.

ಬೀರಪ್ಪನಾಯಕನು ಈ ಪ್ರತಿಷ್ಠಿತ ದಣ್ಣಾಯಕ ಹುದ್ದೆಯನ್ನು ಏರಿದ್ದು ಹಂತಹಂತವಾಗಿ. ಅವನ ಪರಿಶ್ರಮ, ಸತ್ಯಸಂಧತೆ, ಪ್ರಾಮಾಣಿಕತೆ ಅವನನ್ನು ತನ್ನ ವಂಶದಲ್ಲೆ ಅಪೂರ್ವವೆಂಬಂತೆ ಈ ಎತ್ತರಕ್ಕೆ ತಂದು ನಿಲ್ಲಿಸಿತ್ತು. ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ, ಯುದ್ಧವಿದ್ಯೆ ಹಾಗು ನ್ಯಾಯಶಾಸ್ತ್ರ ಅಧ್ಯಯನದ ಕಡೆಗೆ ಆಸಕ್ತಿ ತಳೆದು, ನೆರೆಹೊರೆಯವರಿಗಿಂತ ಭಿನ್ನವಾದ ದಾರಿ ತುಳಿದದ್ದೇ ಒಂದು ಕ್ರಾಂತಿ. ಇದೇ ಕ್ರಾಂತಿಕಾರಕ ಶ್ರದ್ಧೆ ಅವನನ್ನು ಹೊಸಮನುಷ್ಯನನ್ನಾಗಿ ರೂಪಾಂತರಿಸಿತು.

ಆ ಕಾಲದಲ್ಲಿ ವಿಜಯನಗರದ ನಾಡರಸರು ಪದೇಪದೇ ಕೈಗೊಳ್ಳುತ್ತಿದ್ದ ಯುದ್ಧಸಂದರ್ಭಗಳೇ ಅವನಿಗೆ ಹೊಸದೊಂದು ಅವಕಾಶವನ್ನು ಒದಗಿಸಿತು. ಆಗೆಲ್ಲ ಸ್ವಯಂ ಆಸಕ್ತಿಯಿಂದಲೋ, ಒತ್ತಾಯದಿಂದಲೋ ಸೈನ್ಯಕ್ಕೆ ಸೇರುತ್ತಿದ್ದ ಜನಸಂಖ್ಯೆ ಲೆಕ್ಕವಿಲ್ಲದಷ್ಟು. ಹಾಗೆ ಸೈನ್ಯಕ್ಕೆ ಸೇರಿದ ಈತ ಆ ಜನರಾಶಿಯಲ್ಲಿ ಸೇರಿಹೋಗದೆ, ತನ್ನ ವಿಶಿಷ್ಟ ಪರಾಕ್ರಮ ತೋರಿ ಅಂದಿನ ನಾಡದೊರೆಯ ಗಮನವನ್ನು ಸೆಳೆದ. ಅವನ ದಿಟ್ಟತನ ಮತ್ತು ನಾಯಕತ್ವ ಗುಣವನ್ನು ಕಣ್ಣಾರೆ ಕಂಡ ಅರಸ ಬೀರಪ್ಪನಿಗೆ 78 ಗ್ರಾಮಗಳ ಮೇಲುಸ್ತುವಾರಿಯನ್ನು ವಹಿಸಿಕೊಟ್ಟ.

ಹೊಸಮತ ಸ್ವೀಕಾರ

ಬೀರಪ್ಪನಾಯಕನಿಗೆ ತನ್ನನ್ನು ಈ ಸ್ಥಾನಕ್ಕೇರಿಸಿದ ಅರಸನ ಬಗ್ಗೆ ಎಲ್ಲಿಲ್ಲದ ಗೌರವ. ಹಾಗಾಗಿ ಆತ ತನ್ನ ರಾಜನಂತೆ ಕ್ರಮೇಣ ರಾಮಾನುಜರ ವಿಶಿಷ್ಟಾದ್ವೈತವನ್ನು ಅನುಸರಿಸಿದ. ಹಾಗೆಂದು ಆತ ಯಾವತ್ತೂ ತನ್ನ ಕುಲಬಾಂಧವರ ಮೇಲೆ ತಾನು ಸ್ವೀಕರಿಸಿದ ಹೊಸ ಮತವನ್ನು ಹೇರುವ ಪ್ರಯತ್ನ ಮಾಡಲಿಲ್ಲ. ಜೊತೆಗೆ, ಪೂರ್ವಿಕರ ಕಾಲದಿಂದಲೂ ನಂಬಿಕೊಂಡು ಬರುತ್ತಿದ್ದ ಶಿವಾರಾಧನೆಗೆ ಭೇದ ತೋರಲಿಲ್ಲ. ಆದ್ದರಿಂದ ಅವನಿಗೆ ವೈರಿಗಳು ಇರಲಿಲ್ಲ. ಆದರೆ, ಹಿಂದೊಮ್ಮೆ ಬೀರಪ್ಪನಾಯಕನ ಎದುರು ಪೈಪೋಟಿ ಮಾಡುತ್ತ ಸೋತ ಮಲ್ಲಣ್ಣನಾಯಕ ಎಂಬುವನು ಮಾತ್ರ ದ್ವೇಷ ಕಾರುತ್ತಿದ್ದ.

ಬೀರಪ್ಪನಾಯಕನು ಶ್ರೀವೈಷ್ಣವ ಮತದೀಕ್ಷೆ ತೆಗೆದುಕೊಂಡುದರ ಬೆನ್ನಹಿಂದೆ ಇನ್ನೆರಡು ವಿಶೇಷ ಕಾರಣಸ್ಫೂರ್ತಿಗಳಿದ್ದವು. ಒಂದು: ತನ್ನೂರಿನಲ್ಲಿ ಹೊಯ್ಸಳರ ಕಾಲದಿಂದಲೂ ಪೂಜೆಗೊಳ್ಳುತ್ತಿದ್ದ ಶ್ರೀರಂಗನಾಥಸ್ವಾಮಿ ಗುಡಿಯ ನಿತ್ಯಸಾನ್ನಿಧ್ಯ. ಇನ್ನೊಂದು: ತನ್ನ ಗೌರವಾನ್ವಿತ ಗೆಳೆಯರಾಗಿದ್ದ ಶ್ರೀನಿವಾಸಾಚಾರ್ಯರ ಸಾಹಚರ್ಯದಲ್ಲಿ ಒಡಮೂಡುತ್ತಿದ್ದ ಧರ್ಮಜಿಜ್ಞಾಸೆ.

ಇತ್ತ, ತಾನು ಸ್ವೀಕಾರ ಮಾಡಿದ ಹೊಸಧರ್ಮವು ಬೀರಪ್ಪನಾಯಕನಲ್ಲಿ ಹೊಸ ಉತ್ಸಾಹವನ್ನೇ ಮೂಡಿಸಿತು. ಮೊದಲೇ ದೈವಭಕ್ತನಾಗಿದ್ದ ಆತನಿಗೆ ಈಗೀಗ ಊರೊಟ್ಟಿನ ಎಲ್ಲ ಕೆಲಸ ಕಾರ್ಯಗಳೂ ಧರ್ಮದ ಹೆಸರಲ್ಲಿ ನಡೆಸುವ ಸೇವೆಗಳಾಗಿ ಕಾಣತೊಡಗಿದವು. ಇಂತಹ ಧಾರ್ಮಿಕ ಸೇವೆಯ ಭಾಗವಾಗಿ ಹರಿಕಥೆ-ಪ್ರವಚನಗಳು ಪ್ರತಿದಿನವೂ ನಡೆಯುವಂತೆ ಏರ್ಪಾಡು ಮಾಡಿದ. ಶಿಥಿಲಗೊಂಡ ಸಣ್ಣಪುಟ್ಟ ದೇವಸ್ಥಾನಗಳನ್ನು ಹುಡುಕಿ ಜೀರ್ಣೋದ್ಧಾರ ಮಾಡತೊಡಗಿದ. ಇವನ ಹೊಸಪ್ರಯತ್ನದ ಫಲವಾಗಿ ಕನಕಗಿರಿ, ಕದರಮಂಡಲಗಿಯ ದೇಗುಲಗಳು ಹೊಸ ಕಳೆ ಪಡೆದುಕೊಂಡು ಸಿಂಗಾರಗೊಂಡವು. ಬಾಡದ ರಂಗನಾಥಸ್ವಾಮಿ ಹಾಗೂ ಕಾಗಿನೆಲೆಯ ಲಕ್ಷ್ಮೀನರಸಿಂಹಮೂರ್ತಿ ದೇವಸ್ಥಾನಗಳ ಪುನರ್‌ನಿರ್ಮಾಣ ಕಾರ್ಯಕ್ಕೆ ಕೈಹಾಕಿದ. ಈವರೆಗೆ ಜನಸೇವೆಯ ಕಾರಣಕ್ಕಾಗಿ ಹೆಸರಾಗಿದ್ದ ನಾಯಕ ಈಗ ಜನರ ಮಧ್ಯೆ ಧರ್ಮಕಾರ್ಯಗಳ ಮೂಲಕವೂ ಜನಪ್ರಿಯ ನಾಯಕನಾದ.

ಈ ಭಾಗದ ಶ್ರೀವೈಷ್ಣವ ಮತಾನುಯಾಯಿಗಳ ಆರಾಧ್ಯದೈವ ತಿರುಪತಿಯ ವೆಂಕಟರಮಣ. ಸ್ಥಳೀಯವಾಗಿ ಆತ 'ತಿರುಪತಿ ತಿಮ್ಮಪ್ಪ'ನೆಂದೇ ಹೆಸರುವಾಸಿ. ಬೀರಪ್ಪನಾಯಕನು ಆಗಾಗ ತಿಮ್ಮಪ್ಪನ ದರ್ಶನಕ್ಕಾಗಿ ತಿರುಪತಿಗೆ ಹೋಗಿ ಬರುತ್ತಿದ್ದ. ಅದರ ಜ್ಞಾಪಕಾರ್ಥವಾಗಿ ಒಮ್ಮೆ ಅಲ್ಲಿಂದ ತಿಮ್ಮಪ್ಪನ ಮೂರ್ತಿಯೊಂದನ್ನು ತಂದು 'ಕುಮ್ಮೂರು' ಎಂಬಲ್ಲಿ ಕಿರುಗುಡ್ಡವೊಂದರ ಮೇಲೆ ತಿಮ್ಮಕೇಶವನ ಗುಡಿಯನ್ನೇ ನಿರ್ಮಿಸಿಕೊಟ್ಟ.

ಸಮಸುಖ-ಸಮದುಃಖ

'ಬಚ್ಚಮ್ಮ' ಬೀರಪ್ಪನಾಯಕನ ಮುದ್ದಿನ ಮಡದಿ. ದೂರದ ಕಾಗಿನೆಲೆ ಆಕೆಯ ತವರುಮನೆ. ಅದು ಮಲೆನಾಡಂಚಿನ ಕೊನೆಯ ಹಳ್ಳಿ. ತಕ್ಕಮಟ್ಟಿಗೆ ತೋಟ-ತುಡಿಕೆಯಿದ್ದ ಕುಟುಂಬದಿಂದ ಬಂದವಳು. ಆದರೆ, ಸಿರಿತನದ ಲವಲೇಶವೂ ಅರಿವಿಲ್ಲದವಳ ಹಾಗೆ ಬಡವರ ಜೊತೆಗೂಡಿ ದುಡಿಯುತ್ತಿದ್ದಳು ; ಅವರ ಒಡಲುರಿಗೆ ಎಡೆಬಿಡದೆ ಮಿಡಿಯುತ್ತಿದ್ದಳು. ಹಾಗಾಗಿ ಆಕೆ ಊರಿನ ಎಲ್ಲರ ಗೌರವ ಪ್ರೀತಿಗೆ ಪಾತ್ರಳಾಗಿದ್ದಳು.

ಕಷ್ಟಸುಖಗಳಲ್ಲಿ ಹೆಗಲಿಗೆ ಹೆಗಲು ಕೊಡುತ್ತಿದ್ದ ಬೀರಪ್ಪ-ಬಚ್ಚಮ್ಮರ ಬಾಳಿನಲ್ಲಿದ್ದದ್ದು ಒಂದೇ ಕೊರಗು. ಮಧ್ಯವಯಸ್ಸು ಹತ್ತಿರವಾಗುತ್ತಿದ್ದರೂ ತಮಗಿನ್ನೂ ಮಕ್ಕಳಾಗಲಿಲ್ಲವಲ್ಲ ಎಂಬುದು. ಸಕಲಭಾಗ್ಯವನ್ನು ಕೊಟ್ಟ ದೇವರು ಮಕ್ಕಳ ಭಾಗ್ಯವನ್ನೇಕೋ ಕರುಣಿಸಲಿಲ್ಲ ಎಂದು

ದುಃಖಿಸುತ್ತಿದ್ದರು. ಅದಕ್ಕಾಗಿ ಪ್ರತಿದಿನವೂ ಮೊರೆಯಿಡುತ್ತಾ, ದೇವರ ಮೇಲೆ ಭಾರಹಾಕಿ ಆಸೆಗಣ್ಣಲ್ಲೇ ಕಾಯುತ್ತಿದ್ದರು. ತಮ್ಮ ನೆಚ್ಚಿನ ದೈವ ತಿರುಪತಿ ತಿಮ್ಮಪ್ಪನಲ್ಲೂ ಮಕ್ಕಳ ಫಲಕ್ಕಾಗಿ ಹರಕೆ ಹೊತ್ತರು. ಹೀಗಿರುವಾಗ ಭಕ್ತ ದಂಪತಿಗಳ ಪ್ರಾರ್ಥನೆ ದೇವರಿಗೆ ಕೇಳಿತು ಎಂಬಂತೆ ನಿಸರ್ಗಸಹಜವಾಗಿ ಬಚ್ಚಮ್ಮ ಗರ್ಭ ಧರಿಸಿದಳು. ಮದುವೆಯಾಗಿ ಎಷ್ಟೋ ವರ್ಷಗಳ ತರುವಾಯ ಸೃಷ್ಟಿಯಾದ ಈ ಆನಂದಮಯ ಕ್ಷಣಕ್ಕೆ ಹರ್ಷಚಿತ್ತರಾದರು.

ಮಗ ಹುಟ್ಟಿದ

ಅದು ಶಾಲಿವಾಹನ ಶಕ 1410ರ ವರ್ಷ(ಕ್ರಿ.ಶ 1488). ಬಚ್ಚಮ್ಮ ಗಂಡುಕೂಸಿಗೆ ಜನ್ಮ ನೀಡಿದಳು. ಸಂತಾನಹೀನವಾಗಿ ಕಳೆಗುಂದಿದ್ದ ಕತ್ತಲಮನೆಗೆ ರತ್ನದ ದೀಪವಿಟ್ಟ ಹಾಗೆ ಮನೆ ಬೆಳಗುವ ಕಂದ ಹುಟ್ಟಿದ. ದಂಪತಿಗಳು ಈ ಮಗು ತಿರುಪತಿ ತಿಮ್ಮಪ್ಪನ ಕಾರುಣ್ಯದ ವರಪ್ರಸಾದವೆಂದೇ ಭಾವಿಸಿದರು. ಅದಕ್ಕಾಗಿ ಮಗುವಿಗೆ 'ತಿಮ್ಮಪ್ಪ'ನೆಂದು ನಾಮಕರಣ ಮಾಡಿದರು. ದಂಪತಿಗಳ ಸಂತೋಷಕ್ಕೆ ಪಾರವೇ ಇರಲಿಲ್ಲ.

ಬಾಲ್ಯ–ಆಟ–ಪಾಠ

ಬೀರಪ್ಪ–ಬಚ್ಚಮ್ಮರ ಸುಖ ಸಂಸಾರದ ನಡುವೆ ತಿಮ್ಮಪ್ಪನಿಗೆ ಐದಾರು ವರ್ಷಗಳು ತುಂಬಿದವು. ಎಳೆತನದ ಮುಗ್ಧತೆಯ ಕಾಲ ಕಳೆದು ತುಂಟಾಟದ ಬಾಲ್ಯ ಕಾಲಿಟ್ಟಿತು. ಬೀರಪ್ಪನಾಯಕನಿಗೆ ಮಗನನ್ನು ವಿದ್ಯಾವಂತನನ್ನಾಗಿಸಬೇಕೆಂಬ ಕನಸು. ಅವನಿಗೆ ಗುರುಮುಖೇನ ಸರಿಯಾದ ಸಂಸ್ಕಾರ ಕೊಡಿಸಬೇಕೆಂಬ ಹಂಬಲ. ತಾನು ಪಾಳೇಗಾರನೆಂಬ ಭಯಕ್ಕೆ ವಿದ್ಯೆ ಕಲಿಸಲು ಮುಂದಾಗುವ ಮಂದಿಯೇನೂ ಸಾಕಷ್ಟು ಇದ್ದರು. ಆದರೆ ಅದೇಕೋ ಈ ರೀತಿ ಭಯದ ನೆರಳಲ್ಲಿ ವಿದ್ಯೆ ಕಲಿಸುವುದು ಅವನಿಗೆ ಇಷ್ಟವಿರಲಿಲ್ಲ. ಪ್ರೀತಿ ಬೆರೆಸಿ ಉಣಿಸದ ವಿದ್ಯೆ ನಿರರ್ಥಕವೆಂದೇ ಅವನ ಭಾವನೆ. ಅವನಿಗಿದು ಅನುಭವ ಕಲಿಸಿದ ದೊಡ್ಡ ಪಾಠ. ಆದ್ದರಿಂದ ಕೊನೆಗೆ ತನ್ನ ಆಡಳಿತ ಸಂದರ್ಭದ ಗೆಳೆಯ ಬಂಕಾಪುರದ ಶ್ರೀನಿವಾಸಾಚಾರ್ಯ ಅವರ ಬಳಿ ಶಿಕ್ಷಣಕ್ಕೆ ಮಗನನ್ನು ಸೇರಿಸಿದ.

ಶ್ರೀನಿವಾಸಾಚಾರ್ಯರು ತಿಮ್ಮಪ್ಪನಿಗೆ ಪ್ರತಿದಿನ ಮುಂಜಾನೆ ಹಾಗೂ ಸಂಜೆ ಹಲವು ಬಗೆಯ ಜ್ಞಾನಪಾಠಗಳನ್ನು ಕಲಿಸತೊಡಗಿದರು. ಅರ್ಥಶಾಸ್ತ್ರ, ಧರ್ಮಸೂಕ್ತ, ತರ್ಕ–ಮೀಮಾಂಸೆ–ಛಂದಸ್ಸು–ವ್ಯಾಕರಣ ಶಾಸ್ತ್ರಗಳನ್ನು ಬಾಯಿಪಾಠ ಮಾಡಿಸಿದರು. ರಾಮಾಯಣ, ಮಹಾಭಾರತ, ಭಾಗವತ ಮೊದಲಾದ ಕಾವ್ಯಪುರಾಣಗಳ ಕಥೆಯನ್ನು ವಿವರವಾಗಿ ಹೇಳಿಕೊಡುತ್ತಿದ್ದರು.

ಹುಡುಗ ಪಾಠ ಕಲಿಯುವುದರಲ್ಲಿ ಆಸಕ್ತಿ ತೋರುತ್ತಿದ್ದ. ವ್ಯಾಕರಣ–ಛಂದಸ್ಸು, ವೇದ–ಆಗಮ ಮುಂತಾದ ಶಾಸ್ತ್ರಭಾಗಗಳನ್ನು ಅಭ್ಯಾಸ ಮಾಡಿದ. ಒಮ್ಮೊಮ್ಮೆ ಅದರ ಏಕತಾನತೆ ಹಾಗೂ ಗೊಡ್ಡು ಪಾರಾಯಣ ಅವನಿಗೆ ಹಿಡಿಸುತ್ತಿರಲಿಲ್ಲ. "ಇದನ್ನೆಲ್ಲ ಯಾತಕ್ಕಾಗಿ

ಕಲಿಯಬೇಕು" ಎಂದು ಆಗಾಗ ಮನಸ್ಸಿನಲ್ಲಿ ಪ್ರಶ್ನಿಸಿಕೊಳ್ಳುತ್ತಿದ್ದ. ಕೆಲವೊಮ್ಮೆ ಗುರುಗಳ ಹತ್ತಿರವೂ ಪ್ರಶ್ನೆ ಮಾಡುತ್ತಿದ್ದ. ಅಂಥ ಸಂದರ್ಭಗಳಲ್ಲಿ ಗುರುಗಳು ಎಲ್ಲದರ ಜ್ಞಾನ ಸಂಪಾದಿಸಿದರೆ ಲಭಿಸುವ ಅನುಕೂಲಗಳನ್ನು ಬಿಡಿಸಿ ಹೇಳುತ್ತಿದ್ದರು.

ತಿಮ್ಮಪ್ಪನಿಗೆ ಕಥೆಗಳೆಂದರೆ ಪಂಚಪ್ರಾಣ. ಕಾವ್ಯ, ಪುರಾಣ, ಜನಪದ – ಹೀಗೆ ನಾನಾ ಮೂಲಗಳ ಕಥಾಶ್ರವಣದ ಮೂಲಕ ಕಥನ ಕುತೂಹಲವನ್ನು ಇಮ್ಮಡಿಸಿಕೊಂಡಿದ್ದ. ಜೊತೆಗೆ ಒಮ್ಮೊಮ್ಮೆ ಅವನು ಸ್ಥಳದಲ್ಲೇ ಕಥೆ ಕಟ್ಟುತ್ತಿದ್ದ ; ತಾಳ ಲೆಕ್ಕಾಚಾರ ಹಾಕಿ ತತ್ವಪದ ಕಟ್ಟಿ ಹಾಡುತ್ತಿದ್ದ. ಗುರುಗಳಂತೂ ಕಣ್ಣಿಗೆ ಕಂಡ ವಿಚಾರಗಳನ್ನು ಕುರಿತು ಪದಕಟ್ಟುವ ತಿಮ್ಮಪ್ಪನ ಭಾಷಾಪ್ರಭುತ್ವ ಮತ್ತು ಕಲ್ಪನಾಶಕ್ತಿಗೆ ಬೆರಗಾಗುತ್ತಿದ್ದರು. ಅವನ ಲೋಕನಿರೀಕ್ಷಣೆ ಮತ್ತು ಸೂಕ್ಷ್ಮಮನಸ್ಸನ್ನು ಬಹುವಾಗಿ ಮೆಚ್ಚಿಕೊಳ್ಳುತ್ತಿದ್ದರು.

ಕಾವ್ಯಪಾಠವೆಂದರೆ ಅವನಿಗೆ ಇನ್ನಿಲ್ಲದ ಸ್ಫೂರ್ತಿ. ಅದರಲ್ಲೂ ಪ್ರೇಮಕಾವ್ಯಗಳೆಂದರೆ ಮೈಮನಗಳನ್ನೆಲ್ಲ ತೆರೆದು ಆಲಿಸುತ್ತಿದ್ದ. ವಯಸ್ಸಿಗೆ ಸಹಜವೆಂಬಂತೆ ನಳ–ದಮಯಂತಿ, ದುಷ್ಯಂತ–ಶಕುಂತಲೆ, ಅಭಿಮನ್ಯು–ಶಶಿರೇಖ, ಸುಧನ್ವ–ಪ್ರಭಾವತಿಯರ ಪ್ರೇಮೋಪಾಖ್ಯಾನಗಳ ವ್ಯಾಖ್ಯಾನಕ್ಕೆ ಮಾರುಹೋಗುತ್ತಿದ್ದ. ಗುರುಗಳು ಇಂಥ ಕಥೆಗಳನ್ನು ಪಂಚತಂತ್ರ, ಬೃಹತ್ಕಥೆ, ಮಹಾಭಾರತಗಳಿಂದ ಆಯ್ದು ಸ್ವಾರಸ್ಯವಾಗಿ ಹೇಳಿಕೊಡುತ್ತಿದ್ದರು. ವಿಶೇಷವೆಂಬಂತೆ ರಾಮಾಯಣ, ಮಹಾಭಾರತ, ಭಾಗವತ, ವಿಷ್ಣುಪುರಾಣದ ಒಳಗಿನ ವರ್ಣನೆಗಳು ಅವನನ್ನು ಬೇರೊಂದು ಪ್ರಪಂಚಕ್ಕೆ ಸೆಳೆದೊಯ್ಯುತ್ತಿದ್ದವು. ಜೀವಪರಿಸರದ ಪ್ರೇಮ, ದಯಾಗುಣ, ಕಾರುಣ್ಯಪೂರ್ಣ ಪ್ರಸಂಗಗಳನ್ನು ಕವಿಗಳು ನಿರ್ವಹಿಸಿರುವ ಬಗೆಯನ್ನು ವಿಸ್ಮಯದಿಂದ ಅಭ್ಯಾಸ ಮಾಡುತ್ತಿದ್ದ.

ಬಂಕಾಪುರ, ಕಾಗಿನೆಲೆ, ಕನಕಗಿರಿ, ಕದರಮಂಡಲಗಿ, ಇಂಗಳಗೊಂದಿ ಮುಂತಾದ ಕಡೆಗಳಲ್ಲೆಲ್ಲ ಹಬ್ಬ ಉತ್ಸವಗಳ ಕಾಲದಲ್ಲಿ ಕಾವ್ಯ–ಧರ್ಮ ಪ್ರವಚನ ಸಮ್ಮೇಳನಗಳು ನಡೆಯುತ್ತಿದ್ದವು. ಅಂಥ ಕಡೆ ತಿಮ್ಮಪ್ಪ ಪಾಲ್ಗೊಂಡು ಕಾವ್ಯವಾಚನದ ಸವಿ ಸವಿಯುತ್ತಿದ್ದ. ಕನ್ನಡ ಭಾರತ, ಜೈಮಿನಿ ಭಾರತ, ತೊರವೆ ರಾಮಾಯಣ, ಜಗನ್ನಾಥ ಪುರಾಣಗಳನ್ನು ಕೇಳಿಸಿಕೊಳ್ಳುತ್ತ ತೃಪ್ತನಾಗುತ್ತಿದ್ದ. ಅದರಲ್ಲೂ ಕುಮಾರವ್ಯಾಸನ ಭಾರತಕಥೆಯನ್ನು ಕೇಳುತ್ತಿದ್ದಂತೆ ಮೈಮನಸ್ಸುಗಳಲ್ಲಿ ಮಿಂಚಿನ ಹೊಳೆ ಹರಿದಾಡಿದಂತಹ ಅನುಭವ. ಕಲಿಯುಗವನ್ನೇ ದ್ವಾಪರವಾಗಿಸುತ್ತಿದ್ದ ಅಲ್ಲಿನ ಪಾತ್ರಗಳು 'ಭಕ್ತಿ'ಯ ಅಲೌಕಿಕ ಅನುಭವವನ್ನು ತಂದುಕೊಡುತ್ತಿದ್ದವು.

ತಿಮ್ಮಪ್ಪ ಹತ್ತಾರು ವರ್ಷಗಳ ಕಾಲ ಗುರುಮಠದಲ್ಲಿ ಹಲಬಗೆಯ ಜ್ಞಾನ ಸಂಪಾದನೆ ಮಾಡಿಕೊಂಡ. ಅವನಿಗೀಗ ತನ್ನ ಸುತ್ತಲಿನ ಸಮಾಜದ ರೀತಿನೀತಿಗಳು, ಮೇಲುಕೀಳುಗಳು ಅರಿವಾಗತೊಡಗಿದವು. ಅದರ ಪರಿಣಾಮ ಧರ್ಮ ಕರ್ಮಗಳ ಜಿಜ್ಞಾಸೆ ಅವನನ್ನು ಆಗಾಗ ಕಾಡುತ್ತಿತ್ತು.

ಅವನಿಗೆ ಮಹಾಭಾರತದ ಏಕಲವ್ಯ ಮತ್ತು ಕರ್ಣನ ಕಥೆಗಳು ಮನ ಕಲಕಿದವು. ಕಾಡಿನ ಮುಗ್ಧ ಹುಡುಗ ಏಕಲವ್ಯ ಮಾಡಿದ ತಪ್ಪಾದರೂ ಯಾವುದು? ಬಿಲ್ವಿದ್ಯೆ ಕಲಿತದ್ದೇ ತಪ್ಪೇ? ವಿದ್ಯೆ ಅನ್ನುವುದು ಯಾರೋ ಒಬ್ಬಿಬ್ಬರ ಸ್ವತ್ತೇ? ತಪ್ಪೇ ಮಾಡದ ಪ್ರತಿಭಾಶಾಲಿಗೆ ರಕ್ತಕಾಣಿಕೆ ಬೇಡುವ ಶಿಕ್ಷೆಯೇ? ಇದರ ಹಿಂದಿರುವ ಮನಸ್ಸಿನ ಕೊಳಕು ಎಂತಹುದು? ಮುಂತಾಗಿ ಆಲೋಚಿಸುತ್ತಿದ್ದ. ಕರ್ಣನ ಕರುಣಾಜನಕ ಕಥೆಯಂತೂ ಅವನೊಳಗೆ ಹಲವು ಬಗೆಯ ವಿಚಾರ ತರಂಗಗಳನ್ನು ಮೂಡಿಸುತ್ತಿತ್ತು. ಉತ್ತಮ ಕುಲದವನಲ್ಲ ಅನ್ನುವ ಏಕೈಕ ಕಾರಣಕ್ಕಾಗಿ ಅವನು ಪಡುವ ಪಾಡು, ಕುಲಹೀನನೆಂಬ ಅವಮಾನ, ಬಂಧುಗಳೆದುರೇ ಹೋರಾಡಬೇಕಾದಾಗ ಅವನಿಗುಂಟಾದ ಯಾತನೆ – ಮುಂತಾದ ಸಂಗತಿಗಳು ಕಾಡುತ್ತಿದ್ದವು.

ಈ ನಡುವೆ, ಕಾವ್ಯಶಾಸ್ತ್ರ ಪಾಠದ ಜೊತೆಗೆ ಆಡಳಿತ ನಿರ್ವಹಣೆಗೆ ಸಂಬಂಧಿಸಿದ ಜ್ಞಾನಕೌಶಲ ಕಲಿಸಲು ನಾಯಕನಿಂದ ಆಚಾರ್ಯರಿಗೆ ಸಲಹೆ ಬಂತು. ಅದರನ್ವಯ ಪರಿಣತರನ್ನು ನೇಮಿಸುವ ಕೆಲಸವಾಯಿತು. ತನ್ನ ಮಗ ತನಗಿಂತ ದೊಡ್ಡ ಪಾಳೇಗಾರನಾಗಿ ಮೆರೆಯಬೇಕೆಂಬುದು ಬೀರಪ್ಪನ ಆಸೆಯಾಗಿತ್ತು. ಆಡಳಿತ ನಿರ್ವಹಣೆಗೆ ಬೇಕಾದ ಜಾಣ್ಮೆ, ಆ ಜಾಣ್ಮೆಗೆ ತಕ್ಕ ದೈಹಿಕ ಸಾಮರ್ಥ್ಯ, ಅದರೊಟ್ಟಿಗೆ ಮಾನಸಿಕ ದೃಢತೆಯನ್ನು ತಂದುಕೊಡುವ ತರಬೇತಿಗೆ ವ್ಯವಸ್ಥೆ ಮಾಡಿದ. ಕ್ಷತ್ರಿಯೋಚಿತ ವಿದ್ಯೆಗಳನ್ನು ಕರಗತ ಮಾಡಿಕೊಳ್ಳುವಂತೆ ಮಗನಿಗೆ ಕಿವಿಮಾತು ಹೇಳಿದ.

ಬಾಲ್ಯದಿಂದಲೇ ಯುದ್ಧದಾಟದ ಅಭಿಮಾನಿಯಾಗಿದ್ದ ತಿಮ್ಮಪ್ಪ ವೀರತ್ವದ ವಿದ್ಯೆಯನ್ನು ಕಲಿಯಲು ಸರ್ವಸನ್ನದ್ಧನಾದ. ಪರಿಣತ ಗುರುಗಳಿಂದ ಅಂಗಸಾಧನೆ, ಕತ್ತಿವರಸೆ, ಕುದುರೆಸವಾರಿ, ಬಿಲ್ವಿದ್ಯೆ – ಮೊದಲಾದ ಸಮರ ಕಲೆಗಳನ್ನು ಕರಗತ ಮಾಡಿಕೊಳ್ಳತೊಡಗಿದ. ಇದೆಲ್ಲ ಅವನಿಗೆ ನೀರು ಕುಡಿದಷ್ಟೇ ಸಲೀಸೆನಿಸಿ, ಆತ ಕಲಿಯುವ ವೇಗಕ್ಕೆ ಕಲಿಸುವವರೇ ಬೆರಗಾದರು. ಸತತ ಪರಿಶ್ರಮದಿಂದಾಗಿ ಉತ್ತಮ ದೇಹದಾರ್ಢ್ಯ ಪಡೆದನಲ್ಲದೆ, ತುಂಬು ತಾರುಣ್ಯದ ಕಲಿಯಾಗಿ ಗುಂಪಿನ ನಡುವೆ ಗುರುತಾಗತೊಡಗಿದ.

ಅಪ್ಪನ ಅಗಲಿಕೆ

ತಿಮ್ಮಪ್ಪನ ಕಲಿಕೆಯೆಲ್ಲ ಮುಗಿಯುವ ಹಂತಕ್ಕೆ ಬಂದಿತು. ಅದೇ ಹೊತ್ತಿಗೆ ಸರಿಯಾಗಿ ಬಾಡದಲ್ಲಿ ಯಾವುದೋ ಸಣ್ಣ ವಿಚಾರಕ್ಕೆ ಮಲ್ಲಣ್ಣನಾಯಕನ ಮಂದಿಗೂ, ಅಪ್ಪನ ಮಂದಿಗೂ ಮಧ್ಯೆ ಜಗಳವಾಗಿತ್ತು. ಅಲ್ಲಿಂದ ಗುರುಗಳ ಕೃಪಾಶೀರ್ವಾದ ಪಡೆದು ಪುರಕ್ಕೆ ಮರಳಿದ. ಮಲ್ಲಣ್ಣ ಸುದ್ದಿತಿಳಿದು ತಲೆಮರೆಸಿಕೊಂಡಿದ್ದ. ಬೀರಪ್ಪನಾಯಕ ಕುಸಿದು ಬಿದ್ದು ಹಾಸಿಗೆ ಹಿಡಿದಿದ್ದ. ಹಾಗೆ ಹಾಸಿಗೆ ಹಿಡಿದ ಅಪ್ಪ ಮತ್ತೆ ಮೇಲೇಳಲೇ ಇಲ್ಲ. ವಯೋಸಹಜ ದಣಿವು ಹಾಗೂ ಶರೀರವನ್ನು ಮುತ್ತಿದ ಕಾಯಿಲೆಗಳಿಂದಾಗಿ ದಿನಕಳೆದಂತೆ ಕೃಶನಾಗುತ್ತ ಹೋದ. ಎಷ್ಟು ತರಹದ ಮದ್ದು ಮಾಡಿದರೂ ಬೀರಪ್ಪ ಚೇತರಿಸಿಕೊಳ್ಳಲೇ ಇಲ್ಲ.

ಒಂದು ದಿನ ಹೆಂಡತಿ–ಮಗನನ್ನೂ, ಆಪ್ತರನ್ನೂ ಕರೆದು ಕಣ್ಣುಕೀಲಿಸಿ ನೋಡುತ್ತಲೇ ಪ್ರಾಣಬಿಟ್ಟ. ನೆಚ್ಚಿನ ನಾಯಕನ ಅಗಲಿಕೆಯ ದುಃಖ ಮುಗಿಲುಮುಟ್ಟಿತು.

ತಿಮ್ಮಪ್ಪನಿಗೆ ಆ ದುಃಖವನ್ನು ಅರಗಿಸಿಕೊಳ್ಳಲಾಗಲಿಲ್ಲ. ಅಪ್ಪ ಇಲ್ಲದ ಲೋಕ ಅವನಿಗೆ ಶೂನ್ಯವಾಗಿ ಕಾಡತೊಡಗಿತು. ಮೊದಲ ಆಟ, ಮೊದಲ ಪಾಠ, ಮೊದಲ ಬೇಟೆ – ಹೀಗೆ ಎಲ್ಲದಕ್ಕೂ ಅಪ್ಪನೇ ಮೊದಲ ಗುರುವಾಗಿದ್ದ. ಅಪ್ಪ ಇನ್ನಿಲ್ಲವೆಂದಾಗ ಮನಸ್ಸಿಗೆ ಅತೀವ ಸಂಕಟವಾಯಿತು. ಬದುಕಿನಲ್ಲಿ ಮೊದಲ ಬಾರಿಗೆ ಒಬ್ಬಂಟಿಯಾದ ಅನುಭವವಾಯಿತು.

ಇದೇ ಸಮಯವನ್ನು ಹೊಂಚು ಹಾಕುತ್ತಿದ್ದವರ ಹಾಗೆ, ಬಾಡ ಸಂಸ್ಥಾನದ ಮೇಲೆ ಅಕ್ಕಪಕ್ಕದ ವೈರಿಪಡೆಯ ಮಾಂಡಳಿಕರು ದಾಳಿಮಾಡುವ ಯೋಜನೆ ಸಿದ್ಧಪಡಿಸುತ್ತಿದ್ದರು. ಬಹಳ ಹಿಂದಿನಿಂದಲೂ ಮುಖ್ಯ ವ್ಯಾಪಾರಕೇಂದ್ರವಾಗಿದ್ದ ಬಾಡದ ಮೇಲೆ ಬೆಳಗಾವಿ ಮಾಂಡಲಿಕನ ಕಣ್ಣು ಕೇಂದ್ರೀಕೃತವಾಗಿತ್ತು. ಅದಾಗ ತಾನೆ ಅಧಿಕಾರಕ್ಕೆ ಬಂದಿದ್ದ ಹೊಸ ನಾಡರಸ ಕೃಷ್ಣದೇವರಾಯ ಇದರ ಸೂಚನೆ ಅರಿತು ಯುದ್ಧ ಘೋಷಿಸಿದ. ಗೋವೆಯ ಕಡೆಯಿಂದ ಬಾಡವನ್ನು ಮುತ್ತುವ ಸಂಭವ ಹೆಚ್ಚಾಗಿದ್ದುದರಿಂದ ತಿಮ್ಮಪ್ಪನನ್ನು ಈ ಭಾಗದ ದಣ್ಣಾಯಕನನ್ನಾಗಿ ನೇಮಿಸಲಾಯಿತು. ಜೊತೆಗೆ, ಮೈಯೆಲ್ಲ ಕಣ್ಣಾಗಿ ಸೇನೆಯನ್ನು ಮುನ್ನಡೆಸುವ ಸಲುವಾಗಿ ವಿಶೇಷ ಜವಾಬ್ದಾರಿ ವಹಿಸಲಾಯಿತು. ಈಗ ತಿಮ್ಮಪ್ಪ ತಿಮ್ಮಪ್ಪನಾಯಕನಾದ.

ತಿಮ್ಮಪ್ಪನನ್ನು ದಣ್ಣಾಯಕನನ್ನಾಗಿ ನೇಮಿಸಿದ್ದು ಮಲ್ಲಣ್ಣನಾಯಕನ ಎದೆಗೆ ಕೊಳ್ಳಿ ಇಟ್ಟಂತಾಯಿತು. ಆದರೆ ಅವನ ವಿರುದ್ಧ ನಡೆಸಿದ ಮಸಲತ್ತುಗಳು ಫಲ ಕೊಡಲಿಲ್ಲ. ಹೊಸ ಅರಸನಿಗೆ ಖೊಟ್ಟಿ ಯಾವುದು ಬಂಗಾರ ಯಾವುದು ತಿಳಿದುಹೋಗಿತ್ತು. ಮಲ್ಲಣ್ಣ ಮನಸ್ಸಿಲ್ಲದ ಮನಸ್ಸಿನಿಂದಲೇ ಯುದ್ಧದಲ್ಲಿ ತೊಡಗಿಕೊಂಡ. ಕೊನೆಗೆ, ಇನ್ನು ದ್ವೇಷ ಸಾಧಿಸಿ ಫಲವಿಲ್ಲವೆಂಬ ನಿರ್ಧಾರಕ್ಕೆ ಬರತೊಡಗಿದ. ತಿಮ್ಮಪ್ಪ ಕೂಡ ಹೇಳಿಕೇಳಿ ಹಟ ಸಾಧಿಸುವ ಚಾಳಿಯವನಲ್ಲ. ಹಾಗಾಗಿ ಅವರಿಬ್ಬರ ನಡುವಿನ ದ್ವೇಷ ಮರೆಯಾಯಿತು.

ಯುದ್ಧ ಹತ್ತಿರವಾಯಿತು. ತಿಮ್ಮಪ್ಪನಾಯಕ ಸಕಲ ತಯಾರಿಗಳೊಂದಿಗೆ ಸಜ್ಜಾದ. ಅದಕ್ಕಾಗಿ ತನ್ನ ಪ್ರಾಂತ್ಯದ ಸೈನಿಕರಿಗೆ ಬಗೆಬಗೆಯಲ್ಲಿ ಉತ್ತೇಜನ ನೀಡಿದ. ಅವನ ಪ್ರೋತ್ಸಾಹ ಮತ್ತು ಸ್ಫೂರ್ತಿಯ ನುಡಿ ಕೇಳಿ ಪ್ರತಿಯೊಬ್ಬರೂ ವೀರಾವೇಶದಿಂದ ಹೋರಾಡುವ ಸಂಕಲ್ಪ ತೊಟ್ಟರು. ಮನೆಮನೆಗಳಲ್ಲಿ ಹೆಂಡತಿ–ಮಕ್ಕಳು, ತಂದೆ–ತಾಯಿಯರ ವೇದನೆಯ ಕಣ್ಣೀರ ನಡುವೆಯೂ ಅವರೆಲ್ಲ ಯುದ್ಧಮುಖಿಯಾದರು.

ಯುದ್ಧ ಜರುಗಿತು. ವಿಜಯನಗರ ಅರಸರ ಸೈನ್ಯದ ಸಂಖ್ಯಾಬಲ ಮತ್ತು ಅದರ ಶಿಸ್ತಿಗೆ ವೈರಿ ಪಾಳೆಯದವರು ದಂಗಾಗಿ ಹೋದರು. ಮೂರು ದಿನಗಳ ಕಾಲ ನಡೆದ ಯುದ್ಧದಲ್ಲಿ

ವಿಜಯನಗರದ ಕಡೆಯವರಿಗೆ ಜಯಲಕ್ಷ್ಮಿ ಒಲಿದಳು. ಈ ಯುದ್ಧದಲ್ಲಿ ತಿಮ್ಮಪ್ಪನಾಯಕನ ನೇತೃತ್ವದಲ್ಲಿ ವೀರಾವೇಶ ತೋರಿದ ಸೈನಿಕರು ಉತ್ತಮ ಪ್ರದರ್ಶನ ನೀಡಿ ಯುದ್ಧವೀರರ ಗಮನ ಸೆಳೆದರು. ಅವರ ಉತ್ಸಾಹ, ಎದೆಗಾರಿಕೆ, ಕತ್ತಿವರಸೆ, ಕುದುರೆ–ಆನೆಗಳನ್ನು ಪಳಗಿಸಿ ಬಳಸಿದ ರೀತಿ ವಿಜಯನಗರದ ಉದ್ದಕ್ಕೂ ಮನೆಮಾತಾಯಿತು. ಅರಸನಿಗೆ ಇದರಿಂದ ಸಂತೋಷವಾಯಿತು.

ನಾಯಕತ್ವ

ತಿಮ್ಮಪ್ಪನಾಯಕನಿಗೆ ಇಪ್ಪತ್ತರ ಪ್ರಾಯ. ಸದೃಢಕಾಯದ ತರುಣ ; ಅಷ್ಟೆತ್ತರದ ಆಜಾನುಬಾಹು. ತಂದೆಯ ತುಂಬು ಗಾಂಭೀರ್ಯ, ವೀರ–ದಾನಗುಣ ಮೇಳೈಸಿದಂತಹ ವ್ಯಕ್ತಿತ್ವ, ತಾಯಿಯ ದೈವಶ್ರದ್ಧೆ, ನಿಷ್ಕಲ್ಮಷ ಭಕ್ತಿ–ತ್ಯಾಗಬುದ್ಧಿ ಅವನಲ್ಲಿ ರಕ್ತಗತವಾಗಿ ಹರಿದಿತ್ತು. ತಾಯಿಯ ಮಾರ್ಗದರ್ಶನದಲ್ಲಿ ತಂದೆಯ ಜವಾಬ್ದಾರಿಯನ್ನು ಅತ್ಯಂತ ಕಾಳಜಿಯಿಂದ ಮುಂದುವರೆಸತೊಡಗಿದ. ಯುದ್ಧದಲ್ಲಿ ಜಯಶಾಲಿಯಾಗಿ ಬಂದ ಅವನಿಗೆ ಸುತ್ತಮುತ್ತಲ ಪಾಳೇಗಾರರು ವಿಶೇಷ ಗೌರವ ಕೊಡುತ್ತಿದ್ದರು.

ತಿಮ್ಮಪ್ಪನಾಯಕ 'ದಣ್ಣಾಯಕ ಹುದ್ದೆ ಇರುವುದು ಪ್ರಜೆಗಳ ಸೇವೆಗಾಗಿ' ಎಂಬ ನಂಬಿಕೆಯವನು. ಬಡಬಗ್ಗರನ್ನು ಕಂಡರೆ ಅವನಿಗೆ ವಿಶೇಷ ಅನುಕಂಪ, ಗೌರವ. ದುಡಿಮೆಗಾರರ ಶ್ರಮಶಕ್ತಿಯ ಅರಿವು ಅವನಿಗಿತ್ತು. ಆದರೆ ಅದೇ ದುಡಿಮೆಗಾರರು ಮಾರಿ–ಚೌಡಿ ಮುಂತಾದ ಸಕಲೆಂಟು ದೇವರುಗಳನ್ನು ಕಟ್ಟಿಕೊಂಡು ಮೂಢನಂಬಿಕೆಯಿಂದ ಹಾಳಾಗುತ್ತಿರುವ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಿದ್ದ. ಹಾರುವರು ಒಂದು ರೀತಿಯಲ್ಲಿ ಮೂಢರಾಗಿ ನಡೆದುಕೊಂಡರೆ, ಶೂದ್ರರು ಹಲವು ರೀತಿಯಲ್ಲಿ ಮೌಢ್ಯಕ್ಕೆ ದಾಸರಾಗುತ್ತಿರುವುದು ಬೇಸರದ ವಿಚಾರವಾಗಿತ್ತು. ಅದನ್ನು ಆಗಾಗ ಹಾಡುಗಳ ರೂಪದಲ್ಲಿ ತಿಳಿಸುತ್ತಿದ್ದ.

ಹೀಗೆ ತಂದೆಯ ಹೆಸರುಳಿಸುವಂತೆ ಅತ್ಯಂತ ನಿಷ್ಠೆಯಿಂದ ಆತ ರಾಜಕಾರ್ಯ ನೆರವೇರಿಸುತ್ತಿದ್ದ. ಒಮ್ಮೆ ಬಾಡದಲ್ಲಿ ತಂದೆಯ ಕಾಲದಿಂದ ನನೆಗುದಿಗೆ ಬಿದ್ದಿದ್ದ ಶ್ರೀರಂಗನಾಥಸ್ವಾಮಿ ದೇವಸ್ಥಾನ ನಿರ್ಮಾಣಕ್ಕಾಗಿ ನೆಲವನ್ನು ಅಗೆಸುತ್ತಿದ್ದ. ಆಗ ಇದ್ದಕ್ಕಿದ್ದಂತೆ ಅಗೆಯುತ್ತಿದ್ದ ಹಾರೆಗೆ ಯಾವುದೋ ಲೋಹದ ಘನವಸ್ತು ತಾಕಿದ ಸದ್ದಾಯಿತು. ಅದೇ ನೇರಕ್ಕೆ ಅಗೆಸಿ ನೋಡಿದಾಗ ಅಲ್ಲಿ ದೊಡ್ಡ ದೊಡ್ಡ ಏಳು ಕೊಪ್ಪರಿಗೆಗಳು ದೊರೆತವು. ಅಷ್ಟೂ ಕೊಪ್ಪರಿಗೆಗಳನ್ನು ತೆಗೆದು ನೋಡಿದಾಗ ಬಂಗಾರದ ನಾಣ್ಯಗಳು–ಒಡವೆಗಳು ತುಂಬಿಕೊಂಡಿದ್ದವು.

ತಿಮ್ಮಪ್ಪನಾಯಕ ಇದರಿಂದ ಸಂತಸಗೊಂಡ. ಅಲ್ಲಿ ಸಿಕ್ಕ ಹೊನ್ನನ್ನು ವೃಥಾ ದುಂದುವೆಚ್ಚ ಮಾಡದೆ ಜನಸೇವೆಗೆ ಮುಡಿಪಾಗಿಡಬೇಕೆಂದು ತೀರ್ಮಾನಿಸಿದ. ದೇವರು ಕೊಟ್ಟ ಸಂಪತ್ತನ್ನು

ದೇವರ ಪ್ರತಿರೂಪಗಳಾದ ಬಡಬಗ್ಗರಿಗೆ ಹಂಚುವುದೇ ನ್ಯಾಯವೆಂದು ನಿರ್ಧರಿಸಿದ. ಅದರಲ್ಲಿ, ದೀನದಲಿತರ ಕಲ್ಯಾಣಕ್ಕಾಗಿ ಒಂದು ಭಾಗ ; ದೇಗುಲನಿರ್ಮಾಣ, ಜೀರ್ಣೋದ್ಧಾರ, ಪ್ರತಿಷ್ಠಾಪನೆ ಮುಂತಾದ ದೇವರ ಕೆಲಸಕ್ಕಾಗಿ ಒಂದು ಭಾಗ ; ಸಾಲುಮರ, ಕೆರೆಕಟ್ಟೆ, ಉದ್ಯಾನ ಇತ್ಯಾದಿ ಪಟ್ಟಣಾಭಿವೃದ್ಧಿಗಾಗಿ ಒಂದು ಭಾಗ ಮತ್ತು ಊರಿನ ಹಬ್ಬ-ಜಾತ್ರೆ-ಉತ್ಸವಗಳಿಗೆ ಹಾಗೂ ಅನ್ನಸಂತರ್ಪಣೆಗೆ ಒಂದು ಭಾಗದಂತೆ ವಿಂಗಡಿಸಿ, ಅದರಂತೆ ಜನಸೇವೆಗೆ ವಿನಿಯೋಗಿಸಿದ.

ಅಷ್ಟೂ ಹೊನ್ನನ್ನು ಸ್ವಾರ್ಥವಿಲ್ಲದೆ ಸಾರ್ವಜನಿಕ ಸೇವೆಗಾಗಿ ಮೀಸಲಿರಿಸಿ ವಿನಿಯೋಗ ಮಾಡಿದ್ದು ತಿಮ್ಮಪ್ಪನಾಯಕನ ವ್ಯಕ್ತಿತ್ವವನ್ನು ಉತ್ತುಂಗಕ್ಕೇರಿಸಿತು. ಹೀಗೆ ಅವನು ಸುತ್ತಮುತ್ತಲ ಪ್ರಾಂತ್ಯಗಳಲ್ಲಿ ಮತ್ತೊಮ್ಮೆ ಮನೆಮಾತಾದನು. ಬಾಡ-ಬಂಕಾಪುರದ ಜನರಂತೂ ಬಂಗಾರದ ಹಂಗಿಲ್ಲದ ತಮ್ಮ ನಾಯಕನನ್ನು ಎದೆತುಂಬಿ 'ಕನಕಪ್ಪ', 'ಕನಕನಾಯಕ' ಎಂದು ಬಣ್ಣಿಸಿ ಕರೆಯತೊಡಗಿದರು. ಬರಬರುತ್ತ ತಿಮ್ಮಪ್ಪ, ತಿಮ್ಮನಾಯಕ, ತಿಮ್ಮರಸ ಎಂಬ ಹೆಸರು ಹಿಂದೆಬಿದ್ದು, ಜನರ ನಡುವೆ 'ಕನಕನಾಯಕ'ನಾಗಿ ಜನಪ್ರಿಯಗೊಂಡ.

ಇದೇ ಹೊತ್ತಿನಲ್ಲಿ ದಕ್ಷಿಣದ ಶ್ರೀರಂಗಪಟ್ಟಣದಲ್ಲಿ ದಂಗೆಯೊಂದು ಎದ್ದಿತು. ಈ ದಂಗೆಯನ್ನು ಅಡಗಿಸುವ ಸಂಬಂಧ ನಾಡರಸ ಕೃಷ್ಣದೇವರಾಯನಿಂದ ಆದೇಶ ಬಂದಿತು. ಅದರಂತೆ ಕನಕನಾಯಕ ಸುಸಜ್ಜಿತ ಸೈನಿಕರ ತಂಡವೊಂದನ್ನು ಕಟ್ಟಿಕೊಂಡು ಶ್ರೀರಂಗಪಟ್ಟಣದ ಕಡೆಗೆ ಹೊರಟ. ಅಲ್ಲಿನ ದಂಗೆಯನ್ನು ಶಿವನಸಮುದ್ರದ ತನಕ ಬೆನ್ನತ್ತಿ ಯಶಸ್ವಿಯಾಗಿ ಹತ್ತಿಕ್ಕಿದ. ಅನಂತರ ಉಮ್ಮತ್ತೂರಿನ ಪಾಳೇಗಾರ ಗಂಗರಾಜನ ವಿರುದ್ಧದ ಯುದ್ಧದಲ್ಲಿ ಜಯ ತಂದಿತ್ತು, ಕೃಷ್ಣದೇವರಾಯನ ಮನಸ್ಸಿನಲ್ಲಿ ಮನೆ ಮಾಡಿದ.

ಮಗ ಕನಕ ಹೀಗೆ ವಾರಾನುಗಟ್ಟಲೆ ಮನೆಬಿಟ್ಟು ಯುದ್ಧದಲ್ಲಿ ತೊಡಗಿಕೊಂಡಿದ್ದಾಗ ತಾಯಿ ಬಚ್ಚಮ್ಮನಿಗೆ ಒಂಟಿತನ ಕಾಡತೊಡಗಿತು. ಈ ಅಸಹನೀಯ ಏಕಾಂತದಲ್ಲಿ ಆಕೆ ಮಗನ ಭವಿಷ್ಯದ ಬಗ್ಗೆ ಸುದೀರ್ಘವಾಗಿ ಯೋಚಿಸತೊಡಗಿದಳು. ಅವನಿಗೆ ಸಂಸಾರದ ನೊಗವನ್ನು ಸಾಧ್ಯವಾದಷ್ಟು ಬೇಗ ಕಟ್ಟುವುದೊಂದೇ ಪರಿಹಾರವೆಂದು ನಿರ್ಧರಿಸಿದಳು.

ಕಾವ್ಯಕನ್ನಿಕೆಯ ಸಾಂಗತ್ಯ

ಅದರಂತೆ ಮಗ ಶ್ರೀರಂಗಪಟ್ಟಣದಿಂದ ವಾಪಾಸಾಗುತ್ತಲೇ ಅವನನ್ನು ಮದುವೆಗೆ ಒಪ್ಪಿಸಿದಳು. ಆಕೆ ತನ್ನ ತವರೂರಿನಲ್ಲೇ ಇದ್ದ ಹತ್ತಿರದ ಸಂಬಂಧದಲ್ಲಿ ಹೆಣ್ಣನ್ನು ನೋಡಿ ಮಾತುಕತೆ ನಡೆಸಿದಳು. ಬಚ್ಚಮ್ಮನ ಸೋದರಿಕೆ ಸಂಬಂಧದ ಆ ಹುಡುಗಿ ಹೆಸರು ಲಕ್ಷ್ಮೀದೇವಿ. ಊರಿನವರೆಲ್ಲರೂ ಪ್ರೀತಿಯಿಂದ 'ಲಚ್ಚಿ' ಎಂದು ಕರೆಯುತ್ತಿದ್ದರು. ಅವಳೊಂದಿಗೆ ಕನಕನಾಯಕನ ಮದುವೆ ಸಂಭ್ರಮ ಸಡಗರದಿಂದ ಜರುಗಿತು. ಆತನ ಬಂಧುಗಳು, ವಿದ್ಯಾಗುರುಗಳು, ಗುರುಮಠದ ಗೆಳೆಯರು, ಸುತ್ತಮುತ್ತಲ ಪಾಳೇಗಾರರು ಎಲ್ಲರೂ ಆ ಮದುವೆಯಲ್ಲಿ ಭಾಗವಹಿಸಿ ಹರಸಿದರು.

ಮದುವೆಯ ದಿನದ ಸಂಜೆ ಹಾಲುಮತ ಸಂಪ್ರದಾಯದ ರಿವಾಜಿನಲ್ಲಿ ಡೊಳ್ಳುಕುಣಿತ ಏರ್ಪಾಡಾಗಿತ್ತು. ಆ ಆಸುಪಾಸಿನ ಹತ್ತಿಪ್ಪತ್ತು ಊರುಗಳ ಡೊಳ್ಳಿನ ಮೇಳಗಳು, ವೀರಗಾರ ಪದದವರು ಬಂದು ಸೇರಿದ್ದರು. ಒಬ್ಬೊಬ್ಬರು ಒಂದೊಂದು ಶೈಲಿಯಲ್ಲಿ ಪದ ಹಾಡುತ್ತ ಡೊಳ್ಳು ಬಾರಿಸುತ್ತಿದ್ದರೆ ನೆಲಮುಗಿಲೇ ಒಂದಾಗಿ ಕುಣಿದ ಅನುಭವ. ಕನಕನಾಯಕನೂ ಸಂದರ್ಭದ ಸ್ಫೂರ್ತಿವಶನಾಗಿ ಒಂದು ಹದವಾದ ಡೊಳ್ಳನ್ನು ಹೆಗಲೇರಿಸಿ ಕುಣಿಯುತ್ತ ಬಾರಿಸಿದ. ಬಗೆಬಗೆಯ ಭಾವಭಂಗಿಗಳಲಿ ಕುಣಿಕುಣಿದು ವೀರಮಂಡಿಯೂರಿ, ಭ್ರಮರಿಯಲ್ಲಿ ತಿರುತಿರುಗಿ ಬಡಿಯತೊಡಗಿದ. ಅಲ್ಲಿ ಕಿಕ್ಕಿರಿದು ಸೇರಿದ್ದ ಸಾವಿರಾರು ಕಣ್ಣುಗಳ ಒಳಗೆ ಅವನ ಡೊಳ್ಳುಕುಣಿತದ ಲಾಸ್ಯವು ವಿವಿಧ ಲಯವಿನ್ಯಾಸಗಳಲ್ಲಿ ತಕಧಿಮಿತವಾಡಿತು. ಆಗ ಕನಕನಾಯಕನ ಕವಿಮನಸ್ಸಿನಲ್ಲಿ ಒಂದು ಹಾಡು ಹುಟ್ಟಿದ್ದು ಹೀಗೆ:

ದ್ಯಾವಿ ನಮ್ಮ ದ್ಯಾವರು ಬಂದರು ಬನ್ನೀರೆ
ನೋಡ ಬನ್ನೀರೆ

ಕೆಂಗಣ್ಣ ಮೀನನಾಗಿ ನಮ ರಂಗ
ಗುಂಗಾಡು ಸೋಮನ ಕೊಂದಾನ್ಯಾ
ಗುಂಗಾಡು ಸೋಮನ ಕೊಂದು ವೇದವನು
ಬಂಗಾರದೊಡಲಿಗಿತ್ತಾನ್ಯಾ...

ಸಿಟ್ಟಿಂದ ಸಿಂಹನಾಗಿ ನಮ ರಂಗ
ಹೊಟ್ಟೆಯ ಕರುಳ ಬಗೆದಾನ್ಯಾ
ಹೊಟ್ಟೆಯ ಕರುಳ ಹಾರವ ಮಾಡಿ
ಪುಟ್ಟಗೆ ವರವ ಕೊಟ್ಟಾನ್ಯಾ...

ಡೊಳ್ಳಿನ ಮ್ಯಾಲ್ ಕೈ ಭರಮಪ್ಪ ಹಾಕ್ಯಾನು
ತಾಳವ ಶಿವನಪ್ಪ ತಟ್ಟ್ಯಾನ್ಯಾ
ಒಳ್ಳೊಳ್ಳೆ ಪದಗಳ ಹನುಮಪ್ಪ ಹಾಡ್ಯಾನು
ಚೆಲುವ ಕನಕಪ್ಪ ಕುಣಿದಾನ್ಯಾ...

– ಇದು ವಿಷ್ಣುವಿನ ದಶಾವತಾರವನ್ನು ಹೊಸಬಗೆಯಲ್ಲಿ ಬಣ್ಣಿಸುತ್ತದೆ.

ಲಕ್ಷ್ಮೀದೇವಿಯ ಮುಗ್ಧ ಚೆಲುವು ಮತ್ತು ನಿರ್ಮಲ ನಗು ಅವನನ್ನು ಬಹು ಮೋಹಗೊಳಿಸಿತು. ಅವಳ ಆ ನಗುವಿನಲ್ಲಿ ಕನಕನಾಯಕ ನೂರೆಂಟು ಬಣ್ಣಗಳ ಶೃಂಗಾರ ರಸಕಾವ್ಯವನ್ನೇ ಕಂಡುಕೊಂಡನು. ಅನಂತರ 'ಸುಜ್ಞಾನವಧೂಟಿ' ಎಂಬ ಕಾವ್ಯನಾಮದಲ್ಲಿ ಅವಳನ್ನು ಆರಾಧಿಸತೊಡಗಿದನು. ಅಷ್ಟೇ ಅಲ್ಲ, ಮುಂದೆ ತಾನು ರಚಿಸಿದ ಶೃಂಗಾರ ಕಾವ್ಯಗಳ ಅಂತರಂಗದ ನಾಯಕಿಯಾಗಿಸಿಕೊಂಡನು. ಹೀಗೆ ದಿನದಿನದ ಸಹಜ ಖುಷಿಯಲ್ಲಿ ಅವರ ಸಂಸಾರ–ಕಾವ್ಯಸಂಸಾರ ಸಾಗಿತ್ತು.

ಕನಕನಾಯಕನ ಕರ್ತವ್ಯಕುಶಲತೆ, ದೈವಭಕ್ತಿ, ತ್ಯಾಗಬುದ್ಧಿ, ಪರಾಕ್ರಮ. ಕವಿತಾಸಾಮರ್ಥ್ಯ ಮುಂತಾದ ಗುಣಗಳಿಂದಾಗಿ ಅವನ ಕೀರ್ತಿ ಹಬ್ಬತೊಡಗಿತು. ಜನಗಳು ಅಭಿಮಾನದಿಂದ ಅವನನ್ನು ದಾನಶೂರನೆಂದೂ, ಮಹಾಭಕ್ತನೆಂದೂ ನಾನಾಪರಿಯಲ್ಲಿ ಕರೆಯತೊಡಗಿದರು. ಕನಕನ ಜನಪ್ರಿಯತೆಯ ಸುದ್ದಿಗೆ ರೆಕ್ಕೆಪುಕ್ಕಗಳು ಮೂಡಿ ನಾಡರಸ ಕೃಷ್ಣದೇವರಾಯನನ್ನು ಮುಟ್ಟಿತು. ಅವನು ಕೊಪ್ಪರಿಗೆ ಹೊನ್ನನ್ನು ಜನಸೇವೆಗೆ ಬಳಸಿದ್ದು, ದಂಗೆಗಳಲ್ಲಿ ವಿನೂತನ ಶೌರ್ಯ ಮೆರೆದದ್ದು, ಹಾಡುಕಟ್ಟಿ ಜನರಲ್ಲಿ ಜಾಗರೂಕತೆ ತುಂಬಿದ್ದು ಮನೆಮಾತಾದವು. ಇದರಿಂದ ಖುಷಿಗೊಂಡ ಅರಸನು ಕನಕನನ್ನು ಸದ್ಯದಲ್ಲೇ ನಡೆಯಲಿರುವ ನವರಾತ್ರಿ ಉತ್ಸವಕ್ಕೆ ಆಹ್ವಾನಿಸಿದನು. ಕನಕನಾಯಕ ಈ ವಿಶೇಷ ಆಹ್ವಾನವನ್ನು ಮನ್ನಿಸಿ ಅತೀವ ಸಂತೋಷದಿಂದಲೇ ಹೊರಟನು. ತನ್ನ ತಾಯಿ, ಹೆಂಡತಿ ಹಾಗೂ ಪರಿವಾರ ಸಮೇತನಾಗಿ ಸಕಲ ಸಿದ್ಧತೆಯೊಂದಿಗೆ ರಾಜಧಾನಿಯನ್ನು ತಲುಪಿದನು.

ವಿಜಯದಶಮಿ – ಇದು ವಿಜಯನಗರದ ಚಕ್ರವರ್ತಿಗಳಿಗೆ ಒಂದು ಪ್ರತಿಷ್ಠೆಯ ಮಹೋತ್ಸವ. ಇದನ್ನು ಸ್ಥಳೀಯವಾಗಿ 'ನವಮಿ', 'ಮಾರ್ನವಮಿ' ಎಂದೇ ಕರೆದು ಹಬ್ಬ ಆಚರಿಸುತ್ತಾರೆ. ಈ ಹಬ್ಬವು ಹತ್ತುದಿನಗಳ ಕಾಲ ಆಚರಣೆಯಲ್ಲಿರುತ್ತದೆ. ಇದನ್ನು ವೈಭವೋಪೇತವಾಗಿ ಆಚರಿಸುವುದರ ಮೂಲಕ ಚಕ್ರವರ್ತಿಗಳು ತಮ್ಮ ಪ್ರತಿಷ್ಠೆ, ಗೌರವ, ದರ್ಪ, ಅಧಿಕಾರವನ್ನು ಪ್ರವಾಸಿಗರು ಹಾಗೂ ಸಾಮಂತರೆದುರು ಪ್ರದರ್ಶಿಸುತ್ತಾರೆ. ಜೊತೆಗೆ ರಾಜ್ಯದ ನಾನಾ ಭಾಗಗಳಲ್ಲಿನ ಕುಂದುಕೊರತೆಗಳ ವಿಚಾರಣೆ, ಕಪ್ಪಕಾಣಿಕೆಗಳ ಸಂಗ್ರಹಣೆ, ಸೈನ್ಯಶಕ್ತಿ ಪ್ರದರ್ಶನ, ಧರ್ಮ–ಕಲೆ–ಸಾಹಿತ್ಯಾದಿ ವಿವಿಧ ಕಲಾಪ್ರೋತ್ಸಾಹವೇ ಮೊದಲಾದ ಅನೇಕ ಉದ್ದೇಶಗಳಿಂದ ಇದನ್ನೊಂದು ಉತ್ಸವನ್ನಾಗಿ ಆಚರಿಸುತ್ತಾರೆ.

ಈ ಉತ್ಸವಕ್ಕೆ ಆಗಮಿಸಿದ ಕನಕನಾಯಕನ ಪರಿವಾರ ಹತ್ತು ದಿನಗಳ ಕಾಲ ರಾಜಧಾನಿಯಲ್ಲಿ ಸುತ್ತಾಡಿತು. ಈ ಹತ್ತೂ ದಿನಗಳು ಅರಮನೆಯ ಮುಂದಿನ ವಿಶಾಲವಾದ ಬಯಲಿನಲ್ಲಿ ಸಾಮ್ರಾಜ್ಯದ ವಿವಿಧ ಭಾಗಗಳಿಂದ ಬಂದ ಅನೇಕ ಬಗೆಯ ಕಲಾವಂತರ ಸಂಗೀತ, ನೃತ್ಯ, ಕುಸ್ತಿ ಮುಂತಾದ ಕಾರ್ಯಕ್ರಮಗಳು ಜರುಗಿದವು. ಜೊತೆಗೆ ಆನೆ–ಕುದುರೆಗಳ ಕಸರತ್ತಿನ ಮೋಡಿ, ಗಾಯಕ–ಗಾಯಕಿಯರ ಇಂಪಾದ ಹಾಡುಗಾರಿಕೆ, ದೊಂಬರು–ಗೊಂಬಿರಾಮರ ವಿಶೇಷ ಕಲಾದರ್ಶನ, ಕಥೆಗಾರರ ಕಥಾಕಾಲಕ್ಷೇಪ, ಕವಿ–ಗಮಕಿಗಳ ಕಾವ್ಯವಾಚನ ಮೊದಲಾದ ಕಾರ್ಯಕ್ರಮಗಳು ನಡೆದವು. ಈ ಕಾರ್ಯಕ್ರಮಗಳು ಹಗಲೆಲ್ಲ ನಡೆಯುವುದರ ಜೊತೆಗೆ ರಾತ್ರಿ ಹೊತ್ತು ಕೂಡ ಅಸಂಖ್ಯಾತ ಪಂಜಿನ ಬೆಳಕಿನಲ್ಲಿ ನಡೆಯುವುದು ವಿಶೇಷವಾಗಿತ್ತು.

ಹೀಗೆ ಉತ್ಸವದ ಕೊನೆಯ ವಿಜಯದಶಮಿಯ ದಿನ ಆಶ್ಚರ್ಯಕರವೆಂಬಂತೆ ಘಟನೆಯೊಂದು ಜರುಗಿತು. ಅಂದಿನ ಒಡ್ಡೋಲಗಕ್ಕೆ ಚಕ್ರವರ್ತಿ ಕೃಷ್ಣದೇವರಾಯ ಕನಕನನ್ನು ಕರೆಸಿಕೊಂಡನು. ಅಲ್ಲಿ ತನ್ನ ಅಸಂಖ್ಯಾತ ಸಾಮಂತರೆದುರು ಆತನಿಗೆ ಬಾಡ-ಬಂಕಾಪುರ ನಾಡಿನ ಮಾಂಡಳಿಕ ಅಧಿಕಾರವನ್ನು ಘೋಷಿಸಿದನು. ಅದಕ್ಕೆ ತಕ್ಕ ಉಡುಪು ಮತ್ತು ದಂಡಾಧಿಕಾರ ಸೂಚಕ ರತ್ನಖಚಿತ ಖಡ್ಗವನ್ನೂ ನೀಡಿದನಲ್ಲದೆ, 'ಕನಕನಾಯಕ' ಎಂಬ ಜನತಾ ಬಿರುದನ್ನು ಅಧಿಕೃತಗೊಳಿಸಿದನು.

ಅನಂತರ ಕನಕ ನಾಲ್ಕಾರು ದಿನ ರಾಜಧಾನಿಯಲ್ಲಿ ಉಳಿದು ಅಲ್ಲಿನ ಎಲ್ಲ ಕೆರೆಕಟ್ಟೆಗಳನ್ನು, ಅರಮನೆ ಕಟ್ಟಡಗಳನ್ನು, ದೇವಾಲಯಗಳನ್ನು ನೋಡಿಕೊಂಡು ಬಾಡಕ್ಕೆ ಹಿಂದಿರುಗಿದನು. ತನ್ನ ಮೆಚ್ಚಿನ ರಾಜ ಹಾಗೂ ರಾಜಧಾನಿಯ ಸಂದರ್ಶನ ಆತನ ಸೂಕ್ಷ್ಮ ಕವಿಚೇತನಕ್ಕೆ ಅಪೂರ್ವ ಸಂವೇದನೆಯನ್ನೇ ಸೃಷ್ಟಿಸಿಕೊಟ್ಟಿತು. ವಿಜಯನಗರದ ವೈಭವದಾಚೆ ತಾನು ಕಂಡ ಜನಜೀವನದ ವೈವಿಧ್ಯಮಯ ರಾಗರಸಭಾವಗಳ ಚಿತ್ರಗಳು ಅವನ ಹೃದಯದಲ್ಲಿ ಕರಗಿ ನೆಲೆ ನಿಂತವು. ತಾನು ನಂಬಿದ ಆದಿಕೇಶವ ದೈವ, ತನ್ನ ಕುಲಮೂಲದ ಶಿವಧರ್ಮ, ತನ್ನ ಮೇಲೆ ನಂಬಿಕೆಯಿಟ್ಟು ಸತ್ಕರಿಸಿದ ರಾಜ, ಕಾವ್ಯದ ಮೂಲಸ್ಫೂರ್ತಿ ವಧೂಟಿ – ಎಲ್ಲವೂ ಸೇರಿ ಕಥೆ ತನ್ನ ಆಕೃತಿಯನ್ನು ತೋರತೊಡಗಿತು. ಈ ಕಥಾಹಂದರಕ್ಕೆ ತಾನು ಹುಟ್ಟಿಬೆಳೆದ ನಾಡಿನ ಜೀವನಸಂಸ್ಕೃತಿಯನ್ನೂ, ಸಿರಿಗನ್ನಡ ನುಡಿಯ ಬೆಡಗನ್ನೂ, ರಸಾಲಂಕಾರದ ಮೆರುಗನ್ನೂ ತೊಡಿಸಬೇಕೆಂಬ ಆಕಾಂಕ್ಷೆ ತೀವ್ರವಾಯಿತು. ಹಾಗೆ ಹೊಳೆದ ಮೂಲಕಥೆಯ ಮೇಲೆ ಕಾವುಕುಳಿತು ಮುಂದಿನ ದಿನಗಳಲ್ಲಿ ಸಂಗಾತಿ ಸುಜ್ಞಾನ ವಧೂಟಿಗೆ ಸಂಬೋಧಿಸಿ ರಚಿಸಿದ ಮಹಾಕಾವ್ಯವೇ 'ಮೋಹನ ತರಂಗಿಣಿ'.

ಅವಿರತ ನಾಡಸೇವೆ

ವಿಜಯನಗರ ಚಕ್ರವರ್ತಿಯಿಂದ ಮಾಂಡಳಿಕ ಅಧಿಕಾರವನ್ನು ಪಡೆದು ಬಂದ ಕನಕನಾಯಕನಿಗೆ ಬಂಕಾಪುರದಲ್ಲಿ ಭವ್ಯಸ್ವಾಗತ ದೊರಕಿತು. ಕನಕನಾಯಕನು ಜನಸೇವೆಯನ್ನು ಜನಾರ್ದನ ಸೇವೆಯೆಂದೇ ತಿಳಿದನು. ತನ್ನ ನಾಡಿನ ಜನ-ಜಾನುವಾರುಗಳಿಗೆ ಯಾವ ಕಾಲದಲ್ಲೂ ಅನ್ನ-ನೀರಿನ ಮಟ್ಟಿಗೆ ಬರ ಸೋಂಕಬಾರದೆಂಬುದು ಅವನ ಉದ್ದೇಶ. ಅದಕ್ಕಾಗಿ ಆಯಕಟ್ಟಿನ ಜಾಗಗಳಲ್ಲಿ ಕೆರೆ-ಕಟ್ಟೆಗಳನ್ನು ಕಟ್ಟಿಸಿ ತೋಪು-ಬಯಲುಗಳನ್ನು ಬೆಳೆಸಲು ಆದೇಶಿಸಿದ. ತನ್ನ ಆಡಳಿತದ ವ್ಯಾಪ್ತಿಗೆ ಬರುವ ಹಲವು ಕಡೆ ಧರ್ಮಛತ್ರಗಳನ್ನು ಹಾಗೂ ಗುಡಿಗುಂಡಾರಗಳನ್ನು ನಿರ್ಮಿಸಿದ. ಹೊರಗಿನಿಂದ ಬರುವವರಿಗೆ ತನ್ನೂರು ಸುಂದರವಾಗಿ ಕಾಣಬೇಕೆಂದು ಸಾಲುಮರಗಳನ್ನು, ಕೂಡುರಸ್ತೆಗಳನ್ನು, ಸೇತುವೆಗಳನ್ನು ನಿರ್ಮಿಸತೊಡಗಿದ. ತನ್ನ ತಂದೆ ಕೈಗೊಂಡು, ಅರ್ಧದಲ್ಲೇ ನಿಂತಿದ್ದ ಕಾರ್ಯ-ಯೋಜನೆಗಳನ್ನು ಸಂಪೂರ್ಣಗೊಳಿಸಿದ. ಈ ಮಧ್ಯೆ ಬೀರಪ್ಪನಾಯಕನ ಅಗಲಿಕೆಯಿಂದ ಮಂಕಾಗಿದ್ದ ಜನರು, ಅವನ ತದ್ರೂಪವಾಗಿದ್ದ ಕನಕನಲ್ಲಿ ತಮ್ಮ ನಾಯಕನನ್ನು ಕಂಡು ಸಂತೋಷಗೊಂಡರು.

ಹೀಗೆ ದಕ್ಷತೆ ಹಾಗೂ ಪರಾಕ್ರಮದಿಂದ ಜನಮನ್ನಣೆ ಗಳಿಸುತ್ತ ಹೋದ ಕನಕನಾಯಕ ತನ್ನ ಮೂಲತುಡಿತಗಳಾದ ಕಾವ್ಯ-ಗಾಯನ ಪ್ರೀತಿ ಹಾಗೂ ತಾತ್ವಿಕ ಚರ್ಚಾಗೋಷ್ಠಿಯನ್ನು ಮರೆಯಲಿಲ್ಲ.

ಅವನ ಪ್ರತಿಭೆಯ ದ್ಯೋತಕವಾಗಿ ರಸಿಕತನ, ಮಾತುಗಾರಿಕೆ ತಾನೇತಾನಾಗಿ ವಿಜೃಂಭಿಸಿ ಹತ್ತಿರವಿದ್ದವರನ್ನು ಆಕರ್ಷಿಸುತ್ತಿತ್ತು. ಯಕ್ಷಗಾನ ಬಯಲಾಟಗಳನ್ನು ಏರ್ಪಡಿಸಿ ಭಾಗವಹಿಸುವ, ಡೊಳ್ಳು ಕುಣಿತದಲ್ಲಿ ಪಾಲುಗೊಳ್ಳುವ, ದೇವರ ಉತ್ಸವ-ಜಾತ್ರೆಗಳಲ್ಲಿ ಸಕ್ರಿಯವಾಗುವ ಮೂಲಕ ಇತರರಿಗೂ ದೊಡ್ಡ ಪ್ರೇರಣೆಯನ್ನು ಒದಗಿಸುತ್ತಿದ್ದ. ಹೀಗೆ ನಾನಾ ರೀತಿಯಲ್ಲಿ ಸಮಕಾಲೀನ ಕಾವ್ಯಗಳ, ಪುರಾಣ ಪುಣ್ಯಕತೆಗಳ, ಸಂಗೀತ ಶಾಸ್ತ್ರಗಳ ಅಭ್ಯಾಸ ನಿರಂತರವಾಗಿ ಸಾಗಿತ್ತು.

ಕನಕನಾಯಕನ ದೈವಭಕ್ತಿಯೂ ಅಪೂರ್ವವಾದುದಾಗಿತ್ತು. ನಿತ್ಯ ನಿರಂತರ ಆತ ದೇವರ ಜೊತೆಯಲ್ಲಿ ಏಕಾಂತದಲ್ಲಿ ವ್ಯವಹರಿಸುವ ಹವ್ಯಾಸ ಬೆಳೆಸಿಕೊಂಡಿದ್ದ. ನಿಸರ್ಗದ ನಿಗೂಢಗಳ ಬಗ್ಗೆಯಂತೂ ಅವನಿಗೆ ಅಪರಿಮಿತ ಅಚ್ಚರಿ. ಅವನ ನಿತ್ಯಜೀವನದ ಸಂಗಾತಿಯಾಗಿ ಕಾವ್ಯಸಂಗೀತ ಹಾಗೂ ದೈವವು ಸದಾ ಅವನೊಂದಿಗೆ ಬಿಟ್ಟಿರಲಾರದಂತೆ ಇರುತ್ತಿತ್ತು.

ಸಾವು-ನೋವು

ಕನಕನಾಯಕ ತನ್ನ ತಾಯಿ ಹಾಗೂ ಮುದ್ದಿನ ಮಡದಿಯೊಂದಿಗೆ ಸುಖ ಮತ್ತು ನೆಮ್ಮದಿಯಲ್ಲಿ ಹಲವು ವರ್ಷ ಕಳೆದ. ಈ ನಡುವೆ ನಲ್ಮೆಯ ಮಡದಿ ಗಂಡುಮಗುವಿಗೆ ಜನ್ಮಕೊಟ್ಟಳು. ಮನೆ ಹರುಷ ರಸದ ಬೀಡಾಯಿತು. ಹಸುಮಗುವಿನ ತುಂಟ ನಗುವಿನಿಂದಾಗಿ ಮನೆಯಲ್ಲಿ ಆನಂದಜ್ಯೋತಿ ತುಂಬಿ ತುಳುಕಿತು. ಆದರೆ ಈ ಹರುಷ ಹೆಚ್ಚುಕಾಲ ಉಳಿಯಲಿಲ್ಲ. ಕನಕನಾಯಕನ ಇಂತಹ ಸುಖ ಮತ್ತು ನೆಮ್ಮದಿಯ ಬದುಕಿನಲ್ಲಿ ಕಾಲನ ಕಣ್ಣಾಮುಚ್ಚಾಲೆ ಆಟ ಶುರುವಾಯಿತು. ಒಂದರ ಹಿಂದೆ ಒಂದರಂತೆ ಸಾಲುಸಾಲಾಗಿ ಸಾವಿನ ಸರಮಾಲೆ ಆತನ ಮನೆಕದವ ತಟ್ಟಿತು.

ಸಂಸಾರ ಸುಖಸಾಗರದಲ್ಲಿ ಸಾಗಿರುತ್ತ, ಒಂದು ದಿನ ತನ್ನ ಮಮತಾಮಯಿ ತಾಯಿ ತೀರಿಕೊಂಡಳು. ಕನಕನಾಯಕನ ಆ ಆನಂದಕಂದ ಹುಟ್ಟಿ ನಾಲ್ಕಾರು ವರ್ಷಗಳೂ ಕಳೆದಿರಲಿಲ್ಲ. ಆಕೆ ಅವನೊಂದಿಗೆ ಹೆಚ್ಚುಕಾಲ ಆಡಿ ನಲಿಯುವ ಭಾಗ್ಯವಂತೆ ಆಗಿರಲಿಲ್ಲ.

ಮೊದಲೇ ತಂದೆಯನ್ನು ಕಳೆದುಕೊಂಡು ಸಂಕಟ ಅನುಭವಿಸಿದ್ದ ಕನಕನಾಯಕನಿಗೆ ಈ ಘಟನೆ ಬರಸಿಡಿಲು ಬಡಿದಂತಾಯಿತು. ತನ್ನ ಬಹುಕಾಲದ ಬಾಳಿನ ಆಧಾರಸ್ತಂಭ ನೆಲಕ್ಕುರುಳಿದಂತಾಯಿತು.

ಇದಾಗಿ ವರ್ಷ ಕಳೆಯುವುದರ ಒಳಗಾಗಿ ತನ್ನ ಕರುಳಕುಡಿಯನ್ನು ಆತ ಕಳೆದುಕೊಳ್ಳಬೇಕಾಯಿತು. ಮಗ ಅಕಾಲ ಮರಣ ಹೊಂದಿದ. ಈಗಂತೂ ಕನಕನಾಯಕನ

ಕರುಳಿಗೆ ಕೊಳ್ಳಿ ಇಟ್ಟಂತಾಯಿತು. ತಾಯಿಯ ಸಾವಿನ ನೋವನ್ನು ಮರೆಯುವ ಮುನ್ನವೇ ತನ್ನ ವಂಶದ ಕುಡಿಯನ್ನು ಕಳೆದುಕೊಂಡದ್ದು ಅಸಾಧ್ಯ ಯಾತನೆಯನ್ನು ತಂದಿತು.

ಆತನ ಮಡದಿಯ ಮೇಲೂ ಮಗನ ಸಾವು ಘೋರ ಪರಿಣಾಮವನ್ನು ಉಂಟುಮಾಡಿತು. ಮುದ್ದುಕಂದನ ಮರಣದ ಪ್ರಬಲ ಹೊಡೆತಕ್ಕೆ ಸಿಕ್ಕಿ ಆಕೆ ಜರ್ಜರಿತಳಾದಳು. ದಿನಕಳೆದಂತೆ ಮನೋರೋಗದಿಂದ ಅವಳು ಹಾಸಿಗೆ ಹಿಡಿದು ಮಲಗಿದಳು. ಬರಬರುತ್ತಾ ಲೌಕಿಕ ಪ್ರಪಂಚದ ಅರಿವು ಮತ್ತು ಇರವನ್ನು ಮರೆತವಳಂತೆ 'ರಹಿತಪ್ರಪಂಚೆ'ಯಾದಳು.

ಕನಕನಾಯಕನಿಗೆ ಈ ದಿನಗಳು ಬಹು ತಲ್ಲಣ ಸ್ವರೂಪಿಯಾದವು. ತುಂಬು ಹುಮ್ಮಸ್ಸಿನ ಅಕ್ಷಯ ಚಿಲುಮೆಯಾಗಿದ್ದ ಕನಕನಾಯಕ ಈ ತಲ್ಲಣ–ಗೊಂದಲಗಳಿಂದ ಮಂಕಾದ. ಆದರೂ ಅವನು ಮತ್ತೆ ಪ್ರಜಾಸೇವೆಯ ಕರ್ತವ್ಯದ ಕರೆಗೆ ಓಗೊಡುವುದು ಅನಿವಾರ್ಯವಾಗಿತ್ತು. ಕಾಲಕ್ರಮೇಣ ಮನಸ್ಸನ್ನು ನಿಯಂತ್ರಿಸಿಕೊಂಡು ಜನಸೇವೆಯಲ್ಲಿ ತೊಡಗಿದ. ಹೀಗೆ ಸುಮಾರು ವರ್ಷ ತನ್ನ ಸಾಂಸಾರಿಕ ಕಡುಕ್ಲೇಶಗಳನ್ನು ಮರೆತು ನಾಡು–ನುಡಿ, ಧರ್ಮ–ಸಾಹಿತ್ಯಗಳ ಅಭಿವೃದ್ಧಿಯ ದಿಕ್ಕಿನಲ್ಲಿ ಕರ್ತವ್ಯಮಗ್ನನಾದ.

ಇಂತಹ ಮಾನಸಿಕ ದ್ವಂದ್ವದಲ್ಲಿ ದಿನನೂಕುತ್ತಿದ್ದ ಕನಕನಾಯಕನಿಗೆ ಒಂದು ಘನಘೋರ ಯುದ್ಧ ಎದುರಿಸುವ ಪ್ರಸಂಗ ಬಂದಿತು. ಕಾಗಿನೆಲೆಯ ಗಡಿಯ ಸಂಬಂಧ ಆತ ಪಕ್ಕದ ಪ್ರಾಂತ್ಯದವರ ಜೊತೆ ಕಾದಾಡಬೇಕಾಯಿತು. ಮೇಲಾಗಿ ಇದು ಚಕ್ರವರ್ತಿಯ ಆದೇಶವಾಗಿತ್ತು. ಮತ್ತೊಮ್ಮೆ ವೈರಿಗಳೆಲ್ಲ ಒಂದಾಗಿ ಕೂಡಿ ಬಂಕಾಪುರ ಸಂಸ್ಥಾನದ ಮೇಲೆ ಕಣ್ಣು ಹಾಕಿ ಮುತ್ತಿಕೊಂಡರು. ಯುದ್ಧವೆಂದರೆ ಸಾಕು, ಕನಕ ಎಲ್ಲ ಕ್ಲೇಶ ಸಂಗತಿಗಳನ್ನು ಮರೆತು ಪರಾಕ್ರಮ ತೋರಿಸಲು ಸಿದ್ಧನಾಗುತ್ತಿದ್ದನು. ಪರಬಲವೆಂದರೆ ಉರಿದುರಿದು ಬೆಂಕಿಯಾಗುತ್ತಿದ್ದನು. ಯುದ್ಧಭೂಮಿಯಲ್ಲಿ ಬಂದು ಕಲೆತನೆಂದರೆ, ವೈರಿಸೇನೆ ಕನಕುಮನಕಾಗಿ ಹರಿದು ಹೋಗುತ್ತಿತ್ತು. ಆತ ಅಂತಹ ಸವ್ಯಸಾಚಿ ಹುಟ್ಟುಗಲಿ ಆಗಿದ್ದ.

ಕೊನೆಯ ಯುದ್ಧ

ಯುದ್ಧದ ದಿನ ಬಂದೇಬಿಟ್ಟಿತು. ಎಂದಿನಂತೆ ಈ ಯುದ್ಧವನ್ನು ಸಕಲಸಿದ್ಧತೆಗಳೊಂದಿಗೆ ಉತ್ಸಾಹದಿಂದಲೇ ಎದುರುಗೊಂಡ. ಎರಡೂ ಕಡೆಯ ಸೈನಿಕರು ಪ್ರಾಣದ ಹಂಗು ತೊರೆದು ವೀರಾವೇಶದಿಂದ ಹೋರಾಡಿದರು. ಕನಕನಾಯಕ ಕತ್ತಿ ಹಿಡಿದು ಎದುರಿಗೆ ಸಿಕ್ಕವರನ್ನು ಕತ್ತರಿಸುತ್ತ ಸಾಗುತ್ತಿದ್ದ. ಆದರೆ ಬರಬರುತ್ತ ಈ ಯುದ್ಧವೇಕೋ ಎಂದಿನ ರಣೋತ್ಸಾಹವನ್ನು ಪ್ರೇರೇಪಿಸಲಿಲ್ಲ. ಬದಲಿಗೆ ಹೆಜ್ಜೆಹೆಜ್ಜೆಗೆ ಮಾನಸಿಕ ತುಮುಲವನ್ನು ತಂದೊಡ್ಡಿತು. ಅಲ್ಲಲ್ಲಿ ಬಿದ್ದಿದ್ದ ಜರ್ಜರಿತ ಶರೀರಗಳು ತನ್ನನ್ನೇ ನೋಡಿ ಅಣಕಿಸುತ್ತಿದ್ದಂತೆ ಭಾಸವಾಯಿತು.

ಅಷ್ಟು ಹೊತ್ತಿಗೆ ಸರಿಯಾಗಿ ಅತ್ತಕಡೆಯಿಂದ ಕುದುರೆ ಮೇಲೆ ಕುಳಿತಿದ್ದ ವೈರಿಪಡೆಯ ವೀರನೊಬ್ಬ ಬೀಸಿದ ಕತ್ತಿ ಕನಕನ ದೇಹವನ್ನು ಗಾಯಗೊಳಿಸಿತು. ಕನಕ ಧೈರ್ಯಗೆಡಲಿಲ್ಲ. ವೀರಾವೇಶದಿಂದಲೇ ಹೋರಾಡುತ್ತಿದ್ದ. ಆದರೆ ಆ ಜರ್ಜರಿತ ದೇಹ ಹೊತ್ತು ಹೆಚ್ಚು ಸಮಯ ಹೋರಾಟ ಮಾಡಲು ಸಾಧ್ಯವಾಗಲಿಲ್ಲ. ಬಿಚ್ಚುಗತ್ತಿ ಕೈ ಜಾರಿ ಹೋಯಿತು. ಇದ್ದಕ್ಕಿದ್ದಂತೆ ಕಣ್ಣು ಕತ್ತಲೆ ಬಂದಂತಾಗಿ ನಿಲ್ಲಲು ತ್ರಾಣವಿಲ್ಲದೆ ಕುಸಿದ. ಹೋರಾಟದಲ್ಲಿ ಆತನ ಕಡೆಯವರಿಗೆ ದೊಡ್ಡ ಸೋಲು ಉಂಟಾಯಿತು. ಕನಕನಾಯಕ ಸತ್ತನೆಂದೇ ತಿಳಿದು ಯುದ್ಧಭೂಮಿಯಲ್ಲಿ ಎಲ್ಲರೂ ಅವನನ್ನು ಬಿಟ್ಟು ಓಡಿದರು. ಆತ ರಕ್ತದ ಕಾಲುವೆ-ಹೆಣದ ರಾಶಿಗಳ ಮಧ್ಯೆ ಪ್ರಜ್ಞೆಯಿಲ್ಲದೆ ಏಕಾಂಗಿಯಾಗಿ ಬಿದ್ದಿದ್ದ.

ಎಷ್ಟೋ ಗಂಟೆಗಳ ಅನಂತರ ಕನಕನಿಗೆ ಪ್ರಜ್ಞೆ ಮರುಕಳಿಸಿತು. ಆದರೆ ಎದ್ದು ಬರುವುದಿರಲಿ, ಕೂಗಾಡಲೂ ತ್ರಾಣವಿರಲಿಲ್ಲ. ಪಕ್ಕೆಲುಬಿಗೆ ಬಲವಾದ ಪೆಟ್ಟುಬಿದ್ದು ರಕ್ತ ಒಸರುತ್ತಿತ್ತು. ಗಾಜಿನ ಚೂರುಗಳ ಮೇಲೆ ದೇಹ ಎಳೆದಾಡಿದಂತೆ ಅಸಾಧ್ಯ ನೋವು. ಜೀವ ಸಾವಿನಮನೆಯತ್ತ ಹೋಗಿಬಂದ ಅನುಭವ. ಬಾಯಾರಿಕೆಯಿಂದಾಗಿ ಗಂಟಲು ಒಣಗಿ ಮಾತೇ ಹೊರಡದಂತಾಯಿತು. ತೊಟ್ಟು ನೀರು ಕೊಡಲು ಯಾರೊಬ್ಬರೂ ಹತ್ತಿರವಿರಲಿಲ್ಲ. ಹೆಂಡತಿ, ಆಳು-ಕಾಳು, ಸೈನಿಕರು ಎಲ್ಲರೂ ಒಮ್ಮೆಗೇ ನೆನಪಾದರು. ತೀರದ ದಾಹ, ನೋವು ಹಾಗೂ ತನ್ನಂತೆಯೇ ಪ್ರಾಣಾಘಾತಕ್ಕೆ ಒಳಗಾದ ಸೈನಿಕರ ಆರ್ತನಾದದ ನಡುವೆ ಕನಕ ಒಂಟಿಯಾದ.

ನಿರರ್ಥಕತೆ

ಆ ದುರ್ದೈವದ ರಾತ್ರಿ: ಕನಕನಿಗೆ ಈ ವೀರಾವೇಶ, ಯುದ್ಧ, ಅದರ ಪರಿಣಾಮಗಳು ಒಂದೊಂದಾಗಿ ಅರಿವಿನಾಳಕ್ಕೆ ನುಗ್ಗತೊಡಗಿದವು. ಸತ್ತುಹೋದರೇನೋ ಸರಿ. ಅಪ್ಪಿತಪ್ಪಿ ಬದುಕಿಬಿಟ್ಟರೆ ಇನ್ನು ಈ ಹುಸಿ ಪರಾಕ್ರಮದ ವೇಷ ಬದಲಿಸಬೇಕು ಅಂದುಕೊಂಡ. ತಂದೆಯನ್ನು ಕಾಪಾಡದ ಯುದ್ಧ, ತಾಯಿಯನ್ನು ಉಳಿಸದ ಪರಾಕ್ರಮ, ಮಗುವಿಗೆ ಮರುಜೀವ ಕೊಡದ ಅಧಿಕಾರ, ತನ್ನ ಅಂತರಾತ್ಮವನ್ನು ಗುರುತಿಸದ ಪದವಿ ಎಲ್ಲವೂ ಕ್ಷುಲ್ಲಕವಾದವು ಅನಿಸಿದವು.

ಯುದ್ಧವೆಂದರೆ ಕಷ್ಟ-ನಷ್ಟ ... ಯುದ್ಧವೆಂದರೆ ಸಾವು-ನೋವು ... ಯುದ್ಧವೆಂದರೆ ಪಾಪ-ಹಿಂಸೆ ... ಯುದ್ಧವೆಂದರೆ ಪ್ರಳಯ-ಧ್ವಂಸ. ಯುದ್ಧವೆಂಬುದು ಜೀವಲೋಕದ ಮೇಲೆ ನಿಷ್ಕರುಣೆಯಿಂದ ಮಾಡುವ ಮಾಯದ ಗಾಯ. ಯುದ್ಧದಿಂದ ಸುಡುಗಾಡುಗಳನ್ನು ಸೃಷ್ಟಿಸಬಹುದೇ ಹೊರತು ಹೂದೋಟವನ್ನಲ್ಲ. ನನ್ನ ಬದುಕಿನ ಇಷ್ಟು ಕಾಲ ಬಂಡೆಗಳನ್ನು ಹಿಂಡಿ ನೀರನ್ನು ಸಂಗ್ರಹಿಸುವ ವ್ಯರ್ಥಪ್ರಯತ್ನ ಮಾಡಿದೆನಲ್ಲ? ಯುದ್ಧದ ಹೆಸರಿನಲ್ಲಿ ಎಷ್ಟೋ ಅಮಾಯಕ ಸೈನಿಕರ ರಕ್ತವನ್ನು ಈ ಮಣ್ಣಿನುದ್ದಕ್ಕೂ ಚೆಲ್ಲಾಡಿದೆನಲ್ಲ? ತಿಳಿದೂ ತಿಳಿದೂ ಪಾಪದ ಕೂಪದಲ್ಲಿ ಕೊಳೆಯುತ್ತಿರುವೆನಲ್ಲ. ಇದು ತರವೆ? ಈ ನನ್ನ ಅನಂತ

ಪಾಪಗಳಿಗೆ ಯಾವ ಪ್ರಾಯಶ್ಚಿತ್ತವಿದೆ? ಮನಸ್ಸಿನೊಳಗೆ ಮೂಡಿದ ಕನಕನಾಯಕನ ತುಮುಲ ತೀವ್ರವಾಗತೊಡಗಿತು.

ಅರೆ ಎಚ್ಚರ ಅರೆ ನಿದ್ರೆಯಲ್ಲಿದ್ದಂತಿದ್ದ ಕನಕನಾಯಕನೊಳಗೆ ಸಾವಿರಾರು ಗೊಂದಲಗಳು, ತಲ್ಲಣಗಳು ಒಡಮೂಡಿದವು. ಆ ಅವಸ್ಥೆಯಲ್ಲಿ "ಸಾಕು ಈ ಲೌಕಿಕ, ದಾಸನಾಗು. ಪರಮ ಆನಂದದ ಮೋಕ್ಷಸಾಧನೆಯತ್ತ ಸಾಗು ಬಾ" ಎಂದು ಯಾರೋ ಕರೆದಂತಾಯಿತು. ಕಣ್ಣು ತೆರೆದಾಗ ಕಾಲುದಾರಿಯ ಸಂತರೊಬ್ಬರ ಆರೈಕೆಯಿಂದ ಅರಮನೆ ಸೇರಿದ್ದುದು ತಿಳಿಯಿತು. ಹೇಗೋ ಬಡಜೀವ ಬದುಕಿಕೊಂಡಿತು ಎನ್ನುವಾಗಲೇ ಮೋಹದ ಹೆಂಡತಿ ಸಾವಿನ ಮಂಚದಲ್ಲಿರುವ ಸುದ್ದಿ ಸಿಡಿಲೆರಗಿದಂತೆ ಅಪ್ಪಳಿಸಿತು.

ಅವನಿಗೆ ತನ್ನ ಬದುಕು ಮತ್ತು ಕಾವ್ಯದ ಜೀವಸ್ಫೂರ್ತಿಯಾಗಿದ್ದ ಹೆಂಡತಿಯ ದೇಹತ್ಯಾಗ ಅಸಹನೀಯ ಆಘಾತವನ್ನು ತಂದಿಕ್ಕಿತು. ಕೊನೆವರೆಗೂ ಜೊತೆಯಾಗಿರುವಳೆಂದು ನಂಬಿಕೊಂಡಿದ್ದವನಿಗೆ ಇದು ಊಹಿಸಿದ ಸಂಗತಿಯಾಗಿತ್ತು. ಪ್ರಪಂಚದ ಜೊತೆ ಆತನನ್ನು ಅಂಟಿಸಿದ್ದ ನಂಟಿನ ಕಟ್ಟಕಡೆಯ ಕೊಂಡಿ ಕಳಚಿ ಬಿದ್ದಿತ್ತು. ಮುಗಿಲ ಮಳೆಗೂ ನೆಲದ ಮಣ್ಣಿಗೂ ನಡುವೆ ಬೆಸೆದುಕೊಂಡಿದ್ದ ಸಂಬಂಧ ದೂರವಾದಂತಾಯಿತು. ತಾನು ಯಾರಿಗಾಗಿ ಲೌಕಿಕದ ಸಂಬಂಧವನ್ನು ಉಳಿಸಿಕೊಳ್ಳಲಿ ಎಂಬ ಪ್ರಶ್ನೆ ಅವನನ್ನು ಬಿಡದಂತೆ ಕಾಡಿತು. ತನ್ನವರಿಲ್ಲದ ಭೂಮಿಯ ಮೇಲಿನ ಬದುಕು ನಶ್ವರ, ಅರ್ಥವಿಲ್ಲದ್ದು ಅನ್ನಿಸಿತು. ಜುಗುಪ್ಸೆ ಕಾಡಿತು.

ಬದುಕಿನ ಸಂಕ್ರಮಣ

ಈ ಜುಗುಪ್ಸೆ ಕನಕನಾಯಕನ ಬದುಕಿನ ದಿಕ್ಕುದೆಸೆಯನ್ನೇ ಬದಲಿಸಿತು. ಅದುವರೆಗೆ ಅಂತರಂಗದಲ್ಲಿ ನಿರಂತರವಾಗಿ ಮೊರೆಯುತ್ತಿದ್ದ ಆಧ್ಯಾತ್ಮಿಕ ಆಕಾಂಕ್ಷೆಗೆ ಓಗೊಡಬೇಕು ಅನಿಸಿತು. ಒಮ್ಮೊಮ್ಮೆ ಮುಖತೋರಿಸಿ ಮರೆಯಾಗುತ್ತಿದ್ದ ಪಾರಮಾರ್ಥಿಕ ಅನುಭಾವ ಬಲಿಯತೊಡಗಿತು. ಧರ್ಮ, ತತ್ವ, ಪುರಾಣಶಾಸ್ತ್ರಗಳ ಸಂಸ್ಕಾರ ಪಡೆದಿದ್ದ ಮನಸ್ಸು ವಿರಕ್ತಿಯ ಕಡೆಗೆ ವಾಲತೊಡಗಿತು. ಪ್ರಪಂಚದ ಬಗೆಗಿನ ಆ ಕ್ಷಣದ ನಿರಾಸಕ್ತಿ ವೈರಾಗ್ಯಭಾವವಾಗಿ ಮಾರ್ಪಟ್ಟಿತು. ಆಗಾಗ ಕನಸಿನಲ್ಲಿ ಕಾಣಿಸಿಕೊಳ್ಳುತ್ತಿದ್ದ ದೈವದ ಅಶರೀರವಾಣಿಗೊಂದು ಸಾಕಾರ ರೂಪ ದೊರೆತಂತಾಯಿತು.

ತಾನು ಯಾರು? ಎಲ್ಲಿಂದ ಬಂದೆ? ಮುಂದಾವುದು ದಾರಿ? ಮತ್ತೆಲ್ಲಿಗೆ ಪಯಣ? ಹುಟ್ಟುಸಾವುಗಳ ಅರ್ಥವೇನು? ಪ್ರಪಂಚದ ಸುಖದುಃಖಗಳ ಹಿಂದಿರುವ ಕೈವಾಡವನ್ನು ಅರಿಯುವುದೆಂತು? ಮೂರುದಿನದ ಬಾಳಿನಲ್ಲಿ ಇವೆಲ್ಲ ಯಾವ ತರಹದ ನಂಟು? ಇಂತಹ ನಂಟನ್ನು ಅಂಟಿಸಿ ಬಂಧಿಸಿರುವ ಭಗವಂತನನ್ನು ಸೇರುವ ದಾರಿ ಯಾವುದು? ಮುಂತಾದ ಹಲವಾರು ಪ್ರಶ್ನೆಗಳು ಈಗ ಕನಕನ ಒಂಟಿಮನಸ್ಸನ್ನು ಪೀಡಿಸತೊಡಗಿದವು.

ಕುಳಿತಾಗ, ನಿಂತಾಗ, ನಡೆದಾಡುವಾಗ, ಮಲಗಿದಾಗಲೆಲ್ಲ ಈ ಪ್ರಶ್ನೆಗಳು ಧಿಗ್ಗನೆ ಮೂಡುತ್ತಿದ್ದವು. ಒಂಟಿಬಾಳಿನ ನೆಂಟನಾದ ಭಗವಂತನನ್ನು ಕಾಣುವ ಹಂಬಲ ಬಲವಾಯಿತು. ತನ್ನನ್ನು ಬಿಟ್ಟೂಬಿಡದೆ ಕಾಡುತ್ತಿರುವ ಪ್ರಶ್ನೆಗಳಿಗೆ ಅವನೊಬ್ಬನೇ ಸರಿಯಾಗಿ ಉತ್ತರಿಸಬಲ್ಲ ಎಂದು ನಿರ್ಧರಿಸಿ ಸಂಚಾರ ಹೊರಟ.

ಕನಕನಾಯಕನು ರಾಜಕಾರ್ಯದ ನಿಮಿತ್ತ ಆಗಾಗ ವಿಜಯನಗರದ ರಾಜಧಾನಿ ಹಂಪೆಗೆ ಹೋಗಿಬರುತ್ತಿದ್ದನು. ಅಂಥ ಸಂದರ್ಭಗಳಲ್ಲಿ ಆತ ರಾಜನಿಗೆ ಪ್ರಿಯರಾಗಿದ್ದ ತಾತಾಚಾರ್ಯರನ್ನು ಭೇಟಿಯಾಗುತ್ತಿದ್ದನು. ಅವರು ಅಲ್ಲಿ ರಾಮಾನುಜರ ಶ್ರೀವೈಷ್ಣವ ತತ್ವವನ್ನು ಸರಳಗೊಳಿಸಿ ಜನಮಾನಸದಲ್ಲಿ ಹರಡುತ್ತಿದ್ದರು. ಆಗೆಲ್ಲ ತನಗೆ ಕಾಡುತ್ತಿದ್ದ ಹಲವು ಗೊಂದಲಗಳನ್ನು ಕೇಳಿ ಪರಿಹರಿಸಿಕೊಳ್ಳುತ್ತಿದ್ದನು.

ಈಗಲೂ ಕನಕ ತಾತಾಚಾರ್ಯರನ್ನು ಬಂದು ಭೇಟಿಯಾದ. ಆದರೆ ಆತ ಎಂದಿನಂತೆ ಬರದೆ ಖಡ್ಗ, ಕಠಾರಿ, ಗುರಾಣಿಗಳನ್ನು ತೊರೆದು ಬರಿಗೈಯಲ್ಲಿ ಬಂದಿದ್ದ. ಆಚಾರ್ಯರು ಕನಕನನ್ನು ಆತ್ಮೀಯತೆಯಿಂದ ಬರಮಾಡಿಕೊಂಡರು. ತನ್ನವರನ್ನು ಕಳೆದುಕೊಂಡು ಕಂಗಾಲಾಗಿದ್ದ ಆತ್ಮಕ್ಕೆ ಸಾಂತ್ವನದ ಮಾತುಗಳನ್ನಾಡಿದರು. ಪ್ರಪಂಚದ ಶೂನ್ಯತೆಗೆ ಯಥಾರ್ಥವನ್ನು ತುಂಬುವ ದೈವದ ಅಸ್ತಿತ್ವದ ಬಗ್ಗೆ ಪರಿಣಾಮಕಾರಿಯಾಗಿ ಬೋಧಿಸಿದರು.

"ಗೊಂದಲಮಯ ಬದುಕಿಗೆ ಸರಿದಾರಿ ತೋರುವವನೆಂದರೆ ಶ್ರೀಹರಿ ಮಾತ್ರ. ಅವನೇ ನಿತ್ಯ-ಅವನೇ ಸತ್ಯ. ಅವನು ಸರ್ವೋತ್ತಮ. ಆ ಹರಿಗಾಗಿ ಎಲ್ಲರನ್ನೂ ತೊರೆಯಬೇಕು. ಜಗತ್ತಿನ ಮಾಯಾಪಾಶ ಕಿತ್ತೊಗೆಯಬೇಕು. ಇಹದ ಭವಸಾಗರವನ್ನು ದಾಟಲು ಹರಿಗೋಲಿನ ಆಸರೆ ಬೇಕೇ ಬೇಕು. ಶ್ರೀಹರಿಯೆ ಆ ಹರಿಗೋಲಿನ ಅಪ್ರತಿಮ ಒಡೆಯ." ಅವನ ದಾಸತ್ವ ಸ್ವೀಕರಿಸಿ ಭವಮುಕ್ತಿ ಹೊಂದಲು ಸೂಚಿಸಿದರು.

ಕನಕನಿಗೆ ಈಗೀಗ ಎಲ್ಲವೂ ಅರ್ಥವಾಗತೊಡಗಿತು. ತಾತಾಚಾರ್ಯರು ಭಾಗವತ ಧರ್ಮದ ತಿರುಳನ್ನು ಸಾರವತ್ತಾಗಿ ತಿಳಿಸಿದ್ದರು. ಭೂಮಿಯ ಮೇಲೆ ಜೀವಗಳ ಸಂಬಂಧಕ್ಕೆ ದೊಡ್ಡ ಬೆಲೆಯಿದೆ. ಅದರಲ್ಲೂ ಸಹಮಾನವರ ನಡುವಿನ ಸಂಬಂಧ ದೊಡ್ಡದು. ಆದರೆ ಅದಕ್ಕಿಂತ ದೊಡ್ಡದು ದೇವರು ಮತ್ತು ಭಕ್ತರ ಜೊತೆಗಿನ ಸಂಬಂಧ. ಹಾಗಾಗಿ ಭಗವಂತನ ನಾಮಸ್ಮರಣೆಗಿಂತ ಶ್ರೇಷ್ಠ ಬಂಗಾರ ಮತ್ತೊಂದಿಲ್ಲ ಎನಿಸಿತು.

ದೇಹಬಲಕ್ಕಿಂತ ದೈವಬಲ ಮಿಗಿಲಾದುದೆಂಬ ಸತ್ಯ ಕನಕನ ಮನಸ್ಸನ್ನು ಹೊಕ್ಕಿತು. ಲೌಕಿಕ ಅಧಿಕಾರಕ್ಕೆ ಅಂಟಿಕೂರುವುದು ಈಗ ಅವನಿಗೆ ಅಸಹ್ಯವೆನಿಸಿತು. ಇದುವರೆಗೆ ಪರಾಕ್ರಮದ ಹೆಸರಿನಲ್ಲಿ ಬದುಕನ್ನು ವ್ಯರ್ಥ ಮಾಡಿಕೊಂಡದ್ದು ಮನದಟ್ಟಾಯಿತು. ತಾನು ನಡೆಯಬೇಕಾದ ದಾರಿ ಇದಲ್ಲ ಎಂದು ಗಟ್ಟಿಯಾಗಿ ಅನ್ನಿಸತೊಡಗಿತು. ಅಧಿಕಾರ, ಅಂತಸ್ತು, ಅರಮನೆ, ಬಂಧು-ಬಳಗ ಎಲ್ಲವನ್ನು ತೊರೆದು ಭಾಗವತನಾಗಿ ಬಯಲಿಗೆ ಅಣಿಯಾದನು.

ಈಗ ಪ್ರಾಪಂಚಿಕ ಅಂಟಿಗೆ ತನ್ನನ್ನು ಸಿಕ್ಕಿಸುವ ಯಾವ ಕೊಂಡಿಯೂ ಜೊತೆಗಿಲ್ಲದ್ದು ಕನಕನ ಅರಿವಿಗೆ ಬಂದಿತು. ಅವನಿಗೆ ಈಗ ಎಲ್ಲವೂ ಮುಕ್ತವಾದಂತೆ, ಎಲ್ಲದರಿಂದ ತಾನು ಬಿಡುಗಡೆಯಾದಂತೆ ಅನ್ನಿಸಿತು. ತನ್ನೊಳಗೆ ಬಹುಕಾಲದಿಂದ ಮಿಡಿಯುತ್ತಿದ್ದ ನಿಜದನಿಯ ಕರೆಗೆ ಓಗೊಟ್ಟಂತಾಯಿತು. ಆದರೆ ಈಗ ಹಿಂದಿನಂತೆ ಅವನಿಗೆ ಪ್ರಪಂಚ ಶೂನ್ಯವೂ ಅನ್ನಿಸಲಿಲ್ಲ ; ತಾನೂ ಒಂಟಿಯಾದಂತೆಯೂ ಕಾಣಲಿಲ್ಲ. ತನ್ನ ಸುತ್ತ ದೇವರಿದ್ದಾನೆ. ಅಷ್ಟೇ ಏಕೆ, ತನ್ನಲ್ಲೂ ದೇವರು ಇದ್ದಾನೆ. ಹಾಗಾಗಿ ಅವನ ದಾಸಾನುದಾಸನಾಗಿ ಸೇವೆ ಮಾಡುವುದೇ ಶ್ರೇಷ್ಠಮಾರ್ಗವೆಂದು ತೋರಿತು. ಆ ಮೂಲಕ ನಿಜಬದುಕಿನ ಅರ್ಥವನ್ನು ಹುಡುಕುವ ನಿರ್ಧಾರ ಮಾಡಿದನು.

ಅದು 'ಹರಿಯೇ ಸರ್ವೋತ್ತಮ' ಎಂದು ಸಾರುತ್ತಿದ್ದ ಶ್ರೀವೈಷ್ಣವ ಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲ. ಸಹಜವಾಗಿ ಕನಕ ಆ ಧರ್ಮಕ್ಕೆ ಆಕರ್ಷಿತನಾದ. ರಾಜತ್ವದ ವೇಷಭೂಷಣಗಳನ್ನು ಕಳಚಿದ. ಸರಳತೆಯೇ ಮೈವೆತ್ತ ಉಡುಪು ಧರಿಸಿದ. ಸೊಂಟದ ಮೇಲೊಂದು ಸಾದಾ ಪಂಚೆ, ಹೆಗಲಿಗೆ ದೊಡ್ಡದೊಂದು ಕರಿಕಂಬಳಿ – ಇವಿಷ್ಟೇ ದೇಹ ರಕ್ಷಣೆಯ ಉಡುಗೆ ತೊಡುಗೆಗಳು. ಕತ್ತಿ ಹಿಡಿದಿದ್ದ ಕೈಯಲ್ಲೀಗ ತಂಬೂರಿ, ಇನ್ನೊಂದು ಕೈಯಲ್ಲಿ ಚಿಟಿಕೆ ತಾಳ, ಅರಿವಿನ ನಾದ ಹೊಮ್ಮಿಸಲು ಶಂಖ, ಬೇಡಿ ತಿನ್ನಲು ಗೋಪಾಳಬುಟ್ಟಿ (ಬೋನಾಸಿ): ಇಷ್ಟನ್ನು ಹಿಡಿದು ಅಧಿಕಾರ, ಸಂಪತ್ತು, ವೈಭೋಗಗಳನ್ನೆಲ್ಲ ತೊರೆದು ದಾಸಾನುದಾಸನಾದ.

ಶ್ರೀಹರಿಯ ಚೈತನ್ಯವನ್ನು ಎದೆಯಲ್ಲಿ ನೆನೆಯುತ್ತ, ನಾಲಗೆಯ ತುಂಬೆಲ್ಲ ಅವನ ಸಂಕೀರ್ತನೆ ಜಪಿಸುತ್ತ:

ದಾಸ ದಾಸರ ಮನೆಯ ದಾಸಾನುದಾಸ ನಾನು
ಸಾಸಿರ ನಾಮದೊಡೆಯ ರಂಗಯ್ಯನ ಮನೆಯ

– ಎಂದು ಹಾಡುತ್ತ ಕನಕ ಕಾಗಿನೆಲೆಯ ಕಡೆಗೆ ನಡೆದನು. ಜನರು ತಮ್ಮ ನಿತ್ಯದ ಸುಖದುಃಖಗಳ ಆಧಾರಸ್ತಂಭವಾಗಿದ್ದ ನಾಯಕನನ್ನು ಬೀಳ್ಕೊಡಲು ಬಾಡ ಪಟ್ಟಣದ ತುಂಬ ನೆರೆದರು. ಜನರ ಸೇವಕನಾಗಿದ್ದವನು ದೇವರ ದಾಸನಾಗಿ ಬದಲಾದ ಅಪರೂಪದ ಚೋದ್ಯಕ್ಕೆ ಅವರೆಲ್ಲ ಸಾಕ್ಷಿಯಾದರು. ತಮ್ಮನ್ನೆಲ್ಲ ಇದುವರೆಗೆ ಪೊರೆದ ನೆಚ್ಚಿನ ನಾಯಕನನ್ನು ಅವರು 'ಕನಕದಾಸ' ಎಂದು ಬಾಯ್ತುಂಬಿ ಕರೆದು ಉಪಚರಿಸಿದರು. ಹೀಗೆ ಕನಕನಾಯಕನು ಜನರ ಬಾಯಲ್ಲಿ ಪ್ರೀತಿ–ಗೌರವದ ಕನಕದಾಸರಾದರು. (ಹಾಗೆ ಅವರು ಬಾಡದಿಂದ ಕಾಗಿನೆಲೆಗೆ ಹೊರಟ ಹೆಜ್ಜೆ ಜಾಡು ಈಗಲೂ 'ರಂಗನ ಬಯಲು' ಎಂಬ ಹೆಸರಿನಿಂದ ಜನಪ್ರಸಿದ್ಧವಾಗಿದೆ).

ಅಲ್ಲಿಂದ ಹೊರಟ ಕನಕದಾಸರು ತಂಬೂರಿ ಮೀಟುತ್ತ, ಚಿಟಿಕೆ ತಾಳ ನುಡಿಸುತ್ತ, ಹರಿಸಂಕೀರ್ತನೆ ಪಾಡುತ್ತ ಕಾಗಿನೆಲೆಯನ್ನು ತಲುಪಿದರು. ಅಲ್ಲಿಗೆ ಬಂದವರೇ ಲಕ್ಷ್ಮೀನರಸಿಂಹ ದೈವಸನ್ನಿಧಿಯ ಒಂದು ಪಾರ್ಶ್ವದಲ್ಲಿ ತಮ್ಮ ನೆಚ್ಚಿನ ಬಾಡದ ಶ್ರೀರಂಗನಾಥಸ್ವಾಮಿ ಮೂರ್ತಿಯನ್ನು 'ಆದಿಕೇಶವ'ನ ಹೆಸರಿನಲ್ಲಿ ಪ್ರತಿಷ್ಠಾಪಿಸಿದರು.

ಅಲ್ಲಿ ಆದಿಕೇಶವನನ್ನು ನೋಡುತ್ತಾ ಕನಕದಾಸರಿಗೆ ದೇವರ ಮೇಲಿನ ಕೃತಕೃತ್ಯ ಭಾವುಕತೆ ಇಮ್ಮಡಿಯಾಯಿತು. ತಮ್ಮ ಸದ್ಯದ ಜನ್ಮದ ಅರ್ಥಪೂರ್ಣ ಪರಿವರ್ತನೆಯಿಂದ ಪರಮಾನಂದ ಹೊಂದಿ ಎದೆತುಂಬಿ ಹಾಡತೊಡಗಿದರು:

ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು
ಪದುಮನಾಭನ ಪಾದದೊಲುಮೆ ಎನಗಾಯಿತು

ಹರಿತೀರ್ಥ ಪ್ರಸಾದ ಎನ್ನ ಜಿಹ್ವೆಗೊದಗಿತು
ಹರಿಯ ನಾಮಾಮೃತ ಕಿವಿಗೊದಗಿತು
ಹರಿಯ ದಾಸರು ಎನ್ನ ಬಂಧುಬಳಗವಾದರು
ಹರಿಯ ಶ್ರೀಮುದ್ರೆ ಆಭರಣವಾಯ್ತು

ಇಂದೆನ್ನ ಜೀವಕ್ಕು ಸಕಲ ಸಂಪದವಾಯ್ತು
ಮುಂದೆನ್ನ ಜನ್ಮ ಸಫಲವಾಯಿತು
ತಂದೆ ಶ್ರೀ ಕಾಗಿನೆಲೆ ಆದಿಕೇಶವರಾಯ
ಬಂದೆನ್ನ ಹೃದಯದಲಿ ನೆಲೆಯಾಗಿ ನಿಂತ

ಕನಕದಾಸರು ಕಾಗಿನೆಲೆಯ ಆದಿಕೇಶವನ ಗುಡಿಯನ್ನು ತಮ್ಮ ವಾಸದ ನೆಲೆಯನ್ನಾಗಿ ಮಾಡಿಕೊಂಡರು. ಅಲ್ಲಿ ತಮ್ಮ ನೆಚ್ಚಿನ ದೇವರೆದುರು ಕುಳಿತು ಬದುಕಿನಲ್ಲಿ ತಾವು ಕಂಡುಂಡ ಸತ್ಯವನ್ನೆಲ್ಲ ಹಾಡಾಗಿಸಿ ನಿವೇದಿಸತೊಡಗಿದರು. ಬಿಟ್ಟೆನೆಂದರೂ ಬಿಡದೆ ಮಾಯೆಯಂತೆ ಕಾಡುತ್ತಿರುವ ಹಳೆಯ ನಂಟಿನ ಅಂಟನ್ನೆಲ್ಲ ತೊಳೆದುಕೊಳ್ಳಲು ಪ್ರಾರಂಭಿಸಿದರು. ಅಂತರಂಗಕ್ಕೆ ತಗುಲಿಕೊಂಡಿರುವ ಕಾಮ-ಕ್ರೋಧಾದಿ ಕೋಟಲೆಗಳನ್ನು ನಿವಾರಿಸುವ ಯತ್ನದಲ್ಲಿ ಲೀನರಾದರು. ದೇವರನ್ನು ಸಾಕ್ಷಾತ್ಕರಿಸಿಕೊಳ್ಳುವ ಏಕಮೇವ ಉದ್ದೇಶದಿಂದ ಮನಸ್ಸನ್ನು ಅತ್ತಲಿತ್ತ ಹೋಗದಂತೆ ತಡೆದು ಪರಿಪಕ್ವ ಮಾಡಿಕೊಳ್ಳತೊಡಗಿದರು.

ಕನಕ ಪ್ರವಚನ

ಏಕತಾರಿಯಲ್ಲಿ ಏಕನಾದ ಹೊರಡಿಸುತ್ತ ಏಕಾಗ್ರತೆಯಲ್ಲಿ ದೇವರನಾಮ ಹಾಡುವ ಕನಕದಾಸರನ್ನು ನೋಡಲು ದೂರದೂರಿಂದ ಜನರು ಬರತೊಡಗಿದರು. ಅವರಲ್ಲಿ ಜನ್ಮಸಾಫಲ್ಯದ ನಾನಾದಾರಿಗಳ ಬಗ್ಗೆ ಪ್ರವಚನ ಕೊಡುವಂತೆ ವಿನಂತಿಸಿಕೊಳ್ಳುತ್ತಿದ್ದರು.

ಕನಕದಾಸರು ತಮ್ಮನ್ನು ಕಾಡಿದ ಗೊಂದಲ–ಅನುಮಾನಗಳನ್ನು, ತಾವು ಅನುಭವಿಸಿದ ಸುಖ–ಸಂಕಟಗಳ ಸತ್ಯವನ್ನು ಜನರ ಜೊತೆ ಹಂಚಿಕೊಳ್ಳಲು ಶುರುಮಾಡಿದರು.

ಬದುಕು ಎಂದರೇನು? ಅದರಲ್ಲಿ ಸಾವಿನ ಪಾತ್ರ ಎಷ್ಟು? ಎಂಬ ಪ್ರಶ್ನೆಗೆ ಉತ್ತರಿಸುತ್ತ:

"ಬದುಕು ಜೀವದ ವಿಕಸನಕ್ಕೆ ದೇವರು ಕೊಟ್ಟ ಅವಕಾಶ. ಜೀವದೊಳಗೆ ಪ್ರಾಣವಾಯು ಇರುವವರೆಗಷ್ಟೇ ಅದರ ಅಸ್ತಿತ್ವ. ಅದು ಕಂಬದೊಳಗಿನ ನೆರಳ ಬಿಂಬದಷ್ಟೇ ಸತ್ಯ. ಮನುಷ್ಯರಾಗಿ ಹುಟ್ಟಿದ ಮೇಲೆ ಎಂದೆಂದಿಗೂ ಸಾವು ತಪ್ಪದು. ಹುಟ್ಟುಸಾವುಗಳೆರಡೂ ಜೀವನದ ಸಮಸತ್ಯಗಳು. ಹುಟ್ಟು ವೇಷ ಹಾಕಿದ ಪಾತ್ರಧಾರಿ, ಸಾವು ವೇಷ ಕಳೆದ ಪಾತ್ರಧಾರಿ. ಇದು ನನಗೆ ಈ ಕ್ಷಣಕ್ಕೆ ಹೊಳೆದ ಸತ್ಯ" ಎಂದು ತಿಳಿಹೇಳುತ್ತಿದ್ದರು.

"ನಾನು ನನ್ನದು ಎಂಬುದು ಪೂರ್ತಿ ನಿಜವಲ್ಲ ... ಇಳೆಯ ಮೇಲಿನ ಸೌಂದರ್ಯ ಕುರೂಪಗಳಿಗೆಲ್ಲ ಕಾರಣಕರ್ತ ದೇವರು. ಎಲ್ಲದಕ್ಕೂ ಕಾರಣ ನಂಬಿಕೆ ... ಆ ನಂಬಿಕೆಯೇ ದೇವರು. ಅವನು ಕರುಣಾಸಾಗರ, ಬಾಳಿನಲ್ಲಿ ಕಂಗೆಟ್ಟವರ ಪಾಲಿಗೆ ಆತ ಜಗದ ನೆಂಟ. ನಾನವನ ದಾಸಾನುದಾಸ ಅಷ್ಟೆ. ನಿಮ್ಮಂತೆಯೇ ನಾನು ಆ ಬೆಳಕಿನ ದೇವರಲ್ಲಿ ನನ್ನ ಕೈ ಬೆರಳು ಹಿಡಿದು ನಡೆಸುವಂತೆ ಬೇಡುತ್ತಿದ್ದೇನೆ" ಎನ್ನುವರು.

ಜನರೂ ಸಹ ಕನಕದಾಸರಿಗೆ: ಸಂಸಾರವು ಭವಬಂಧನವೇ? ಅಧಿಕಾರದೊಳಗಿದ್ದೂ ದೈವಸಾನ್ನಿಧ್ಯ ಪಡೆಯಲಾಗದೇ? ಎಂದೆಲ್ಲ ಪ್ರಶ್ನಿಸುತ್ತಿದ್ದರು.

"ಅದು ಅವರವರ ಇಷ್ಟದಂತೆ ಬೇರೆಬೇರೆಯಾಗಿರಬಹುದು. ದೇವರು ಇಲ್ಲಿಹನು ಅಲ್ಲಿಲ್ಲವೆಂಬ ಸೊಲ್ಲು ಸಲ್ಲದು. ನಾವು ಎಲ್ಲಿಯೇ ಇದ್ದರೂ ದೇವರ ಪ್ರೀತಿಗೆ ಪಾತ್ರರಾಗಬಹುದು. ಆದರೆ ಅವನದು ರಾಜಕೀಯವನ್ನು ಮೀರಿದ ಕಾಯಕ. ನಾವೂ ಅವನನ್ನು ಅಧಿಕಾರವನ್ನು ಮೀರಿಯೇ ಮುಟ್ಟಬೇಕು. ಅವನು ನರಕುರಿಗಳನ್ನು ಕಾಯುವ ಪ್ರೇಮಕಲೆ ಗೊತ್ತಿರುವವನು. ನಾವು ಆ ಕಲೆಯನ್ನು ಅರಿಯದೆ ಹುಂಬರಾಗಿ ಮೆರೆಯುತ್ತಿದ್ದೇವೆ, ಅಷ್ಟೆ."

"ಸಂಸಾರವೆಂಬುದು ಬಿಡಿಯಾಗಿ ನೋಡಿದರೆ ಬಂಧನವೂ ಅಲ್ಲ ; ಬಿಡುಗಡೆಯೂ ಅಲ್ಲ. ಅಂಟಿಯೂ ಅಂಟದ ಸಂಬಂಧ ಸಂಸಾರದ್ದಾಗಬೇಕು. ಮನೆಗೆ ಮಾರಿಯಾಗದೆ ಲೋಕಕ್ಕೆ ಉಪಕಾರಿಯಾಗುವುದು ಸರಿಯಾದ ಜೀವನ ದಾರಿ. ಹಾಗೆ ನೋಡಿದರೆ ಪರಮಾತ್ಮ ಶ್ರೀಹರಿಯೇ ವರಲಕ್ಷ್ಮಿಯೊಂದಿಗೆ ಸಂಸಾರ ಸಾಗರದ ಮೇಲೆ ತೇಲುವವನು. ಅವನು ವಿಶ್ವಕುಟುಂಬಿ, ಲೋಕಸಂಸಾರಿ. ಬದುಕಿನ ಏಳುಬೀಳುಗಳು ಪರಮಾತ್ಮ ಎಚ್ಚರದಿಂದ ಕಲಿಸುವ ಪಾಠಗಳು. ಅದರಿಂದ ಎಚ್ಚೆತ್ತುಕೊಳ್ಳದಿದ್ದರೆ ಮುಕ್ತಿಯಿಲ್ಲ".

– ಹೀಗೆ ತಮ್ಮನ್ನು ಕಾಣಲು ಬಂದ ಮಂದಿಯೊಡನೆ ಕನಕದಾಸರು ತಮಗೆ ತಿಳಿದ ಅನುಭವಸತ್ಯಗಳನ್ನು ಹಂಚಿಕೊಳ್ಳಲು ತೊಡಗಿದರು. ಅವರು ಪ್ರತಿನಿತ್ಯ ಪ್ರವಚನಕ್ಕಾಗಿ

ಕಾಗಿನೆಲೆಯ ಆದಿಕೇಶವನ ಗುಡಿಯ ಮುಂದಿದ್ದ ಮರದ ನೆರಳಿನಲ್ಲಿ ಕುಳಿತುಕೊಳ್ಳುತ್ತಿದ್ದರು. ಅದು ಬರಬರುತ್ತ ಹೊಸ ಕಳೆ ಪಡೆದುಕೊಳ್ಳತೊಡಗಿತು. ಜನರು ಪ್ರೀತಿಯಿಂದ ಆ ಬೇವಿನಕಟ್ಟೆಯನ್ನು 'ಕನಕದಾಸರ ಪ್ರವಚನಕಟ್ಟೆ' ಎಂದೇ ಕರೆದರು.

ಬಹುಶಃ ಈ ಅವಧಿಯಲ್ಲಿ ಕನಕದಾಸರು ತಮ್ಮ ಮಹತ್ವಾಕಾಂಕ್ಷೆಯ 'ಮೋಹನ ತರಂಗಿಣಿ' ಕಾವ್ಯವನ್ನು ರಚಿಸಿರಬಹುದು. ಅವರು ದಾಸತ್ವ ಸ್ವೀಕರಿಸಿದ ಆರಂಭದಲ್ಲಿ ಈ ಕಾವ್ಯವನ್ನು ಸಮಾಪ್ತಿಗೊಳಿಸುವ ಕಾರ್ಯಕ್ಕೆ ಕೈಹಾಕಿದರು. ತಮ್ಮ ಬಾಳಸಂಗಾತಿ ವಧೂಟಿಯ ಅಂತರಂಗದೆದುರು ಬಿಚ್ಚಿಕೊಂಡಿದ್ದ ಈ ಪ್ರೇಮಕಾವ್ಯ ಅವಳ ನೆನಪಿನಲ್ಲೇ ಮುಕ್ತಾಯ ಕಂಡಿತು. ತಮ್ಮೊಳಗೆ ಇಂಗದೆ ಹಾಗೆಯೇ ಅಡಗಿದ್ದ ಶೃಂಗಾರ ಭಾವದ ಯೋಚನೆಗಳನ್ನು ಕಾವ್ಯದ ಪುಟಗಳಿಗೆ ತುಂಬಿ ನೆಚ್ಚಿನ ಮಡದಿಗೆ ಅರ್ಪಿಸಿಬಿಟ್ಟರು.

ಅದರಲ್ಲಿ ತಮ್ಮ ಬದುಕಿನ ಪರಿವರ್ತನೆಗೆ ಶ್ರೀಕಾರ ಹಾಕಿದ ಗುರುಗಳಾದ ತಾತಾಚಾರ್ಯರನ್ನು ಹಾಗೂ 'ಹರಿಸರ್ವೋತ್ತಮ' ತತ್ವವನ್ನು ಸಮುದಾಯದೊಳಗೆ ಸಾಕಾರಗೊಳಿಸಿದ ಪ್ರಥಮ ಆಚಾರ್ಯರಾದ ಶ್ರೀ ರಾಮಾನುಜರನ್ನು ಕಾವ್ಯದ ಆರಂಭದಲ್ಲಿ ಸ್ಮರಿಸಿದರು. ಎಲ್ಲಕ್ಕಿಂತ ಮುಖ್ಯವಾಗಿ, ತಮ್ಮ ಈ ಹೊತ್ತಿನ ದಾಸತ್ವದ ಪ್ರತೀಕವಾದ 'ಕನಕದಾಸ' ಎಂಬ ಹೆಸರನ್ನು ಮೊಟ್ಟಮೊದಲ ಬಾರಿಗೆ ಕಾವ್ಯದಲ್ಲಿ ದಾಖಲಿಸಿ ಕಾವ್ಯಕ್ಕೊಂದು ಅಂತ್ಯ ಹಾಡಿದರು. ಹೀಗೆ ಸುದೀರ್ಘ ಅವಧಿಯ ಕಾಲ ರಚನೆಗೊಂಡ 'ಮೋಹನ ತರಂಗಿಣಿ' ಕನಕ ದಾಸರ ಬದುಕಿನ ಮುಖ್ಯ ತಿರುವಿನ ಘಟ್ಟಕ್ಕೆ ಸಾಕ್ಷಿಯಾಗಿ ನಿಂತುಕೊಂಡಿತು.

ಜ್ಞಾನದಾಹಿಯಾಗಿ

ಇಷ್ಟಾದರೂ ಕನಕದಾಸರಿಗೆ ತಮ್ಮ ದಾಸತ್ವದ ಬದುಕು ಅರೆಕೊರೆಯಿಂದ ತುಂಬಿದೆ ಎಂಬ ಭಾವನೆ ಕಾಡುತ್ತಿತ್ತು. ಜನರು ತನ್ನನ್ನು ನಂಬಿಕೊಂಡಿರುವಷ್ಟರ ಮಟ್ಟಿಗೆ ತಾವಿನ್ನು ಪರಿಪಕ್ವಗೊಂಡಿಲ್ಲ ಎಂಬ ಆಲೋಚನೆ ಸುಳಿಯುತ್ತಿತ್ತು. ತಮ್ಮ ತಂದೆ, ತಾಯಿ, ಹೆಂಡತಿ, ಮಗುವಿನ ನೆನಪು ಮತ್ತೆಮತ್ತೆ ಪೀಡಿಸಿದಂತೆ ಭಾಸವಾಗುತ್ತಿತ್ತು. ಇವೆಲ್ಲದರಿಂದ ತಮ್ಮನ್ನು ಮುಕ್ತಗೊಳಿಸುವ, ಭಕ್ತಿಯ ಬೆಳಕಿನಿಂದ ಪರಿಶುದ್ಧನಾಗಿಸುವ ಶ್ರೇಷ್ಠ ಗುರುವೊಬ್ಬರ ಹಂಬಲ ಅವರನ್ನು ಕಾಡಿತು. ಅಂತಹ ಮುಕ್ತಿಮಾರ್ಗ ತೋರುವ ಗುರುವನ್ನು ಹುಡುಕುತ್ತ ಕನಕದಾಸರು ಕಾಗಿನೆಲೆಯಿಂದ ಹೊರಟರು.

ಆ ಕಾಲಕ್ಕಾಗಲೇ ವಿಜಯನಗರ ಅರಸರಿಂದ ರಾಜಪೂಜಿತರಾದ ಮಧ್ವಯತಿ ವ್ಯಾಸರಾಜರು ತಮ್ಮ ಲೋಕೋಪಯೋಗಿ ಧರ್ಮಕಾರ್ಯಗಳಿಂದ ದೊಡ್ಡ ಹೆಸರು ಗಳಿಸಿದ್ದರು. ಕೆಲವು ವರ್ಷಗಳ ಹಿಂದಷ್ಟೇ ಕೃಷ್ಣದೇವರಾಯನಿಗೆ ಉಂಟಾಗಿದ್ದ ಕುಹು ರೋಗವನ್ನು ನಿವಾರಿಸಿದ ಕೀರ್ತಿ ಕನಕದಾಸರ ಕಿವಿಯನ್ನು ಮುಟ್ಟಿತ್ತು. ದಾಸಪರಂಪರೆಯ ಕೆಲವು ಯತಿಗಳಿಗೆ ಗುರುಗಳಾಗಿ ಸಮರ್ಥ ಮಾರ್ಗದರ್ಶನ ನೀಡುತ್ತಿರುವ ಸುದ್ದಿ ಕೂಡ ಕನಕದಾಸರನ್ನು ತಲುಪಿತ್ತು.

ವ್ಯಾಸರಾಯರು ಸಮಕಾಲೀನ ತತ್ವಜ್ಞಾನಿಗಳಲ್ಲಿ ಅಗ್ರಗಣ್ಯರೆಂದು ಹೆಸರಾದವರು. ದಕ್ಷಿಣದ ಕಾವೇರಿ ತೀರದಲ್ಲಿ ಹುಟ್ಟಿದ ಅವರು ಅಲ್ಲಿನ ತಿರುಮಕೂಡಲ ಸಂಗಮದ ಸೋಸಲೆಯಲ್ಲಿ ಮಠವೊಂದನ್ನು ಕಟ್ಟಿ ಬೆಳೆಸಿದವರು(ಅದನ್ನು ಈಗಲೂ ನಾವು ಅಲ್ಲಿ ಕಾಣಬಹುದು). ಕೃಷ್ಣದೇವರಾಯನನ್ನು ಆಪತ್ತಿನ ಸಂದರ್ಭದಲ್ಲಿ ಭೇಟಿಯಾದ ಅನಂತರ ಅಲ್ಲೇ ರಾಜಗುರುವಾಗಿ ಹೆಸರಾದರು. ಹತ್ತಿರದ ಮದನಪಲ್ಲಿಯಲ್ಲಿ ರಾಜ ಅವರಿಗೆ ಪ್ರತಿಫಲವಾಗಿ ಭೂಮಿಕಾಣಿಕೆ ನೀಡಿ ಸೂಕ್ತ ವಸತಿಯ ವ್ಯವಸ್ಥೆಯನ್ನು ಮಾಡಿದ್ದ. ಅಲ್ಲಿ ಅವರು ಕೆರೆಕಟ್ಟೆಗಳನ್ನು ಕಟ್ಟುತ್ತಾ ಹರಿಸೇವೆಯಲ್ಲಿ ನಿರತರಾಗಿದ್ದರು.

ಅವರು ಆರಂಭದಲ್ಲಿ ಸಂಸ್ಕೃತ ಪ್ರೀತಿಯಿಂದ ಶಾಸ್ತ್ರನಿಷ್ಠವಾದ ವ್ಯಾಸಕೂಟವನ್ನು ಸ್ಥಾಪಿಸಿದರು. ಆದರೆ ಕಾಲಕ್ರಮೇಣ ತಮ್ಮ ಗುರು ಶ್ರೀಪಾದರಾಯರ ದಾರಿಯಲ್ಲಿ ಕ್ರಮಿಸಿ, ತಿಳಿಗನ್ನಡ ಸಂವರ್ಧನೆಯ ದಾಸಕೂಟವನ್ನು ಕಟ್ಟಿದರು. ಅದರ ಸಂರಕ್ಷಣೆ ಮತ್ತು ಸಂಗೋಪನೆಗೆ ವಿಶೇಷ ಆದ್ಯತೆ ನೀಡಿದರು. ಅಂತಹ ವ್ಯಾಸರಾಯರ ಮಹಿಮಾಮಯ ವ್ಯಕ್ತಿತ್ವಕ್ಕೆ ಮನಸೋತು, ಅವರಲ್ಲಿದ್ದ ದೈವೀಸಂಪತ್ತಿನ ತತ್ವಚಿಂತನೆಯನ್ನು ದರ್ಶಿಸುವ ಹಂಬಲದಿಂದ ಕನಕದಾಸರು ಮದನಪಲ್ಲಿಯ ಕಡೆಗೆ ಬಂದರು.

ಕನಕದಾಸರು ಮತ್ತು ವ್ಯಾಸರಾಯರ ಪ್ರಥಮ ಭೇಟಿಯ ಕುರಿತ ಕಥೆಯೊಂದು ಪ್ರಚಲಿತದಲ್ಲಿದೆ. ಅದರ ಪ್ರಕಾರ, ವ್ಯಾಸರಾಯರು ಆಗ ಮದನಪಲ್ಲಿಯ ಸಮೀಪದ ಕಂದಕೂರಿನಲ್ಲಿ 'ವ್ಯಾಸ ಸಮುದ್ರ' ಎಂಬ ಹೆಸರಿನ ಬೃಹತ್ ಕೆರೆಯೊಂದನ್ನು ಕಟ್ಟಿಸುವ ತಯಾರಿಯಲ್ಲಿದ್ದರು. ಆ ಸಂದರ್ಭದಲ್ಲಿ ಕೆರೆಯ ತೂಬಿನ ಕಾಮಗಾರಿಗೆ ಅಡ್ಡಿಯಾಗಿ ದೊಡ್ಡದೊಂದು ಬಂಡೆ ಅಡ್ಡಬಂದಿತ್ತು. ಅದನ್ನು ಅಲ್ಲಿಂದ ದೂರ ಸರಿಸುವ ದಾರಿ ತಿಳಿಯದೆ ಅವರು ಪೇಚಾಡುತ್ತಿದ್ದರು. ಅದೇ ಹೊತ್ತಿಗೆ ಸರಿಯಾಗಿ ಕನಕದಾಸರು ಗುರುಗಳನ್ನು ಭೇಟಿಯಾಗಲು ಅಲ್ಲಿಗೆ ಬಂದರು. ಬಂದು ವ್ಯಾಸರಾಯರನ್ನು ಕಂಡು ನಮಸ್ಕರಿಸಿ ತಮ್ಮ ಪರಿಚಯ ಹೇಳಿಕೊಂಡರು:

"ಸ್ವಾಮಿ ನಾನು ಕನಕ, ಬಹುದೂರದಿಂದ ನಿಮ್ಮನ್ನು ಕಾಣಲು ಬಂದಿದ್ದೇನೆ. ನನ್ನನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಳ್ಳುವಿರಾ" ಎಂದು ಭಕ್ತಿಪೂರ್ವಕವಾಗಿ ಪ್ರಾರ್ಥಿಸಿದರು.

ಅದಕ್ಕೆ ವ್ಯಾಸರಾಯರು, "ನೀನು ಯಾವ ಕನಕ, ಊರು ಕುಲಗೋತ್ರಗಳ ಮೂಲಕ ಸರಿಯಾಗಿ ತಿಳಿಸಬಾರದೆ" ಎಂದು ಪ್ರಶ್ನಿಸಿದರು.

ಕನಕದಾಸರು, "ನಾನು ಬಾಡ ಗ್ರಾಮದ ಬೀರಪ್ಪನಾಯಕನ ಮಗ, ನನ್ನದು ಕುರುಬರ ಕುಲ, ನನ್ನನ್ನು ಪಾವನ ಮಾಡುವ ಮಂತ್ರ ಹೇಳಿಕೊಡಿ" ಎಂದರು.

ವ್ಯಾಸರಾಯರು ವ್ಯಂಗ್ಯವಾಗಿ, "ಕುರುಬನಿಗೇನು ಮಂತ್ರವೋ ಕೋಣನ ಮಂತ್ರ" ಎಂದು ನುಡಿದರು.

ಏಕಾಗ್ರ ಚಿತ್ತದ ಭಾಗವತ ಶಿರೋಮಣಿ ಕನಕದಾಸರಿಗೆ ಇಷ್ಟು ಸಾಕಾಯಿತು. ಪರಮಾತ್ಮನ ಸಂಪೂರ್ಣ ಅನುಗ್ರಹ ಪಡೆಯಲು ಅದನ್ನೇ ವರಮಂತ್ರವೆಂದು ಭಾವಿಸಿದರು. ಗುರುಗಳಿಗೆ ಭಕ್ತಿಭಾವದಿಂದ ನಮಿಸಿ, ಅಲ್ಲೇ ಹತ್ತಿರದ ಮರದ ನೆರಳಲ್ಲಿದ್ದ ಬಂಡೆಯನ್ನೇರಿ ಕುಳಿತು ಒಂದೇ ಮನಸ್ಸಿನಿಂದ 'ಕೋಣ ಕೋಣ ಕೋಣ' ಎಂದು ಪುನರಪಿ ಜಪಿಸತೊಡಗಿದರು. ನಿಷ್ಠೆಯಿಂದ ಜಪಿಸಿದ ಮಂತ್ರ ಸಾರ್ಥಕ ಫಲ ಕೊಟ್ಟಿತು. ಸಾಕ್ಷಾತ್ ಯಮಧರ್ಮನ ಕೋಣವೇ ಎದುರು ಬಂದು ನಿಂತಿತು.

ತಕ್ಷಣವೇ ಗುರುಗಳ ಬಳಿಗೆ ಬಂದ ಕನಕದಾಸರು, "ಗುರುಗಳೇ ದೇವಲೋಕದಿಂದ ಕೋಣ ಬಂದಿದೆ. ಅದರಿಂದ ಇದೀಗ ಏನಾಗಬೇಕಿದೆ ಹೇಳಿ" ಎಂದು ನಮ್ರತೆಯಿಂದ ಕೇಳಿದರು.

ವ್ಯಾಸರಾಯರು ಈ ಅಪೂರ್ವ ದೃಶ್ಯವನ್ನು ಮೈದುಂಬಿಕೊಂಡರು. ತಮ್ಮ ಕಣ್ಣನ್ನು ತಾವೇ ನಂಬದಾದರು. ಆಗ ತೂಬಿನ ಕಟ್ಟಡಕ್ಕೆ ಅಡಚಣೆಯಾಗಿದ್ದ ಬಂಡೆಯನ್ನು ಆ ಕೋಣನಿಂದ ತೆಗೆಸಲು ತಿಳಿಸಿದರು. ಕನಕದಾಸರು ಹಾಗೇ ಮಾಡಿದರು. ಅಂದಿನಿಂದ ಕನಕರ ಈ ಘನಮಹಿಮೆಯನ್ನು ಸಾರುವ ಆ ತೂಬು 'ಕೋಣನ ತೂಬು' ಎಂದು ಹೆಸರಾಯಿತಂತೆ!

ಕನಕದಾಸರ ಭಕ್ತಿಜ್ಞಾನದ ಯೋಗ್ಯತೆಯನ್ನು ಕಣ್ಣಾರೆ ಕಂಡ ರಾಯರು ಅವರಿಗೆ ಆ ಕ್ಷಣವೇ ಶಿಷ್ಯತ್ವವನ್ನು ಕರುಣಿಸಿದರು. ಮುಂದೆ ಅವರು ವ್ಯಾಸರಾಯರ ಅಚ್ಚುಮೆಚ್ಚಿನ ಶಿಷ್ಯರಾದರು.

ಈ ಕಥೆಯು, ಆ ಕಾಲದಲ್ಲಿ ಸಾಮಾನ್ಯ ಕುಲದ ಸಾಧಕನೊಬ್ಬ ತನ್ನ ಸಾಧಕತನವನ್ನು ತೋರಿಸಲು ಎದುರುಗೊಂಡ ಅಗ್ನಿಪರೀಕ್ಷೆಯ ಸಂಗತಿಯನ್ನು ಬಚ್ಚಿಟ್ಟುಕೊಂಡಿದೆ. ಅಲ್ಲದೆ ಅಂತಹ ಮಡಿವಂತ ಪರಿಸರದಲ್ಲಿಯೂ ನಿರ್ಭೀತಿಯಿಂದ ಪಾಲ್ಗೊಂಡುದರ ಜೊತೆಗೆ, ಅವರಲ್ಲಿದ್ದ ಜ್ಞಾನಭಕ್ತಿಯ ಏಕಾಗ್ರತೆಯ ಎತ್ತರ ಎಷ್ಟಿತ್ತು ಎಂಬುದಕ್ಕೆ ಇದು ಸಾಕ್ಷಿಯಾಗಿ ಬೆಳೆದುನಿಂತಿದೆ.

ಹೀಗೆ ಅಗ್ನಿಪರೀಕ್ಷೆಯನ್ನು ಹಾದು ಬಂದು ವ್ಯಾಸರಾಯರ ಅಚ್ಚುಮೆಚ್ಚಿನ ಶಿಷ್ಯರಾಗುವುದರ ಜೊತೆಗೆ ಕನಕರಿಗೆ ಪುರಂದರದಾಸ, ವಾದಿರಾಜ, ವಿಜಯೇಂದ್ರ ಮೊದಲಾದ ಸಹಯತಿಗಳ ಪರಿಚಯವಾಯಿತು. ಆದರೂ ಅವರೆಲ್ಲ ಮುಕ್ತಮನದ ಚಿಂತಕರಾಗಿದ್ದಷ್ಟು ಆ ಮಠದಲ್ಲಿದ್ದ ವ್ಯಾಸರಾಯರ ಕೆಲವು ಕರ್ಮಠ ಶಿಷ್ಯರು ಮುಕ್ತ ಮನಸ್ಸಿನವರಾಗಿರಲಿಲ್ಲ. ಹೆಜ್ಜೆಹೆಜ್ಜೆಗೆ ಅವರೆಲ್ಲ ಕನಕದಾಸರನ್ನು ಜಾತಿಯ ಹೆಸರಿನಲ್ಲಿ ಹೀಯಾಳಿಸುತ್ತಿದ್ದರು. ಕನಕದಾಸರು ಮಾತ್ರ ನಿರ್ಲಿಪ್ತ ಚಿತ್ತದಿಂದ ಅವರೆಲ್ಲರ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು:

ಯಾತರವನೆಂದು ಉಸುರಲಿ
ಜಗನ್ನಾಥ ಮಾಡಿದ ಒಂದು ನರರೂಪವಯ್ಯಾ

ಮುಟ್ಟು ಹುಟ್ಟಿನೊಳು ನೆಟ್ಟನೆ ನಾ ಬಂದೆ
ತೊಟ್ಟಿದ್ದೆನಾಗ ತೊಗಲ ಬಕ್ಕಣ
ಇಷ್ಟರೊಳಗೆ ಒಂದು ವಿವರವರಿಯದಂಥ
ಭ್ರಷ್ಟಗೆ ನನಗಿನ್ಯಾತರ ಕುಲವಯ್ಯ

ಇನ್ನೂ ಹಠವಿಡಿದು ನಿರ್ದಿಷ್ಟ ಜಾತಿಕುಲವನ್ನೇ ಪ್ರಶ್ನಿಸುವ ಮರ್ಮಭೇದಕ ಮಾತುಗಳನ್ನು ಆಡಿದವರಿಗೆ:

ಬಗೆಯಿಂದ ನಾರಾಯಣನು ಯಾವ ಕುಲದವ
ಅಗಜವಲ್ಲಭನು ಯಾತರ ಕುಲದವನು
ಆತ್ಮಾಂತರಾತ್ಮ ನೆಲೆಯಾದಿ ಕೇಶವ
ಆತನೊಲಿದ ಮೇಲೆ ಯಾತರ ಕುಲವಯ್ಯ – ಎಂದು ಉತ್ತರಿಸುತ್ತಿದ್ದರು.

ಆದರೂ ಕುರುಬ ಕುಲದವನೊಬ್ಬನು ವ್ಯಾಸರಾಯರ ಆಪ್ತ ಶಿಷ್ಯನಾದುದು ಉಳಿದವರಿಗೆ ಸಹಿಸಲಾಗದ ಸಂಗತಿಯಾಗಿತ್ತು. ಹಲವು ಅಡೆತಡೆಗಳ ನಡುವೆ ತಮ್ಮ ಅಚಲನಿಷ್ಠೆ ಮತ್ತು ಏಕಾಗ್ರಭಕ್ತಿಯಿಂದ ಸಂಪಾದಿಸಿದ ಅಪೂರ್ವ ಜ್ಞಾನವನ್ನು ಕಂಡು ಅವರೆಲ್ಲ ಹೊಟ್ಟೆಕಿಚ್ಚು ಪಡತೊಡಗಿದರು. ಕನಕರ ಉಕ್ತಿಚಾತುರ್ಯ, ಕಾವ್ಯ ನಿದರ್ಶನಗಳ ಉಲ್ಲೇಖ, ಶಾಸ್ತ್ರಗಳನ್ನು ತರ್ಕಕ್ಕೊಡ್ಡುವ ತಜ್ಞತೆ ಕಂಡು ಅವರೆಲ್ಲ ಸಹಿಸದಾದರು. ಆದ್ದರಿಂದ ಸಂದರ್ಭ ಸಿಕ್ಕಾಗಲೆಲ್ಲ ಕನಕದಾಸರನ್ನು ಅವಮಾನಕ್ಕೆ ಈಡು ಮಾಡಿದರು. ಜಾತಿಯ ಹುಟ್ಟನ್ನು ಎತ್ತಿ ಆಡಿದರು. ಒಳಗೊಳಗೆ ವಿಷಕಾರಿದರು. ದೊಡ್ಡವರ ಬಳಿ ಸಣ್ಣತನದಲ್ಲಿ ಚಾಡಿ ಹೇಳಿದರು.

ವ್ಯಾಸರಾಯರು ಕನಕದಾಸರ ಜ್ಞಾನಶಕ್ತಿಯನ್ನೂ, ಕಾವ್ಯಪ್ರತಿಭೆಯನ್ನೂ ಚೆನ್ನಾಗಿ ಅರಿತಿದ್ದರು. ತಮ್ಮ ಶಿಷ್ಯರಿಗೆ ಅದನ್ನು ನಿದರ್ಶನ ಸಮೇತ ಪರಿಚಯಿಸಬೇಕೆಂಬುದು ಅವರ ಅಂತರಂಗದ ಬಯಕೆಯಾಗಿತ್ತು. ಆಗಾಗ ಕನಕರನ್ನು ಶಿಷ್ಯರೆದುರು ಹಲವು ಬಗೆಯಲ್ಲಿ ಜ್ಞಾನಪರೀಕ್ಷೆಗೆ ಒಡ್ಡುತ್ತಿದ್ದರು. ಆಗೆಲ್ಲ ಕನಕದಾಸರು ತಮ್ಮ ಸಾಮರ್ಥ್ಯವನ್ನು ಒರೆಹಚ್ಚಿ ಸಾಬೀತುಪಡಿಸಬೇಕಾಗಿದ್ದಿತು. ಅಂತಹ ಕೆಲವು ಪ್ರಸಂಗಗಳು ಪವಾಡಗಳ ಕವಚ ಧರಿಸಿ ಜನರ ಬಾಯಲ್ಲಿ ಇಂದಿಗೂ ಉಳಿದುಕೊಂಡಿವೆ. ಅವುಗಳೆಂದರೆ:

ಬಾಳೆಹಣ್ಣಿನ ಪ್ರಸಂಗ

ಗುರುಮಠದಲ್ಲಿ ಒಂದೊಂದು ದಿವಸ ಒಂದೊಂದು ವಿಚಾರವನ್ನು ಕುರಿತು ಪ್ರವಚನ ಮತ್ತು ಚರ್ಚೆ ನಡೆಸುವ ವಾಡಿಕೆಯಿತ್ತು. ಅದರಂತೆ ಒಂದು ದಿನ ಮಠದ ಎಲ್ಲ ಶಿಷ್ಯರೂ

ಗುರುಗಳ ಸಮ್ಮುಖದಲ್ಲಿ ಸಭೆ ಸೇರಿದರು. ಎಂದಿನಂತೆ ಅಂದೂ ಕೂಡ ತತ್ವಜ್ಞಾನಕ್ಕೆ ಸಂಬಂಧಪಟ್ಟಂತೆ ಪ್ರವಚನ ಗಂಭೀರವಾಗಿ ಆರಂಭಗೊಂಡು ಮುಗಿಯಿತು. ಅಂದು 'ಹರಿದಿವಸ', ಅಂದರೆ ಏಕಾದಶಿ. ಆದ್ದರಿಂದ ಅಲ್ಲಿದ್ದ ಎಲ್ಲ ಶಿಷ್ಯರಿಗೂ ಪ್ರಸಾದ ರೂಪವಾಗಿ ಒಂದೊಂದು ಬಾಳೆಯ ಹಣ್ಣನ್ನು ಕೊಟ್ಟರು. ಜೊತೆಗೆ ಈ ಹಣ್ಣನ್ನು ಪ್ರತಿಯೊಬ್ಬರೂ ಯಾರಿಗೂ ಕಾಣದ ಗುಪ್ತ ಸ್ಥಳಗಳಲ್ಲಿ ತಿನ್ನಬೇಕೆಂದು ಆಜ್ಞಾಪಿಸಿದರು. ಕನಕದಾಸರಿಗೂ ಎಲ್ಲರಿಗೆ ಕೊಟ್ಟಂತೆ ಹಣ್ಣನ್ನು ಕೊಟ್ಟು ಅವರಿಗೂ ಹಾಗೆಯೇ ಹೇಳಿದರು.

ಮರುದಿನ ಎಂದಿನಂತೆ ಪುನಃ ವಿಚಾರಗೋಷ್ಠಿ ನಡೆದು ತತ್ವಚಿಂತನೆ ಪ್ರಾರಂಭವಾಯಿತು. ಗೋಷ್ಠಿ ಪ್ರಾರಂಭವಾಗುವ ಪೂರ್ವದಲ್ಲಿ ವ್ಯಾಸರಾಯರು, "ನಿನ್ನೆಯ ದಿನ ನಾವು ಪ್ರಸಾದವಾಗಿ ಕೊಟ್ಟ ಬಾಳೆಯ ಹಣ್ಣನ್ನು ಯಾರು ಯಾರು ಎಲ್ಲೆಲ್ಲಿ ತಿಂದಿರಿ" ಎಂದು ಪ್ರಶ್ನಿಸಿದರು. ಅವರೆಲ್ಲರೂ ತಾವು ತಾವು ತಿಂದ ಗುಪ್ತ ಸ್ಥಳಗಳ ಹೆಸರನ್ನು ಹೇಳಿದರು. ಆಗ ಸ್ವಾಮಿಗಳು "ಕನಕದಾಸ, ನೀನೆಲ್ಲಿ ತಿಂದೆ?" ಎಂದು ಪ್ರಶ್ನಿಸಿದರು.

ಕನಕದಾಸರು ಏನೂ ಮಾತನಾಡದೆ ತಾವು ತಿನ್ನದೆ ಹಾಗೆಯೇ ಇಟ್ಟುಕೊಂಡಿದ್ದ ಹಣ್ಣನ್ನು ವ್ಯಾಸರಾಯರ ಎದುರಿನಲ್ಲಿ ತಂದಿಟ್ಟು "ಸ್ವಾಮಿ, ನನಗೆ ಯಾರೂ ಕಾಣದಂತಹ ಏಕಾಂತ ಸ್ಥಳ ಎಲ್ಲಿಯೂ ಸಿಕ್ಕಲೇ ಇಲ್ಲ. ಪೃಥ್ವಿ ಅಪ್ಪು ತೇಜಸ್ಸು ವಾಯು ಆಕಾಶಾದಿಗಳು ಕಾಣದ, ಸೂರ್ಯ ಚಂದ್ರಾದಿ ದೇವತೆಗಳಿಲ್ಲದ, ಸರ್ವಸಾಕ್ಷ್ಯನೂ, ಸರ್ವಾಂತರ್ಯಾಮಿಯೂ ಆದ ಪರಮಾತ್ಮನು ಗೋಚರಿಸದ ಕಿಂಚಿತ್ ಸ್ಥಳವೂ ಲಭ್ಯವಾಗಲಿಲ್ಲ. ಕ್ಷಮಿಸಬೇಕು. ಆದ್ದರಿಂದ ಹಣ್ಣನ್ನು ನಿಮ್ಮೆದುರಿಗೆ ಇಟ್ಟಿದ್ದೇನೆ" ಎಂದು ಬಿನ್ನವಿಸಿಕೊಂಡರು.

ಈ ಮಾತನ್ನು ಕೇಳಿ, ಪ್ರಗಾಢ ಪಂಡಿತರೂ ವಾಕ್ಯಾರ್ಥ ಕೋವಿದರೂ ಎಂದು ಮುಂತಾಗಿ ತಮ್ಮನ್ನು ಕರೆದುಕೊಳ್ಳುವ ಶಿಷ್ಯರೆಲ್ಲರೂ ಕೈ ಕೈ ಹಿಚುಕಿಕೊಳ್ಳುತ್ತ, ಕನಕದಾಸರನ್ನೇ ಮಾತ್ಸರ್ಯ ದೃಷ್ಟಿಯಿಂದ ನೋಡತೊಡಗಿದರು. "ಈ ವಿಚಾರಗಳು ನಮಗೆ ತಿಳಿದಿದ್ದರೂ ಸಕಾಲಕ್ಕೆ ಅನುಭವಕ್ಕೆ ಬರಲಿಲ್ಲವಲ್ಲಾ!" ಎಂದು ಮರುಗಿದರು.

ಆಗ ವ್ಯಾಸರಾಯರು ಕನಕದಾಸರನ್ನು ಹೆಮ್ಮೆಯಿಂದ ನೋಡಿ ಉಳಿದ ಶಿಷ್ಯರ ಕಡೆ ದೃಷ್ಟಿ ಬೀರಿದರು. ಎಲ್ಲರ ಮುಖಗಳು ಅಪಮಾನದಿಂದ ಸೊರಗಿದವು. ಆಗ ಗುರುಗಳು "ನೋಡಿ ಮೂಢ ಜನರೇ, ಕನಕದಾಸನು ಆಡಿದ ಮಾತುಗಳನ್ನು ಕೇಳಿ. ಇವನಿಗೆ ಈ ನಾಡಿನ ತುಂಬ ಹುಡುಕಿದರೂ ಸಮನಾಗುವವರ ನಾನು ಕಾಣೆ" ಎಂದು ಹಾಡಿ ಹೊಗಳಿದರು.

ಈತನೀಗ ವಾಸುದೇವನು

ವ್ಯಾಸರಾಯರು ಒಮ್ಮೆ ಅಂಗಳದಲ್ಲಿ ಪ್ರವಚನದಲ್ಲಿ ತೊಡಗಿದ್ದರು. ಅವರಿಗೆ ತಮ್ಮ ಶಿಷ್ಯರು ದೇವರಲ್ಲಿ ಇಟ್ಟಿರುವ ಭಕ್ತಿಯ ಮಹಿಮೆಯನ್ನು ತಿಳಿಯುವ ಕುತೂಹಲವಾಯಿತು.

ಆಗ ಇದ್ದಕ್ಕಿದ್ದಂತೆ ತಮ್ಮ ಹಿಡಿಯನ್ನು ಮುಚ್ಚಿಕೊಂಡು "ಇದರಲ್ಲಿ ಏನಿದೆ?" ಎಂದು ಎಲ್ಲರನ್ನು ಕೇಳಿದರು. ಪ್ರತಿಯೊಬ್ಬರೂ ತಮತಮಗೆ ತೋಚಿದ್ದನ್ನು ಹೇಳಿದರು. ಯಾರಿಗೂ ಮುಷ್ಟಿಯೊಳಗೆ ನಿಜವಾಗಿ ಇದ್ದದ್ದನ್ನು ಹೇಳಲಾಗಲಿಲ್ಲ. ಕನಕದಾಸರನ್ನು ಕೇಳಿದಾಗ ಅವರು:

ಈತನೀಗ ವಾಸುದೇವನು
ಈತನೀಗ ವಾಸುದೇವನು ಈ ಸಮಸ್ತ ಲೋಕದೊಡೆಯ
ದೂತಗೊಲಿದು ತೇರನೇರಿ ತೇಜಿಪಿಡಿದು ನಡೆಸಿದಾತ...

– ಎಂದು ಎದೆತುಂಬಿ ಹಾಡಿದರು.

ವ್ಯಾಸರಾಯರು ತಮ್ಮ ಮುಷ್ಟಿಯನ್ನು ತೆರೆದು ತೋರಿಸಿದಾಗ, ನಿಜವಾಗಿ ವಾಸುದೇವ ಇದ್ದ ಒಂದು ಸಾಲಿಗ್ರಾಮ ಇತ್ತು. ಗುರುಗಳು ಕನಕದಾಸರ ಮನಸ್ಸಿನಲ್ಲಿ ಸದಾ ವಾಸುದೇವನೇ ತುಂಬಿರುವುದನ್ನು ಸಭೆಗೆ ತಿಳಿಸುತ್ತ, "ಕನಕದಾಸರ ಮನಸ್ಸಿನಲ್ಲಿ ಶ್ರೀಹರಿಯನ್ನು ಬಿಟ್ಟು ಬೇರೆ ಯಾವ ವಿಚಾರವೂ ಸುಳಿಯುವುದಿಲ್ಲ ಎಂಬುದಕ್ಕೆ ಈ ಉತ್ತರ ಸಾಕು" ಎಂದು ಪ್ರಶಂಶಿಸಿದರು.

ನಾನು ಹೋದರೆ ಹೋದೇನು

ಇನ್ನೊಂದು ಸಲ ಒಂದು ಚರ್ಚಾಗೋಷ್ಠಿಯಲ್ಲಿ ವ್ಯಾಸರಾಯರು ತಮ್ಮ ಶಿಷ್ಯರಿಗೆ "ಸ್ವರ್ಗಕ್ಕೆ ಯಾರು ಹೋಗುತ್ತೀರಿ" ಎಂಬ ವಿಷಯ ಮುಂದಿಟ್ಟರು. ಎಲ್ಲರೂ ತಾವು ಬಾಯಿಪಾಠ ಮಾಡಿದ್ದ ಧರ್ಮ, ತತ್ವಜ್ಞಾನಗಳ ಬಗ್ಗೆ ತಲೆ ಕೆಡಿಸಿಕೊಂಡು ತಮ್ಮ ತಮ್ಮ ಶಕ್ತ್ಯಾನುಸಾರವಾಗಿ ಉತ್ತರ ಹೇಳಿದರು. ಆದರೆ ಸರಿಯಾದ ಉತ್ತರ ಯಾರಿಂದಲೂ ಬರಲಿಲ್ಲ.

ಆಗ ಗುರುಗಳು ಕನಕದಾಸರನ್ನು ಕರೆದು ಕೇಳಿದರು. ಕನಕದಾಸರು ಹಸನ್ಮುಖಿಯಾಗಿ "ನಾನು ಹೋದರೆ ಹೋದೇನು" ಎಂದರು.

ಅಲ್ಲಿ ಸೇರಿದ್ದ ಪಂಡಿತರಿಗೆ ರೋಸಿಹೋಯಿತು. "ವೇದ ಶಾಸ್ತ್ರ ಪಾರಂಗತರಾದ ಬ್ರಾಹ್ಮಣರಿಗಲ್ಲದೆ ಈ ಹೀನಕುಲದಲ್ಲಿ ಹುಟ್ಟಿದವನದು ಎಂಥ ಉದ್ಧಟತನದ ಮಾತು" ಎಂದು ಕಿಡಿಕಾರಿದರು. ಆಗ ಕನಕದಾಸರು ಶಾಂತ ರೀತಿಯಲ್ಲಿ "ಪಂಡಿತರೆ ಕೇಳಿ. ನಾನು ತಮ್ಮನ್ನಾಗಲೀ, ದಾಸರನ್ನಾಗಲೀ, ಸ್ವಾಮಿಗಳನ್ನಾಗಲೀ ಅಪಮಾನ ಮಾಡುತ್ತಿಲ್ಲ. ನನ್ನ ಮಾತನ್ನು ಅರ್ಥ ಮಾಡಿಕೊಳ್ಳಿ. 'ನಾನು' ಅಂದರೆ 'ಅಹಂಕಾರ' ; ಅದು ನಾಶವಾಗಿ ಹೋದರೆ ಆಗ ಯಾರಾದರೂ ಹೋಗಬಹುದು ಎಂಬುದಾಗಿ ನಾನು ಹೇಳಿದ್ದು" ಅಂದರು.

ಈ ರೀತಿ, ಒಂದು ಮಾತಿನಲ್ಲಿ ಅಪಾರ ಅರ್ಥ ಅಡಗಿಸಿ ಹೇಳುವ ಕನಕದಾಸರ ಮಾತಿಗೆ ಗುರುಗಳು ತಲೆದೂಗಿದರು. ರೋಷಗೊಂಡಿದ್ದ ಶಿಷ್ಯವೃಂದ ಕೂಡಲೇ ಮರುಮಾತಿಲ್ಲದೆ ತಣ್ಣಗಾಯಿತು.

ದೈವಸಾಕ್ಷಾತ್ಕಾರ

ವ್ಯಾಸರಾಯರು ಮತ್ತೊಮ್ಮೆ ತುಂಬಿದ ಸಭೆಯ ಮಧ್ಯೆ ಕನಕರನ್ನು ಕರೆದು, "ನೀನು ನಮ್ಮೆಲ್ಲರಿಗೆ ನಿನ್ನ ನೆಚ್ಚಿನ ದೇವರನ್ನು ತೋರಿಸುವೆಯಾ?" ಎಂದು ಕೇಳಿದರು. ಕನಕದಾಸರು ಆಗಲಿ ಎಂದು ಒಪ್ಪಿಕೊಂಡರು. ಸುತ್ತ ನೆರೆದಿದ್ದ ಪಂಡಿತರಿಗೆ ಇದು ತೀರಾ ಹಾಸ್ಯಾಸ್ಪದವಾಗಿ ತೋರಿತು. ಆದರೂ ಕುತೂಹಲದಿಂದ ಕಾದರು.

ಕನಕದಾಸರು ತಮ್ಮ ಪೂಜೆಯ ವೇಳೆಯಲ್ಲಿ ಶ್ರೀಹರಿಗೆ ಬಂದು ದರ್ಶನ ಕೊಡುವಂತೆ ಪ್ರಾರ್ಥಿಸಿಕೊಂಡರು. ಕನಕದಾಸರು ಅಪೇಕ್ಷಿಸಿದಂತೆ ದೇವರು ನಾಯಿ ವೇಷದಲ್ಲಿ ಬಂದ. ಆದರೆ ಇವನು ಶ್ರೀಹರಿಯೆಂದು ಯಾರಿಗೂ ಅರಿವಾಗಲಿಲ್ಲ. ಬದಲು, ಹೊಡೆದು ಓಡಿಸಿದರು.

ಇದನ್ನು ಗ್ರಹಿಸಿದ್ದ ವ್ಯಾಸರಾಯರು ಮಧ್ಯಾಹ್ನದ ಸಭೆಯಲ್ಲಿ ಕನಕದಾಸರಿಗೆ ಏಕೆ ದೇವರನ್ನು ತೋರಿಸಲಿಲ್ಲವೆಂದರು. ಅದಕ್ಕೆ ಕನಕದಾಸರು "ಮೈಲಿಗೆಯಲ್ಲಿ ಬಂದುದರಿಂದ ಅವನು ಇವರ ಕೈಯಿಂದ ಏಟು ತಿಂದು ಹೋದನಲ್ಲ" ಎಂದರು. ವ್ಯಾಸರಾಯರು "ದೇವರನ್ನು ನಾಯಿಯಾಗಿ ಪೂಜಿಸುವುದು ಕಷ್ಟ. ಮಡಿಯಾಗಿ ಬರುವಂತೆ ಹೇಳು" ಅಂದರು. ದಾಸರು ಒಪ್ಪಿದರು. ಶ್ರೀಹರಿ ಮಾರನೆಯ ದಿನ ಹಾವಿನ ರೂಪದಲ್ಲಿ ಬಂದ. ಶಿಷ್ಯಜನ ಹೆದರಿದರು. ವ್ಯಾಸರಾಯರು ಹಾಲನ್ನು ಭಗವಂತನಿಗೆ ನೀಡಿದರು. ಓಡುತ್ತಿದ್ದವರು ನಿಂತು ಶ್ರೀಹರಿಯ ದರ್ಶನ ಪಡೆದರು.

ಇಷ್ಟೆಲ್ಲ ಪರೀಕ್ಷೆಗಳಲ್ಲಿ ಕನಕದಾಸರು ಅಪರಂಜಿ ಚಿನ್ನವಾಗಿ ಹೊರಹೊಮ್ಮಿದ ಮೇಲೂ ಸಂಕುಚಿತ ಬುದ್ಧಿಯ ಸಹಾಭ್ಯಾಸಿಗಳಿಂದ ಅಪಮಾನ, ಹೀಯಾಳಿಕೆ ತಪ್ಪಲಿಲ್ಲ. ಅವರುಗಳು ಮೇಲಿಂದ ಮೇಲೆ ಕುಲದ ಮೂಲ ಹಿಡಿದು ಚುಚ್ಚು ಮಾತುಗಳಿಂದ ಅವಹೇಳನ ಮಾಡುತ್ತಲೇ ಇದ್ದರು. ಹಾಗೆ ಕುಲಕುಲವೆಂದು 'ವ್ಯಾಕುಲ' ಪಡುವವರ ಎದುರು ನಿಂತು:

ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರು ಬಲ್ಲಿರ
ಜಲವೆ ಸಕಲ ಕುಲಕ್ಕೆ ತಾಯಲ್ಲವೆ
ಜಲದ ಕುಲವನೇನಾದರು ಬಲ್ಲಿರ
ಜಲದ ಬಬ್ಬುಳಿಯಂತೆ ಸ್ಥಿರವಲ್ಲವೀ ದೇಹ
ನೆಲೆಯನರಿತು ನೀ ನೆನೆ ಕಂಡ್ಯ ಮನುಜ

***

ಕುಲ ಕುಲವೆನ್ನುತಿಹರು
ಕುಲವ್ಯಾವುದೋ ಸತ್ಯ ಸುಖವುಳ್ಳ ಜನರಿಗೆ

ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ವೇಂದ್ರಿಯಗಳ ಕುಲ ಪೇಳಿರಯ್ಯ
ಆತ್ಮಾಂತರಾತ್ಮ ನೆಲೆಯಾದಿಕೇಶವನು
ಆತನೊಲಿದ ಮೇಲೆ ಯಾತರ ಕುಲವಯ್ಯ

– ಎಂದು ಮರುಪ್ರಶ್ನೆ ಹಾಕುತ್ತಿದ್ದರು. ಆದರೆ, ಪರಮ ಸಹೃದಯರಾಗಿದ್ದ ಕನಕದಾಸರು ಈ ಬಗೆಯ ಅವಹೇಳನ ಪ್ರಸಂಗಗಳಿಂದ ತಾಳ್ಮೆ ಕಳೆದುಕೊಳ್ಳುತ್ತಿರಲಿಲ್ಲ. ಯಾವುದೇ ತರಹದ ಕಹಿಯನ್ನು ಎದೆಯಲ್ಲಿ ತುಂಬಿಕೊಳ್ಳುತ್ತಿರಲಿಲ್ಲ. ಅಂಥವರಿಗೆ ಹೇಗಾದರೂ ಸರಿ ಸತ್ಯಶುದ್ಧವಾದುದನ್ನು ಮನವರಿಕೆ ಮಾಡಬೇಕೆಂದು ಸದಾ ಯೋಚಿಸುತ್ತಿದ್ದರು. ಅದೇ ದಾರಿಯಲ್ಲಿ ಮುಂದುವರೆದು, ಭಕ್ತಿಯು ಬೆಳಕಾಗಿ ಬೆಳಗಬೇಕೇ ಹೊರತು ಬೆಂಕಿಯಾಗಿ ಸುಡಬಾರದೆಂಬ ಉದಾತ್ತ ನಿಲುವಿನಿಂದ ಎತ್ತರೆತ್ತರಕ್ಕೆ ಬೆಳೆಯತೊಡಗಿದರು.

ಕನಕದಾಸರ ಜೀವವಿಕಾಸದ ದಾರಿಯಲ್ಲಿ ಗುರುವರ್ಯರಾದ ವ್ಯಾಸರಾಯರ ಪಾಲು ದೊಡ್ಡದು. ಕನಕರನ್ನು ಪುಟಕ್ಕಿಟ್ಟು ಶೋಧಿಸಿ ಅಪರಂಜಿ ಮಾಡಿದ್ದೇ ಅವರು. ಅವರೊಂದಿಗೆ ಪುರಂದರದಾಸಾದಿ ಯತಿವರ್ಯರು ಕನಕದಾಸರ ಏಳಿಗೆಯ ದಾರಿಯಲ್ಲಿ ಪ್ರೇರಕಶಕ್ತಿಯಾಗಿ ನೆರವಾದುದುಂಟು. ಎಷ್ಟೋ ಸಂದರ್ಭಗಳಲ್ಲಿ ಕನಕರನ್ನು ಹೀಯಾಳಿಸುವ ದಾಸವೇಷಿಗರನ್ನು ತರಾಟೆಗೆ ತೆಗೆದುಕೊಳ್ಳುತ್ತಾ ಪುರಂದರದಾಸರು:

ದಾಸರ ನಿಂದಿಸಬೇಡಲೇ ಪ್ರಾಣಿ – ಹರಿ
ದಾಸರ ನಿಂದಿಸಬೇಡ
ಮೋಸವಾಯಿತೊ ಮನದೊಳು ಗಾಢ
ಲೇಸಾಗಿ ಇದ ತಿಳಕೊ ಮೂಢ

– ಎಂದು ಜರಿಯುತ್ತಿದ್ದರು. ಈ ರೀತಿಯಾಗಿ ಅವರೆಲ್ಲರೂ ಕುಲಜಾತಿ ಮೀರಿದ ನೈತಿಕ ಬೆಂಬಲವನ್ನು ಕೊಟ್ಟು, ಕನಕದಾಸರಂಥ ಸಂತಕವಿಯ ಸಾಧನೆಗೆ ಚಿಮ್ಮುಹಲಗೆಯಾಗಿ ಒದಗಿ ಬಂದರು.

ಕ್ಷೇತ್ರ ಯಾತ್ರೆ

ಹೀಗೆ ಕನಕದಾಸರು ಕೆಲವು ವರ್ಷಗಳ ಕಾಲ ಮಾತ್ರ ಗುರುಮಠದಲ್ಲಿದ್ದು ಭಾಗವತ ಧರ್ಮಶಾಸ್ತ್ರವನ್ನು ಕರಗತ ಮಾಡಿಕೊಂಡರು. ಗುರುಗಳಿಗೂ, ಪುರಂದರಾದಿ ಯತಿಗಳಿಗೂ ಒಲವುಳ್ಳವರಾಗಿ ತತ್ವಚಿಂತನೆಯಲ್ಲಿ ಎತ್ತರೆತ್ತರಕ್ಕೆ ಬೆಳೆದರು. ಇದೀಗ ಅವರು ನಿಂತಲ್ಲೇ ನಿಂತರೆ ಸ್ವಾಂತಿಕೆ ಬಲಿಯದೆಂಬ ಭಾವದಲ್ಲಿ ತಿರುಗಾಟಕ್ಕೆ ಸನ್ನದ್ಧರಾದರು. ಭಕ್ತಿಗೆ ಜಂಗಮತ್ವದ ಸ್ಪರ್ಶವಾದರೆ ಅದು ಕೇಡಿಲ್ಲದ ಜೀವಜ್ಞಾನವಾಗಬಹುದು. ಅಲ್ಲದೆ ತನಗೆ ದಕ್ಕಿದ ಜ್ಞಾನದ ಬೆಳಕು ಉಳಿದವರ ಕಡೆಗೂ ಹರಿಯಬೇಕಲ್ಲವೆ ಎಂಬ ಆಕಾಂಕ್ಷೆ ಅವರದಾಗಿತ್ತು. ಹಾಗಾಗಿ

ಗುರುವ್ಯಾಸರಾಯರ ಅನುಮತಿ ಪಡೆದು, ತತ್ವಸಂಗಾತಿಗಳನ್ನು ಬೀಳ್ಕೊಂಡು ಯಾತ್ರೆ ಹೊರಟರು.

ಅನುಭವ ವಿಸ್ತರಣೆ, ಹರಿಭಕ್ತಿಪ್ರಚಾರ, ಮೂಢಮತಖಂಡನೆ, ಮತಮೂಲ ವೈಷಮ್ಯ ನಿವಾರಣೆ, ಜನಜೀವನದ ನಡೆನುಡಿಗೆ ಸಂಸ್ಕಾರ – ಕನಕದಾಸರ ಸಂಚಾರದ ಮೂಲ ಉದ್ದೇಶಗಳಾಗಿದ್ದವು. ಇವೆಲ್ಲಕ್ಕಿಂತ ಮುಖ್ಯವಾಗಿ, ಸರ್ವಾಂತರ್ಯಾಮಿ ಹರಿಯ ಸುಪ್ರಸಿದ್ಧ ಪುಣ್ಯಕ್ಷೇತ್ರಗಳನ್ನು ಜೀವಿತದಲ್ಲೊಮ್ಮೆ ಕಾಣಬೇಕೆಂಬುದು ಅವರ ಮನದಿಂಗಿತವಾಗಿತ್ತು. ಶ್ರೀಹರಿಯ ಭಿನ್ನಭಿನ್ನ ರೂಪಾವತಾರಗಳ ದರ್ಶನವನ್ನು ತಮ್ಮ ಕಣ್ಣುಗಳಿಗೆ ತುಂಬಿಕೊಳ್ಳುವ ಸಾರ್ಥಕ್ಯ ಭಾವದಲ್ಲಿ ಕ್ಷೇತ್ರ ಸಂದರ್ಶನಕ್ಕೆ ಹೊರಟರು.

ಹಂಪೆಗೆ ಬಂದರು. ಅಲ್ಲಿ ತುಂಗಾನದಿಯ ಇಕ್ಕೆಲಗಳಲ್ಲಿ ಸೊಕ್ಕಿ ಮೆರೆದಿದ್ದ ದೇವಾಲಯಗಳ ಬೀಡನ್ನು ಸಂದರ್ಶಿಸಿದರು. ವಿಜಯವಿಠಲ, ಉಗ್ರನರಸಿಂಹ, ಹಜಾರ ರಾಮಸ್ವಾಮಿ – ಹೀಗೆ ಅಲ್ಲಲ್ಲಿ ವಿಷ್ಣುಸಹಸ್ರನಾಮದಂತೆ ಬೆಳೆದ ದೇಗುಲಗಳ ಸೌಂದರ್ಯ ಸವಿದರು. ಉಗ್ರನರಸಿಂಹ ಶಿಲ್ಪವನ್ನು ಕಾಣುತ್ತಿದ್ದಂತೆ ಅವರಿಗೆ ಕಾಗಿನೆಲೆಯ ನರಸಿಂಹನ ನೆನಪಾಯಿತು. ಅಷ್ಟೆತ್ತರಕ್ಕೆ ಕಲ್ಲಿನಲ್ಲಿ ಅರಳಿದ ಆ ಶಿಲ್ಪಕಾವ್ಯ ತಮ್ಮೆದೆಯಲ್ಲಿ ಸಂಗೀತದ ಹೊನಲನ್ನು ತುಳುಕಿಸಿತು.

ಕೆಲಕಾಲ ಹಂಪೆ ಕ್ಷೇತ್ರದಲ್ಲೇ ಸಂಚರಿಸುತ್ತಾ ವಿಷ್ಣುವಿನ ನರಸಿಂಹಾವತಾರದ ಮೂಲಚೂಲಗಳನ್ನು ಮಹಾಜನತೆಗೆ ಮನದಟ್ಟು ಮಾಡಿದರು. ಹಗಲಲ್ಲಿ ಬಂದವರ ಮುಂದೆಲ್ಲ ಭಕ್ತಿಪ್ರವಚನ ಮಾಡಿ ತಣಿಯುತ್ತಿದ್ದರು. ರಾತ್ರಿಯೆಲ್ಲ ಕುಳಿತು ನರಸಿಂಹಸ್ವಾಮಿಯ ಮಹಿಮೆಯನ್ನು ಸಾರುವ ಸ್ತುತಿಕಾವ್ಯ ರಚನೆಯಲ್ಲಿ ತೊಡಗುತ್ತಿದ್ದರು. ಬಹುಶಃ ಈ ಅವಧಿಯಲ್ಲಿ 97 ಸಾಂಗತ್ಯ ಛಂದಸ್ಸಿನ ಪದ್ಯಗಳ ಸ್ತುತಿಮಾಲೆ ಹೆಣೆದು ನರಸಿಂಹನ ಮುಡಿಗೆ ಮುಡಿಸಿದರು. ಅದು ಮುಂದೆ 'ನೃಸಿಂಹಸ್ತವ' ಎಂಬ ಸ್ತುತಿಕಾವ್ಯವಾಗಿ ಹೆಸರಾಯಿತು. ಆದರೆ ಈ ಕೃತಿ ನಮಗಿನ್ನೂ ಲಭ್ಯವಾಗಿಲ್ಲ.

ಅಲ್ಲಿಂದ ಮುಂದೆ ಕನಕದಾಸರು ಕನಕಗಿರಿ, ಶ್ರೀರಂಗ ಮುಂತಾದ ಕ್ಷೇತ್ರಗಳನ್ನು ಸಂದರ್ಶಿಸುತ್ತಾ ನೆರಳು ಸಿಕ್ಕಲ್ಲಿ ತಂಗುತ್ತಾ, ಹರಿನಾಮಸ್ಮರಣೆಯಲ್ಲಿ ತನ್ಮಯರಾಗಿ ಹಾಡುತ್ತಾ, ಹೋಮ-ಹವನ-ಬಲಿ ಮುಂತಾದ ತಾಮಸ ಆಚರಣೆಯಲ್ಲಿ ತೊಡಗಿರುವ ಜನರಲ್ಲಿ ಸಾತ್ವಿಕ ಭಕ್ತಿಯ ತತ್ವವಿಚಾರಗಳ ಬೀಜಬಿತ್ತುತ್ತಾ ಪಾದಯಾತ್ರೆ ಮಾಡತೊಡಗಿದರು. ದಾರಿಯುದ್ದಕ್ಕೂ ಕಾಲಿಟ್ಟಲ್ಲಿ ಮಣ್ಣು-ಕಲ್ಲುಗಳನ್ನೆಲ್ಲ ದೇವರನ್ನಾಗಿಸಿ, ಮಾರಿ ಮಸಣಿ ಚೌಡಿಯರನ್ನು ಸೃಷ್ಟಿಸಿ ಜನರನ್ನು ಭಯ ಬೀಳಿಸುವ ಸರ್ವಜಾತಿಗಳಲ್ಲಿರುವ ಪುರೋಹಿತವರ್ಗದ ಹಿತಾಸಕ್ತಿಯನ್ನು ಸೂಕ್ಷ್ಮದೃಷ್ಟಿಯಿಂದ ಅರಿತರು. ಎಲ್ಲವ್ವನ ಹೆಸರಿನಲ್ಲಿ ಹೆಣ್ಣುಮಕ್ಕಳ ಬೆತ್ತಲೆಸೇವೆ ಮಾಡಿಸುವ ಶ್ರೀಮಂತವರ್ಗದ ಚಾಪಲ್ಯವನ್ನು ಮನಗಂಡು ಬೇಸರಗೊಂಡರು. ಇಂತಹ ಮೌಢ್ಯಗಳಿಂದ

ಜನರನ್ನು ಹೊರಗೆಳೆಯುವುದು ತಮ್ಮ ಕರ್ತವ್ಯವೆಂದು ಬಗೆದರು. ಜನರು ಗುಂಪುಗೊಂಡಿರುವ ತಾಣಗಳ ಮಧ್ಯೆ ನಿಂತು ತಂಬೂರಿ ಮೀಟಿ, ಚಿಟಿಕೆ ತಾಳ ನುಡಿಸುತ್ತ ಕಣಿ ಹೇಳುವವರ ಧಾಟಿಯಲ್ಲಿ ಸರಳವಾಗಿ ಮನಮುಟ್ಟುವಂತೆ ಹಾಡಿದರು:

ಕಣಿಯ ಹೇಳಲು ಬಂದೆ ನಾರಾಯಣನಲ್ಲದೆ ಇಲ್ಲವೆಂದು – ಮಿಕ್ಕ
ಬಣಗು ದೈವದ ಗೊಡವೆ ಬೇಡ ನರಕ ತಪ್ಪದು

ಎಕ್ಕನಾತಿಯರು ಕಾಟಿ ಜಕ್ಕಿ ಜಲಕನ್ಯೆಯರು
ಸೊಕ್ಕಿನಿಂದ ಸೊಂಟಮುರುಕ ಬೈರೇದೇವರು
ಮಿಕ್ಕ ಮಾರಿ ಮಸಣಿ ಚೌಡಿ ಮೈಲಾರಿ ಮೊದಲಾದ
ಠಕ್ಕು ದೈವದ ಗೊಡವೆ ಬೇಡ ನರಕ ತಪ್ಪದು

ಸುತ್ತಣವರ ಮಾತ ಕೇಳಿ ಗುತ್ತಿಯ ಎಲ್ಲಮ್ಮಗೊಲಿದು
ಬತ್ತಲೆಯ ದೇವರೆದುರು ಬರುವುದು ನೋಡಿರೊ
ಮತ್ತೆ ಬೇವಿನುಡಿಗೆಯ ಅರ್ತಿಯಿಂದ ಉಟುಗೊಂಡು
ಮುಕ್ತಿ ಕಾಂಬೆವೆಂಬ ಮೌಢ್ಯ ಬೇಡಿರೊ...

ಸಮನ್ವಯ ಸಂದೇಶ

ಕನಕದಾಸರ ಸಂಚಾರದ ಕಾರ್ಯಯೋಜನೆಯಲ್ಲಿ 'ಹರಿಹರ ಸಮನ್ವಯ ತತ್ವ' ಪ್ರತಿಪಾದನೆಯು ಬಹುಮುಖ್ಯವಾದುದು. ಆ ಕಾಲದಲ್ಲಿ ವೈಷ್ಣವರು ಹಾಗೂ ಶೈವರು ತಂತಮ್ಮ ಮತಧರ್ಮಗಳ ಮೇಲಾಟದಲ್ಲಿ ಶಾಂತಿಯನ್ನು ಕದಡಿಕೊಳ್ಳುತ್ತಿದ್ದರು. ಸಂವಾದ, ವಾದ, ವಾಗ್ವಾದಗಳನ್ನು ದಾಟಿ ದೇಗುಲ ನಾಶದವರೆಗೆ ಅದರ ಪರಿಣಾಮ ತೀವ್ರವಾಗಿರುತ್ತಿತ್ತು. ಕೆಲವು ಊರುಗಳಲ್ಲಂತೂ ಇಂತಹ ಮತಕಲಹಗಳಿಂದಾಗಿ ಬಿಗುವಿನ ವಾತಾವರಣ ಸೃಷ್ಟಿಯಾಗುತ್ತಿತ್ತು. ಎಷ್ಟೋ ಸಂತರುಗಳು ಕಾಲಕಾಲಕ್ಕೆ ತಮ್ಮ ತಿರುಗಾಟದ ಮಧ್ಯೆ ಈ ಬಗೆಯ ಮತಸಂಘರ್ಷಗಳನ್ನು ಶಮನಗೊಳಿಸಲು ಪ್ರಯತ್ನ ಪಟ್ಟದ್ದಿದೆ. ಕನಕದಾಸರಿಗೂ ತಮ್ಮ ಕ್ಷೇತ್ರಯಾತ್ರೆಯ ಹೊತ್ತಿನಲ್ಲಿ ಮೇಲಿಂದ ಮೇಲೆ ಶೈವ–ವೈಷ್ಣವ ಸಂಘರ್ಷದ ಬಿಸಿ ತಪ್ಪದೆ ತಟ್ಟುತ್ತಿತ್ತು.

ಕನಕದಾಸರು ಯತಿಶ್ರೇಷ್ಠರು. ಹೇಳಿಕೇಳಿ ಧರ್ಮಸಮನ್ವಯವನ್ನೇ ತಮ್ಮ ದಾಸಬದುಕಿನ ಪರಮಮಂತ್ರವನ್ನಾಗಿ ನಂಬಿದವರು. ಅವರ ಸಮನ್ವಯಗುಣಕ್ಕೆ ಅವರ ಮನೆತನದ ಶೈವಮೂಲ ಹಾಗೂ ರಾಮಾನುಜರ ಸುಧಾರಣವಾದಿ ಶ್ರೀವೈಷ್ಣವ ತತ್ವಗಳ ನಡುವೆ ಸಾಧಿಸಿಗೊಂಡ ತಾತ್ವಿಕ ಪರಿಪಕ್ವತೆ ಕಾರಣವಾಗಿತ್ತು.

ಅವರು ಎಲ್ಲ ಮತಗಳಲ್ಲಿನ ಉತ್ತಮಾಂಶಗಳಿಂದ ಸಂಸ್ಕಾರಗೊಂಡು ಪೂರ್ಣದೃಷ್ಟಿಯನ್ನು ಹೊಂದಿದ್ದ ಮಹಾನುಭಾವರು. ಅವರು ತಮ್ಮ ಮೊದಲ ಕಾವ್ಯ 'ಮೋಹನ ತರಂಗಿಣಿ'ಯಲ್ಲೇ

ಧರ್ಮಸಮನ್ವಯದ ಸಾರವನ್ನು ಕಥಾರೂಪದಲ್ಲಿ ಸಾರುವುದನ್ನು ನಾವು ನೋಡಬಹುದು. ಅಲ್ಲದೆ ಅವರು ಹರಿದಾಸರಾದರೂ ಶಿವನನ್ನು ಕುರಿತು ಹಲವು ಕೀರ್ತನೆಗಳಲ್ಲಿ ಮೈದುಂಬಿ ಕೊಂಡಾಡಿರುವುದನ್ನು ಕಾಣಬಹುದು.

ಶಿವ ಶಿವ ಶಿವ ಎನ್ನಿರೊ – ಮೂಜಗದವರೆಲ್ಲ
ಶಿವ ಶಿವ ಶಿವ ಎನ್ನಿರೊ

ಮನುಜಜನ್ಮದಿ ಹುಟ್ಟಿ ಮೈಮರೆದಿರಬೇಡಿ
ಶಿವ ಶಿವ ಶಿವ ಎನ್ನಿರೊ – ನಿಮ್ಮ
ತನುಮನ ಪ್ರಾಣವ ವ್ಯರ್ಥವ ಮಾಡದೆ
ಶಿವ ಶಿವ ಶಿವ ಎನ್ನಿರೊ

ಅಪರಾಧ ಕೋಟಿ ತ್ಯಜಿಸಬೇಕಾದರೆ
ಶಿವ ಶಿವ ಶಿವ ಎನ್ನಿರೊ – ಮುಂದೆ
ಪೃಥ್ವಿಗೆ ಸದ್ಗುರು ಆಗಬೇಕಾದರೆ
ಶಿವ ಶಿವ ಶಿವ ಎನ್ನಿರೊ

ಶಿವ ಮಹಾದೇವನು, ಧರೆಗೆ ಹರಿಯೆ ದೈವ
ಭುವನಕ್ಕೆ ಹರಿಹರರು ಏಕಸ್ಥರು
ಭವರೋಗ ಹರ ಕಾಗಿನೆಲೆ ಆದಿಕೇಶವನ
ವಿವರ ತಿಳಿದು ಭಜಿಸಿರೊ ಭಕ್ತಜನರು

ವಿಶೇಷವಾಗಿ ಅವರು ಸಮುದಾಯಗಳ ನೆಮ್ಮದಿ ಕದಡುವ ಇಂತಹ ಬಹಿರಂಗದ ಆಡಂಬರಗಳಿಂದ ದೂರವಿರುವಂತೆ ಸೂಚಿಸುತ್ತಿದ್ದರು. 'ಅಂತರಂಗದ ವಿಕಾಸವೇ ದೇವರನ್ನು ಮುಟ್ಟುವ ಏಕೈಕ ಮಾರ್ಗ' ಎಂಬುದಾಗಿ ತಿಳಿಹೇಳುತ್ತಿದ್ದರು. ಮತ್ತು ಬಹಳ ಮುಖ್ಯವಾಗಿ ವೈಷ್ಣವರಾಗಲಿ, ಶೈವರಾಗಲಿ ಹೆಚ್ಚಾಗಿರುವ ಕಡೆ ಅಲ್ಪಸಂಖ್ಯಾತ ಭಕ್ತರನ್ನು ಕಾಪಾಡುವ ಹೊಣೆಯ ಬಗ್ಗೆ ಮನವರಿಕೆ ಮಾಡುತ್ತಿದ್ದರು. ಸಮಾಜದಲ್ಲಿ ಬಹುಸಂಖ್ಯಾತರ ಕರ್ತವ್ಯವನ್ನು ಎಚ್ಚರಿಸುತ್ತಾ, ಇನ್ನೆಂದೂ ಸಮನ್ವಯದ ಸಹಬಾಳುವೆಗೆ ಕುಂದುಂಟಾಗದಂತೆ ಬದುಕಬೇಕೆಂಬ ಸಂದೇಶ ಸಾರುತ್ತಿದ್ದರು.

ಚೆನ್ನಕೇಶವನ ಸನ್ನಿಧಿಯಲ್ಲಿ

ಕನಕದಾಸರಿಗೆ ಕಾಗಿನೆಲೆ ಬಿಟ್ಟರೆ ಬಹುಪ್ರಿಯವಾದ ದೈವನೆಲೆ ಬೇಲೂರು. ಆದಿಕೇಶವನೆಂದರೆ ಚೆನ್ನಕೇಶವ–ಚೆನ್ನಕೇಶವನೆಂದರೆ ಆದಿಕೇಶವನೆಂಬ ನಂಬಿಕೆ ಅವರದು. ತಮ್ಮ ಮೆಚ್ಚಿನ ದೇವನನ್ನು ವಿಶ್ವಸುಂದರಾಂಗನನ್ನಾಗಿ ಸೃಷ್ಟಿಸಿದ ತಾಣವಾದ್ದರಿಂದ ಬೇಲೂರನ್ನು ಕಾಣುವ ಹಂಬಲ ಅವರ ಮನತುಂಬಿತ್ತು. ಜೊತೆಗೆ ರಾಮಾನುಜರಿಗೆ ನೆಲೆನೀಡಿದ ವಿಷ್ಣುವರ್ಧನನ ಬೇಲೂರಿನ ಬಗ್ಗೆ ಅವರಿಗೆ ಇನ್ನಿಲ್ಲದ ಗೌರವ.

ಕನಕದಾಸರು ಯಗಚಿ ನದಿ ದಂಡೆಯ ಉದ್ದಕ್ಕೂ ಹರಡಿರುವ ಬೇಲೂರು ಪಟ್ಟಣವನ್ನು ಕಣ್ತುಂಬಿಕೊಂಡು ಅಲ್ಲಿನ ವೈಕುಂಠದಾಸರನ್ನು ಮಾರುವೇಷದಲ್ಲಿ ಭೇಟಿಯಾದರೆಂಬ ಕತೆ ಪ್ರಚಲಿತದಲ್ಲಿದೆ. ಹಾಗೆ ಕಂಬಳಿಗೊರವನ ವೇಷದಲ್ಲಿ ತಮ್ಮೆದುರು ಬಂದ ಕನಕದಾಸರನ್ನು ವೈಕುಂಠದಾಸರು ಅತೀವ ಪ್ರೀತ್ಯಾದರಗಳಿಂದ ಬರಮಾಡಿಕೊಂಡರು. ಅದಾಗಲೇ ಕನಕದಾಸರ ಕಾವ್ಯಪ್ರಜ್ಞೆ ಮತ್ತು ಭಕ್ತಿಯ ಔನ್ನತ್ಯ ದಕ್ಷಿಣದ ದಿಕ್ಕುಗಳವರೆಗೂ ಪಸರಿಸಿತ್ತು. ಹಾಗಾಗಿ ಬೇಲೂರಿನ ವೈಕುಂಠದಾಸರೂ ತಮ್ಮ ಜೀವಿತಾವಧಿಯಲ್ಲಿ ಕನಕದಾಸರ ಭೌತಿಕ ಭೇಟಿಗಾಗಿ ಹಂಬಲಿಸಿ ಕಾದು ಕುಳಿತಿದ್ದರಂತೆ!

ಕನಕದಾಸರು ಚೆನ್ನಕೇಶವನ ಗುಡಿಯ ಆವರಣದಲ್ಲಿ ಕುಳಿತು ಪ್ರತಿನಿತ್ಯ ಚರ್ಚೆ–ಪ್ರವಚನದಲ್ಲಿ ತೊಡಗುತ್ತಿದ್ದರು. ಆ ಸಂದರ್ಭದಲ್ಲಿ ಅವರು ಅಲ್ಲಿ ಉಣ್ಣುವುದು ಹರಿಪ್ರಸಾದ, ಕುಡಿಯುವುದು ಹರಿತೀರ್ಥ, ನೋಡುವುದು ಹರಿದರ್ಶನ, ಹಾಡುವುದು ಹರಿಕಾರುಣ್ಯ, ಕೊಂಡಾಡುವುದು ಹರಿಪಾರಮ್ಯವೇ ಆಗಿರುತ್ತಿತ್ತು. ಹೀಗೆ ಹಗಲಿರುಳು ಹರಿಭಕ್ತಿಸಾಗರದಲ್ಲಿ ಮಿಂದು ಪುನೀತರಾಗುತ್ತಿದ್ದರು. ಕೆಲವೊಮ್ಮೆ ಕನಕದಾಸರು ಚೆನ್ನಕೇಶವನ ಭಜನೆ ಮಾಡುತ್ತ ಮಾಡುತ್ತ ಮೈಮರೆತು ಪರವಶರಾಗಿಬಿಡುತ್ತಿದ್ದರು. ಅಲ್ಲಿ ಅವರು ತಾವು ತಿಳಿದ ತತ್ವಸೂತ್ರಗಳನ್ನು ಪರಸ್ಪರ ಹಂಚಿಕೊಳ್ಳುವುದರ ಮೂಲಕ ಭಕ್ತಸಮೂಹಕ್ಕೆ ಆದರ್ಶದ ಪಾಠ ಕಲಿಸಿದರು.

ಪ್ರಾಯಶಃ ಈ ಕ್ಷೇತ್ರ ಯಾತ್ರೆಯ ಗುಣಾತ್ಮಕ ಫಲಶ್ರುತಿ ಎಂಬಂತೆ ಅಪೂರ್ವ ಭಕ್ತಿಕಾವ್ಯ ಕೃತಿಯೊಂದು ಕವಿಕನಕದಾಸರಿಂದ ಸೃಷ್ಟಿಯಾಯಿತು. ಅದೇ 'ಹರಿಭಕ್ತಿಸಾರ'. ಸುರಪುರ ನಿಲಯ ಚೆನ್ನಿಗರಾಯನ ಮಹಾಮಹಿಮ ವ್ಯಕ್ತಿತ್ವವನ್ನು ಕೊಂಡಾಡುವ ಭಕ್ತಿಪಾರಾಯಣ ಕಾವ್ಯವದು. ಭಕ್ತಿರಸಾಮೃತದಲ್ಲಿ ಅದ್ದಿದ ನೂರಾರು ಭಾಮಿನಿ ಷಟ್ಪದಿಗಳಿಂದ ಇಡೀ ಕಾವ್ಯವನ್ನು ಸಿಂಗರಿಸಿ ವಿಷ್ಣುವಿನ 'ಸುಗುಣ ಸಚ್ಚಾರಿತ್ರ ಕಥನ'ವನ್ನು ಅದರಲ್ಲಿ ಚಿತ್ರಿಸಿದ್ದಾರೆ. ಇದು ಹರಿಸರ್ವೋತ್ತಮತ್ವವನ್ನು ಸಾರುವ ಉದ್ದೇಶ ಹೊತ್ತಿರುವ ಕೃತಿಯಾಗಿದ್ದರೂ, ಅದರಾಚೆಗೆ ದೇವರ ಹೆಸರಿನಲ್ಲಿ ದೀನರನ್ನು ವಂಚಿಸುವ ಮತಾಂಧರನ್ನು ತರಾಟೆಗೆ ತೆಗೆದುಕೊಳ್ಳುವುದು ವಿಶೇಷವಾಗಿದೆ.

ಯದುಗಿರಿಯ ಕಡೆಗೆ

ಯದುಗಿರಿ ಇಂದಿನ ಮೇಲುಕೋಟೆ. ಅದು ಚೆಲುವನಾರಾಯಣನ ದಿವ್ಯಕ್ಷೇತ್ರ. ಬೇಲೂರಿನಿಂದ ಹೊರಟ ಕನಕದಾಸರು ಯದುಗಿರಿಯನ್ನು ಮುಟ್ಟುತ್ತಲೇ ಭಾವಪರವಶರಾದರು. ತಮ್ಮ ಅಧ್ಯಾತ್ಮ ಚಿಂತನೆಯ ಮೂಲ ಮಾನಸಗುರು ಶ್ರೀ ರಾಮಾನುಜ ಆಚಾರ್ಯರು ನೆಲೆನಿಂತು, ಭಾಗವತ ಧರ್ಮ ಕಟ್ಟಿದ ಕರ್ಮಕ್ಷೇತ್ರ ಅದಾಗಿದ್ದುದು ಕನಕದಾಸರು ಭಾವಪರವಶರಾಗಲು ಮುಖ್ಯ ಕಾರಣ. ಅದೇ ಪ್ರಸನ್ನ ಮನಸ್ಥಿತಿಯಲ್ಲಿ ಅಲ್ಲಿನ ಕಲ್ಲುಗುಡ್ಡಗಳ ಮೇಲೆ ರಾಮಾನುಜಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಶೆಲ್ವಪಿಳ್ಳೆ –

ಅಂದರೆ ಚೆಲುವನಾರಾಯಣನ ದರ್ಶನ ಮಾಡಿದರು. ತಮ್ಮ ಗುರುದೇವ ಸಂಬಂಧವಿರುವ ಆ ಕ್ಷೇತ್ರದಲ್ಲಿ ನೆಚ್ಚಿನ ದೈವವನ್ನು ಕಂಡ ಖುಷಿಯಲ್ಲಿ:

ಯಾದವಗಿರಿ ವಾಸನಹುದೊ ಶ್ರೀ ನರಸಿಂಹ
ಆದಿನಾರಾಯಣ ಅಚ್ಯುತನಹುದೊ...

– ಎಂದು ವಿಷ್ಣುವಿನ ದಶಾವತಾರ ವರ್ಣನೆ ಮಾಡಿ ಭಕ್ತಸಮೂಹದ ದೈವದರ್ಶನಕ್ಕೆ ವಿನೂತನ ಮೆರುಗನ್ನು ತಂದರು.

ಅಲ್ಲಿಂದ ಮುಂದೆ ಪಶ್ಚಿಮರಂಗನಾಥ ನೆಲೆಸಿರುವ ಶ್ರೀರಂಗಪಟ್ಟಣಕ್ಕೆ ಬಂದರು. ಜೀವನದಿ ಕಾವೇರಿಯ ದಂಡೆಯುದ್ದಕ್ಕೂ ಬೆಳೆದ ಪುರಾಣಪ್ರಸಿದ್ಧವಾದ ನಗರ ಶ್ರೀರಂಗಪಟ್ಟಣ. ಬಹಳ ಹಿಂದಿನಿಂದಲೂ ಪ್ರಸಿದ್ಧ ವ್ಯಾಪಾರಕೇಂದ್ರವಾಗಿದ್ದ ಪಟ್ಟಣದ ಪ್ರಕೃತಿಸೌಂದರ್ಯಕ್ಕೆ ಕನಕದಾಸರು ಮನಸೋತರು. ಅಲ್ಲಿನ ಕೊಳ–ಕಾಲುವೆಗಳ ಕಲರವ, ನೊರೆ ಹಸಿರ ತಂಪು, ಅದನ್ನು ಹೊತ್ತು ತಂದು ಬಯಲ ತುಂಬ ಹಾಸುವ ತಂಗಾಳಿ, ನೋಡುವ ಕಣ್ಣುಗಳಿಗೆ ಬಣ್ಣ ತುಂಬುವ ಸಸ್ಯರಾಶಿ, ಹಕ್ಕಿಯಿಂಚರ, ಗಿರಿಯ ಮೌನ – ಇವೆಲ್ಲ ಕನಕದಾಸರನ್ನು ರಮಣೀಯವಾದ ಬೇರೊಂದು ಪ್ರಪಂಚದಲ್ಲಿ ತೇಲಿಸಿತು.

ಶ್ರೀರಂಗನಾಥನ ಕಾಣಲು ನದಿದಂಡೆಯ ಮೇಲಿದ್ದ ದೇಗುಲಕ್ಕೆ ತೆರಳಿದರು. ಅಲ್ಲಿ ಆದಿಶೇಷನನ್ನು ಹಾಸಿಗೆ ಮಾಡಿಕೊಂಡು ಪವಡಿಸಿದ್ದ ಪರಮಾತ್ಮನನ್ನು ಕಂಡು ಅವರ ವಿನೋದ ಪ್ರತಿಭೆ ಗರಿಗೆದರಿತು. ತನ್ನಂತೆ ತನ್ನ ದೇವರೂ ಲೋಕಕಲ್ಯಾಣ ಕಾಯಕದಲಿ ದಣಿದು ಮಲಗಿದ್ದಾನೆಂಬಂತೆ ಹಾಡು ಕಟ್ಟಿದರು. ನೆರೆದ ಭಕ್ತಜನ ಸಮೂಹ ಬೆರಗಾಗಿ ನೋಡುತ್ತಿರೆ, ಕನಕದಾಸರು ತಾರಕಸ್ವರದಲ್ಲಿ ದೇವರನ್ನು ಛೇಡಿಸುವ ಹಾಡನ್ನು ಹಾಡಿದರು:

ಯಾಕೆ ನೀನಿಲ್ಲಿ ಪವಡಿಸಿದೆ ಹರಿಯೆ – ಜಗ
ದೇಕ ವಿಖ್ಯಾತ ಪಶ್ಚಿಮ ರಂಗಧಾಮ

ತಮನೊಡನೆ ಹೋರಿ ಬೆಟ್ಟವನು ಬೆನ್ನಲಿ ಪೊತ್ತು
ರಮಣಿ ಭೂಮಿಯನು ತಂದ ಆಯಾಸವೊ
ಅಮರವೈರಿಯ ಕರುಳ ಕಿತ್ತ ಕಡು ಧಾವತಿಯೊ
ಕ್ಷಮೆಯನಳೆದೀ ಪಾದಕಮಲ ನೊಂದವೊ

ಪೊಡವಿಪಾಲಕರ ವಂಶವನು ವಪನ ಮಾಡಿ
ಕೊಡಲಿಯನು ಬಿಸುಟು ಮಲಗಿದ ಭಾವವೊ
ಮಡದಿಯನು ಕದ್ದೊಯ್ದುವನ ಶಿರವನೆ ತರಿದು
ಒಡಲಿನಾಯಾಸದಲಿ ಪವಡಿಸಿದ ಪರಿಯೋ...

ಶ್ರೀರಂಗನಾಥನ ದರ್ಶನ ಪಡೆದು, ಅಲ್ಲಿಂದ ಶಿವನಸಮುದ್ರ ಬಳಿಯ ಮಧ್ಯರಂಗನ ದರ್ಶನಕ್ಕೆ ಪೂರ್ವಾಭಿಮುಖವಾಗಿ ಹೊರಟರು. ಅಲ್ಲೇ ದಾರಿಮಧ್ಯೆ ಮಹಾದೇವಪುರದ

ಕಾಶಿವಿಶ್ವನಾಥನನ್ನು ಕಾಣಲು ಗ್ರಾಮಕ್ಕೆ ಭೇಟಿ ನೀಡಿದರು. ನದಿಯಲ್ಲಿ ಇಳಿದು ದೊಡ್ಡದೊಂದು ಬಂಡೆಕಲ್ಲಿನ ಮೇಲೆ ಸ್ನಾನವಾಡಿ ತಮ್ಮ ಬಟ್ಟೆಬರೆಗಳನ್ನು ಶುಚಿಗೊಳಿಸಿಕೊಂಡರು. ಅದೇ ಸೀಳುಗಲ್ಲಿನ ಮೇಲೆ ಕುಳಿತು ಹರಿಹರಧ್ಯಾನ ಮಾಡಿದರು. ಆ ಮೂಲಕ 'ಹರಿಹರ ವಿಭೇದಗೈದವಂಗೆ ದಂತಚ್ಯುತವು' ಎಂಬ ಸಂದೇಶ ಸಾರಿದರು.

ಕಾಶಿವಿಶ್ವನಾಥನನ್ನು ದರ್ಶನ ಮಾಡಿ ಶಿವನಸಮುದ್ರಕ್ಕೆ ಹೋಗಲು ಉದ್ದವಾದ ಕಾವೇರಿ ನದಿಯನ್ನು ದಾಟಬೇಕಿದ್ದಿತು. ನದಿ ದಾಟಲು ದೋಣಿಯನ್ನು ಆಶ್ರಯಿಸಬೇಕಾಗಿತ್ತು. ಅಂಬಿಗರನ್ನು ವಿಚಾರಿಸಿ ದೋಣಿಯನ್ನು ಏರಲು ಮುಂದಾಗುತ್ತಲೇ ಕನಕದಾಸರು ಅಲ್ಲಿನ ಉನ್ನತ ಕುಲದವರ ವಿರೋಧವನ್ನು ಎದುರಿಸಬೇಕಾಯಿತು. ಅದಕ್ಕೆ ಕನಕದಾಸರು ಹಿಂದುಳಿದ ಜಾತಿಯವರು ಎಂಬುದು ಒಂದು ಕಾರಣವಾದರೆ, ಅವರ ಮೈಯೆಲ್ಲ ಕಜ್ಜಿಯಾಗಿತ್ತು ಎಂಬುದು ಮತ್ತೊಂದು ಕಾರಣ. ಕೊನೆಗೂ ದೋಣಿ ಹತ್ತಲು ಅವಕಾಶ ನೀಡದ ಕಾರಣ ಪಕ್ಕದ ತೋಟದ ಮಾಲೀಕನಿಂದ ಬಾಳೆಎಲೆ ಪಡೆದು ಅದರ ಮೇಲೆ ಕುಳಿತು ನದಿ ದಾಟಿದರು. ಈ ಅದ್ಭುತ ದೃಶ್ಯವನ್ನು ಕಂಡು ಚಕಿತರಾದ ಊರಜನರು ಕನಕದಾಸರ ಬಳಿ ಕ್ಷಮೆ ಯಾಚಿಸಿದರು.

ಹೀಗೊಂದು ಪವಾಡದ ಕಥೆ ಈ ಸುತ್ತಮುತ್ತಲ ಗ್ರಾಮಗಳಲ್ಲಿ ಪ್ರಚಲಿತದಲ್ಲಿದೆ. ಈಗಲೂ ಅಲ್ಲಿ ಕನಕದಾಸರು ಭೇಟಿ ನೀಡಿದ ಜ್ಞಾಪಕಾರ್ಥವಾಗಿ ಅಂಬಿಗರು ಕಟ್ಟಿದ ಪುಟ್ಟ ಕನಕನ ಗುಡಿ ಸಾಕ್ಷಿಯಾಗಿ ಇದೆ. ಇದಕ್ಕೆ ಪೂರಕವಾಗಿ ಇಲ್ಲಿನ ಜನರು - ಕನಕದಾಸರು ಸ್ನಾನಮಾಡಿದ 'ಕನಕನ ಕಲ್ಲು' ಹಾಗೂ ಅದರ ಮೇಲೆ ಮೂಡಿರುವ ಬಾಳೆಯ ಎಲೆಯ ಅಚ್ಚನ್ನೂ, ಅವರು ಮಂಡಿಯೂರಿ ಕುಳಿತ ಕಾಲು ಮತ್ತು ಕೈಗುರುತುಗಳನ್ನೂ ಗೌರವ ಭಾವನೆಯಿಂದ ತೋರಿಸುತ್ತಾರೆ. ಜೊತೆಗೆ ಎಂಥದೇ ಚರ್ಮರೋಗ ಉಳ್ಳವರಿರಲಿ, ಆ ಕನಕನ ಕಲ್ಲಿಗೆ ಪೂಜೆ ಸಲ್ಲಿಸಿದರೆ ಅದು ವಾಸಿಯಾಗುತ್ತದೆ ಎಂಬ ನಂಬಿಕೆಯಲ್ಲಿ ಹರಕೆ ಸಲ್ಲಿಸುತ್ತಾ ಬರುತ್ತಿದ್ದಾರೆ. ಅಷ್ಟೇ ಅಲ್ಲ, ಈ ಹೊತ್ತಿಗೂ ಅನೂಚಾನವಾಗಿ ಇಲ್ಲಿನ ಅಂಬಿಗ ಕುಲದವರು 'ಕನಕದಾಸರ ಹಬ್ಬ'ವನ್ನು ಆಚರಿಸುತ್ತಿದ್ದಾರೆ.

ಗುರುಸನ್ನಿಧಿಯತ್ತ

ದೈವಕ್ಷೇತ್ರಗಳನ್ನು ಸಂದರ್ಶಿಸುವ ಭರದಲ್ಲಿ ಅವರು ತಮ್ಮ ಮೂಲಕರ್ತವ್ಯವಾದ ಜನಜಾಗೃತಿಯ ವಿಚಾರವನ್ನೆಂದೂ ಮರೆಯಲಿಲ್ಲ. ದಾರಿಯುದ್ದಕ್ಕೂ ಕಂಡು ಎದುರಾದ ಅಜ್ಞಾನದ ಪ್ರಸಂಗಗಳನ್ನು, ಮೌಢ್ಯಾಚರಣೆಗಳನ್ನು, ಬಲಿ-ಹಿಂಸೆಗಳನ್ನು, ಮಡಿ-ಮೈಲಿಗೆಗಳನ್ನು ವಿರೋಧಿಸುತ್ತಾ ಜನರಲ್ಲಿ ಸಾತ್ವಿಕ ಭಕ್ತಿಯ ಸಂಸ್ಕಾರವನ್ನು ತುಂಬುತ್ತಾ ಹೊರಟರು. ಆ ಮೂಲಕ ಲಕ್ಷಾಂತರ ಜನರನ್ನು ಭಕ್ತಚೇತನರನ್ನಾಗಿ ರೂಪಾಂತರಿಸಿದರು. ಅವರ ವಿಚಾರಲಹರಿ, ಮಾತಿನವೈಖರಿ, ಕಂಠ ಮಾಧುರ್ಯದ ಪ್ರಭಾವದಿಂದ ಜನರ ಮನಪರಿವರ್ತನೆಯ ಕಾರ್ಯಕ್ರಮ ಸುಲಭಸಾಧ್ಯಗೊಳಿಸಿ ಬಿಡುತ್ತಿದ್ದರು. ಹೀಗೆ ಕನಕದಾಸರು

ಜನಸಮುದಾಯದ ಜೀವವಿಕಾಸದ ಸಂಕಲ್ಪ ಹೊತ್ತು ನಡೆದರು. ಮುಂದೆ ಶಿವನಸಮುದ್ರದ ಮಧ್ಯರಂಗನನ್ನೂ, ಸೋಲಿಗರ ಕುಲದೈವ ಬಿಳಿಗಿರಿಯ ಬೆಟ್ಟದರಂಗನನ್ನೂ ಕಣ್ತುಂಬಿಕೊಂಡು ತಿರುಮಕೂಡಲು ನರಸೀಪುರದ ಕಡೆಗೆ ಹೆಜ್ಜೆಹಾಕಿದರು.

ಕಪಿಲಾ–ಕಾವೇರಿ ನದಿಗಳ ಸಂಗಮಕ್ಷೇತ್ರವಾದ ತಿರುಮಕೂಡಲಿಗೆ ಬರುತ್ತಿದ್ದಂತೆ ಧನ್ಯತಾಭಾವವೊಂದು ಅವರನ್ನು ಆವರಿಸಿತು. ಅದು ತಮ್ಮ ನೆಚ್ಚಿನ ಗುರುಗಳಾದ ಶ್ರೀ ವ್ಯಾಸರಾಜರ ಹುಟ್ಟೂರಿನ ಪ್ರದೇಶ. ಜಾತಿನಿಷ್ಠ ಕರ್ಮಠರ ನಡುವೆ ಮಡಿಮೈಲಿಗೆಯ ಹಂಗುತೊರೆದು ತಮ್ಮನ್ನು ಉದ್ಧರಿಸಿದ ವ್ಯಾಸರಾಜರ ಬಗ್ಗೆ ಕನಕರಿಗೆ ಇನ್ನಿಲ್ಲದ ಗೌರವ, ಪೂಜ್ಯಭಾವ. ಅವರ ಸೋಸಲೆ ಮಠವನ್ನು ಸಂದರ್ಶಿಸಿ ಅದರ ಒಳಹೊರಗೆ ಸುತ್ತಿ ಸುಳಿದಾಡಿ ಮನಸ್ಸನ್ನು ಹಗುರ ಮಾಡಿಕೊಂಡರು.

ತಿರುಪತಿ ದರ್ಶನ

ಗುರುಕ್ಷೇತ್ರವನ್ನು ಸುತ್ತಾಡಿ ಅಲ್ಲಿಂದ ಕನಕದಾಸರು ಉತ್ತರ ದಿಕ್ಕಿನತ್ತ ಪರ್ಯಟನ ಕೈಗೊಂಡರು. ದಾರಿಮಧ್ಯೆ ಕಣ್ವಾ ನದಿ ಎದುರಾಯಿತು. ಅಲ್ಲೆ ಅದರ ದಂಡೆಯ ಮೇಲಿದೆ ಮಳೂರು. ಮಳೂರಿನ ವಿಷ್ಣು ದೇವಾಲಯ ಭವ್ಯವಾದುದೆಂದು ಕೇಳಿ ತಿಳಿದ ಕನಕದಾಸರು ಅದನ್ನು ಕಾಣುವ ಹಂಬಲದಲ್ಲಿ ನೀರಿಗಿಳಿದು ದಂಡೆ ಹತ್ತಿದರು. ಅಲ್ಲಿನ ದೇವರ ಹೆಸರು ಅಪ್ರಮೇಯ ಸ್ವಾಮಿ. ಆ ಸ್ವಾಮಿಯ ವಿಗ್ರಹವೋ ಅಂಬೆಗಾಲಿನ ಬೆಣ್ಣೆ ಕೃಷ್ಣನದು. ಅದು ಕಣ್ಣಿಗೊತ್ತಿಕೊಳ್ಳುವಷ್ಟು ಮುದ್ದುಮುದ್ದು. ಅದನ್ನು ಮನಸಾರೆ ಕಂಡು ಕಣ್ಣಲ್ಲೆ ಮುದ್ದಾಡಿ, ಹೃದಯರಾಗದಲಿ ಹಾಡಿ ಧನ್ಯರಾದರು. ಅಲ್ಲಿನ ಕೃಷ್ಣಕುಲದವರಾದ ಗೊಲ್ಲಜನಗಳಿಗೆ ವಂದಿಸಿ, ಅವರಿಂದ ಅಪಾರ ಪ್ರೀತಿ–ಮೆಚ್ಚುಗೆ ಗಳಿಸಿದರು. ಕತ್ತಲಿಳಿಯುವುದರೊಳಗೆ ಅಲ್ಲಿಂದ ಹೊರಟು ಮುಳಬಾಗಿಲಿನ ದಾರಿಯಲ್ಲಿ ತಿರುಪತಿಗೆ ನಡೆದರು.

ಕನಕದಾಸರಿಗೆ ಶ್ರೀಹರಿಯ ಜೊತೆ ವಿಶೇಷ ಸಂಬಂಧ. ಅವನನ್ನು ಅಂತರಂಗದಲ್ಲಿ ಇರಿಸಿಕೊಳ್ಳುವುದು, ಬಹಿರಂಗದಲ್ಲಿ ಕಾಣುವುದು ಅವರ ಭಕ್ತಿ ಪಾರಮ್ಯದ ಫಲ! ಈ ಇಬ್ಬರು ಭಕ್ತ–ಭಗವಂತರ ನಡುವೆ ಅಂತರವೇ ಇರಲಿಲ್ಲ. ಇಬ್ಬರು ಪರಸ್ಪರ ಕಲೆತು ಮಾತನಾಡುತ್ತಿದ್ದರಂತೆ! ಅದೇ ರೀತಿ ಕನಕರಿಗೂ ತಿರುಪತಿಗೂ ಸಂಬಂಧಿಸಿ ಹತ್ತಾರು ಪವಾಡಗಳು ಕ್ಷೇತ್ರದಲ್ಲಿ ಜನಜನಿತವಾಗಿರುವುದನ್ನು ನಾವು ಈಗಲೂ ಕೇಳಬಹುದು.

ತಮಗೆ ಅತ್ಯಂತ ಆದರಣೀಯವಾದ ಗುಡಿಯ ಕಾಣಲು ತವಕಿಸುತ್ತಿದ್ದ ಕನಕದಾಸರಿಗೆ ತಿಮ್ಮಪ್ಪನ ದರ್ಶನವಾಗುತ್ತಿದ್ದಂತೆ 'ಭವ ಹಿಂಗಿದ' ಭಾವ ತುಂಬಿಬಂದಿತು. ದೂರಪಯಣದ ಮಾರ್ಗಾಯಾಸ ಮತ್ತು ಬೆಟ್ಟಗಳನ್ನೇರಿದ ದಣಿವು ಹೇಳಹೆಸರಿಲ್ಲದಂತೆ ಮಾಯವಾಯಿತು. 'ಗೋವಿಂದ ಸಲಹೆನ್ನ ಕುಮುದಲೋಚನ ನಿನ್ನ ಸೇವಕರ ಅಡಿಯ ಸೇವಕನಯ್ಯ' ಎಂದು ವಿನೀತಭಾವದಲಿ ಮೈದುಂಬಿ ಹಾಡಿದರು. ಮತ್ತೊಮ್ಮೆ ಮನಸಾರೆ ಕಾಣುವ ಮಹದಾಸೆ ತೀರಿಸಿಕೊಂಡರು. ನಾಲ್ಕಾರು ದಿನಗಳ ಕಾಲ ತಿರುಪತಿಯಲ್ಲೇ ಇದ್ದು,

ವಿಜಯನಗರಕ್ಕೆ ಬಂದರು. ಅಲ್ಲಿ ಗುರುಗಳನ್ನೂ, ಪುರಂದರದಾಸರನ್ನೂ ಕಂಡು ಯಾತ್ರೆಯ ಮೆಲುಕು ಹಾಕಿದರು.

ರಾಜಸ್ಥಾನ ಭೇಟಿ

ಕನಕದಾಸರು ರಾಜಸ್ಥಾನಕ್ಕೂ ಭೇಟಿ ನೀಡಿದ್ದರೆಂಬ ಪ್ರತೀತಿ ಇದೆ. ಬಹುಶಃ ದಕ್ಷಿಣ ದೇಶದ ಉದ್ದಗಲ ಸಂಚಾರ ಮಾಡಿದ ಕನಕದಾಸರಿಗೆ ಕೃಷ್ಣನ ಜನ್ಮಸ್ಥಾನ ಮಥುರೆಯನ್ನು ನೋಡುವ ಹಂಬಲವಾಗಿರಬೇಕು. ಅದಕ್ಕಾಗಿ ಶುಭದಿನವೊಂದನ್ನು ನಿಶ್ಚಯಿಸಿ ವಿಜಯನಗರದಿಂದ ಬೀಳ್ಕೊಂಡು ಉತ್ತರದೇಶದತ್ತ ಪಯಣ ಹೊರಟರು. ತನಗೂ ಕೃಷ್ಣನಿಗೂ ನಡುವೆ ಸಂಬಂಧ ಬೆಸೆದು ಗಟ್ಟಿಮಾಡುತ್ತಿರುವ ಈ ಅವ್ಯಕ್ತ ನಂಟಿನ ಬಗ್ಗೆ ಹೆಮ್ಮೆಯಾಯಿತು. ಹಾಗೆ ಹೊರಟು ಪುರಿ, ಗಯಾ, ಕಾಶಿ, ಸೌರಾಷ್ಟ್ರ, ದ್ವಾರಕೆ ಮುಂತಾದ ಸುಪ್ರಸಿದ್ಧ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದರು. ದಕ್ಷಿಣವಾಗಲಿ, ಉತ್ತರವಾಗಲಿ ತಾವು ಯಾತ್ರೆ ಹೊರಟ ಕ್ಷೇತ್ರಗಳಲ್ಲಿ ಒಂದಕ್ಕೊಂದು ಹೋಲಿಸಲಾರದಷ್ಟು ಭಿನ್ನವಾದ ಪ್ರಕೃತಿಚಿತ್ರಗಳನ್ನು ಬಿಡಿಸಿಟ್ಟ ಭಗವಂತನ ಕೈಚಳಕವನ್ನು ಕೊಂಡಾಡಿದರು.

ಮಥುರಾ ಕ್ಷೇತ್ರವನ್ನು ಮುಟ್ಟುತ್ತಲೇ ಕನಕದಾಸರಿಗೆ ಜೀವನಸಾರ್ಥಕತೆಯ ಭಾವ ಮೂಡಿತು. ಅದೇ ಸಂದರ್ಭದಲ್ಲಿ ಅಲ್ಲಿ ಕೆಲವು ಶ್ರೀಮಂತರು ದೇವರಿಗೆ ವಸ್ತ್ರಾಭರಣ ಸಲ್ಲಿಸುತ್ತ, ತಾವೇ ಶ್ರೇಷ್ಠ ಭಕ್ತರೆಂಬ ಹಮ್ಮಿನಿಂದ ಉಳಿದವರನ್ನು ಹೀನೈಸುತ್ತ ವರ್ತಿಸುತ್ತಿದ್ದರು. ಆಗ ಕನಕದಾಸರು 'ವಿನಯವಿಲ್ಲದ ಭಕ್ತಿ ದೇವರಿಗೆ ಒಪ್ಪಿತವಾಗದು' ಎಂಬ ನಿಜವನ್ನು ಅವರಿಗೆ ಮನವರಿಕೆ ಮಾಡಿದರು. ಸುತ್ತಮುತ್ತಲ ಪ್ರದೇಶಗಳಿಂದ ಬಂದಿದ್ದ ಭಕ್ತಜನರು ಈ ತಂಬೂರಿದಾಸನ ಭಕ್ತಿತನ್ಮಯತೆಯ ರೀತಿಯನ್ನು ಮತ್ತು ವಿಚಾರಪರತೆಯ ಆಳ-ಅಗಲಗಳನ್ನು ಕೊಂಡಾಡಿದರು. ಕನಕದಾಸರು ಅಲ್ಲಿ ನೆರೆದಿದ್ದ ಭಕ್ತಸಮೂಹಕ್ಕೆ ಭಾಗವತ ಧರ್ಮದ ಆಚಾರ-ವಿಚಾರಗಳನ್ನು ತಿಳಿತಿಳಿಯಾಗಿ ವಿವರಿಸಿದರು:

"ಭಗವಂತನಿಗೆ ವಸ್ತ್ರ-ಆಭರಣ-ಅರ್ಚನೆ-ಅಭಿಷೇಕಗಳಿಂದ ಒಲಿಸುವುದು ಅಹಂಕಾರದ ಪರಮಾವಧಿ. ಆತನಲ್ಲೇ ಇವೆಲ್ಲವುಗಳನ್ನು ಒಳಗೊಂಡ ಸಮಸ್ತ ಜಗತ್ತು ಇದೆ. ನಾವು ಕೊಡುವುದು ಏನೂ ಇಲ್ಲ. ಅಂದಮೇಲೆ ಅವನನ್ನು ಓಲೈಸಲು ಪರಿಶುದ್ಧ ಭಕ್ತಿಯ ಹೊರತು ಬೇರೆ ಮಾರ್ಗವಿಲ್ಲ. ಹಾಗಾಗಿ ದಿಟವಾದ ಅನುಭಾವವೆಂದರೆ, ಭಕ್ತನಾದವನು ಭಗವಂತನೊಂದಿಗೆ ನೇರವಾಗಿ ಅನುಸಂಧಾನದಲ್ಲಿ ತೊಡಗುವುದೇ ಆಗಿದೆ. ಅದೇ ಧ್ಯಾನ – ಅದೇ ತಪಸ್ಸು. ಅದಕ್ಕೆ ಯಾವುದೇ ರೀತಿಯ ಆಡಂಬರಗಳಾಗಲಿ, ಮಧ್ಯವರ್ತಿಗಳಾಗಲಿ ಅವಶ್ಯಕತೆಯಿಲ್ಲ".

"ಭಕ್ತನು ಭಗವಂತನನ್ನು ತನ್ನ ಎದೆಯೊಳಗೆ ಹುಡುಕುತ್ತಾ ಹುಡುಕುತ್ತಾ ಬೆಳೆಯುತ್ತಾನೆ; ದೇವರಿಗೆ ಹತ್ತಿರದವನಾಗುತ್ತಾನೆ. ಅಂತಹ ಸಚ್ಚಾರಿತ್ರ್ಯವುಳ್ಳ ಭಕ್ತನನ್ನೇ 'ಭಾಗವತ' ಎಂದು ಕರೆಯಬಹುದು". ಅದಲ್ಲದೆ –

ತೀರ್ಥವನು ಪಿಡಿದವರೆಲ್ಲ ತಿರುನಾಮಧಾರಿಗಳೆ
ಜನ್ಮಸಾರ್ಥಕವಿರದವರೆಲ್ಲ ಭಾಗವತರೆ?

– ಎಂದು ಪ್ರದರ್ಶನಪರವಾದ ಭಕ್ತರ ನಾನಾ ಮುಖವಾಡಗಳ ಬಗ್ಗೆ ವಿಡಂಬಿಸಿ ಎಚ್ಚರಿಸಿದರು. ಹೀಗೆ ಭಾಗವತ ಧರ್ಮವನ್ನು ಸಮ್ಮೋಹನಗೊಳಿಸುವಂತೆ ಬಿತ್ತರಿಸುತ್ತಿದ್ದ ರೀತಿಗೆ ಹಲವರು ಬೆರಗಾದರು.

(ಇಂತಹ ಭವ್ಯಬೆರಗಿಗೆ ಪರವಶರಾದವರಲ್ಲಿ ರಾಜಸ್ತಾನದ ದೊರೆ ರಾಣಾಪ್ರತಾಪಸಿಂಹನು ಒಬ್ಬ. ಪ್ರತಾಪಸಿಂಹ ಮತ್ತು ಕನಕದಾಸರು ಪರಸ್ಪರ ಭೇಟಿಯಾದ ವಿಚಾರ ಜನಪದ ಐತಿಹ್ಯಗಳಿಂದ ಕತೆಯ ರೂಪದಲ್ಲಿ ತಿಳಿದುಬರುತ್ತದೆ. ಒಮ್ಮೆ ಆತ ಕನಕರನ್ನು ತಮ್ಮ ಆಸ್ಥಾನಕ್ಕೂ ಕರೆಸಿ ಗೌರವಿಸಿದ್ದನಂತೆ. ಅಷ್ಟು ಮಾತ್ರವಲ್ಲದೆ, ಅವರ ಪ್ರಾಂಜಲ ಸ್ನೇಹದ ಗುರುತಾಗಿ ತನ್ನ ಜಯಪುರದ ಅರಮನೆಯ ಆವರಣದಲ್ಲಿ 'ಕನಕ ಬೃಂದಾವನ'ವನ್ನು ಸ್ಥಾಪಿಸಿದನಂತೆ!).

ಕನಕನ ಕಿಂಡಿಯ ಪ್ರಸಂಗ

ಮುಂದೆ, ಕೃಷ್ಣನ ಮಂಗಳಮೂರ್ತಿಯನ್ನು ಕಲ್ಪಿಸಿಕೊಂಡು ಕನಕದಾಸರು ಉಡುಪಿಯತ್ತ ಹೊರಟರು. ಅವರು ಅಪರೋಕ್ಷ ಜ್ಞಾನಿಗಳಾಗಿದ್ದರೂ, ಶ್ರೇಷ್ಠ ಕವಿಯಾಗಿದ್ದರೂ, ಲೋಕವನ್ನೆಲ್ಲ ಸುತ್ತಿಬಂದ ಮಹಾನುಭಾವಿಯಾಗಿದ್ದರೂ ಉಡುಪಿಯಲ್ಲಿ ದೇವಸ್ಥಾನ ಪ್ರವೇಶಕ್ಕೆ ಅವರಿಗೆ ಅವಕಾಶ ಸಿಗಲಿಲ್ಲ. ಕರ್ಮಠ ವೈದಿಕ ಪಂಡಿತರಿಂದ ತುಂಬಿ ತುಳುಕುತ್ತಿದ್ದ ಉಡುಪಿಯ ದೇವಸ್ಥಾನದಲ್ಲಿ ಮೇಲ್ಜಾತಿಯವರಿಗಷ್ಟೇ ಪ್ರವೇಶ ಸಾಧ್ಯವಿತ್ತು. ಕನಕದಾಸರ ಬಾಹ್ಯಚಹರೆಗಳಿಂದ ಕೆಳವರ್ಗದವರೆಂದು ಗುರುತಿಸಿದ ಪುರೋಹಿತರು ಅವರಿಗೆ ಪ್ರವೇಶ ನೀಡಲು ನಿರಾಕರಿಸಿದರು. 'ಹೀನ ಕುಲದವರಿಗೆ ದೇವಾಲಯ ಪ್ರವೇಶ ನಿಷಿದ್ಧ'ವೆಂದು ಖಡಾಖಂಡಿತವಾಗಿ ಘೋಷಿಸಿದರು.

ತಮ್ಮ ಬದುಕಿನುದ್ದಕ್ಕೂ ಜಾತಿಮೂಲದ ಅವಮಾನವನ್ನು ಅನುಭವಿಸುತ್ತಲೇ ಬಂದ ಕನಕರಿಗೆ ಈ ಘಟನೆ ಹೊಸತೆನಿಸದಿದ್ದರೂ, ಬಹುದೂರದಿಂದ ಹಗಲಿರುಳೆನ್ನದೆ ಕಾಡು-ಕಣಿವೆಗಳ ದಾಟಿ ತಮ್ಮ ಇಷ್ಟದೈವವನ್ನು ಕಾಣಲು ಬಂದ ಕನಕರು ಮರುಗಿದರು. ತನ್ನ ಸ್ವಾಮಿಯನ್ನು ನೋಡದಂತೆ ತಡೆಯುವ ಈ ಮಡಿವಂತರ ಬಗ್ಗೆ ವಿಷಾದ, ಸಂಕಟ, ಮರುಕ ಏಕಕಾಲದಲ್ಲಿ ಉಂಟಾಯಿತು.

ಈ ಚಾರಿತ್ರಿಕ ಘಟನೆಯನ್ನು ಕುರಿತಂತಹ 'ಕನಕನ ಕಿಂಡಿ' ಪ್ರಸಂಗವು ಕರ್ನಾಟಕದಲ್ಲಿ ಜನಜನಿತವಾಗಿರುವ ಐತಿಹ್ಯವಾಗಿದೆ. ಅದು ಭಕ್ತ ಹಾಗೂ ಭಗವಂತನ ಪ್ರಾಮಾಣಿಕ ಬಂಧುತ್ವವನ್ನು ಕಾಲಾಂತರಗಳವರೆಗೆ ಸಾರುತ್ತಿರುವ ಅಪೂರ್ವ ಪವಾಡವಾಗಿ ಈ ಹೊತ್ತಿಗೂ ಪ್ರಸಿದ್ಧಿ ಪಡೆದಿದೆ.

ಅದರ ಪ್ರಕಾರ ತನ್ನ ಆರಾಧ್ಯಮೂರ್ತಿಯ ದಿವ್ಯದರ್ಶನ ಬಯಸಿ ಬಂದ ಕನಕದಾಸರನ್ನು ಮಡಿವಂತ ವೈದಿಕರು ಗುಡಿ ಬಾಗಿಲಲ್ಲೇ ತಡೆದು ನಿಲ್ಲಿಸಿದರು. ಜಾತಿಯ ಅಹಂಕಾರದಲ್ಲಿ ಅಂಧರಾಗಿ ಹೋಗಿದ್ದ ಅವರಿಗೆ ಕನಕದಾಸರ ಭಕ್ತಿ ಮಹಿಮೆ ಅರ್ಥವಾಗಲಿಲ್ಲ. ತಾಯಿಯ ಸನಿಹವನ್ನು ಬಯಸಿ ಅವಳ ಹಂಬಲಿಕೆಯಲ್ಲೇ ಹಣ್ಣಾದ ಮಗುವಿನಂತೆ ಅವರು ಹನಿಗಣ್ಣಾದರು. ಕನಕದಾಸರಿಗೆ ಆ ಕಟುಕ ಹೃದಯದವರು ಕೊಡುತ್ತಿರುವ ಚಿತ್ರಹಿಂಸೆಗಿಂತ ಅದು ತನ್ನ ಇಷ್ಟದೇವರ ಸ್ಥಳದಲ್ಲಿ ನಡೆಯುತ್ತಿರುವುದು ಅಸಹನೀಯವೆನಿಸಿತು. ಜಾತಿಯ ನೆಪದಲ್ಲಿ ಮುಗ್ಧ ಭಕ್ತರ ಹೃದಯವನ್ನು ಹಿಂಸಿಸುತ್ತಿರುವ ವಿಷಯ ಅವರನ್ನು ಘಾಸಿಗೊಳಿಸಿತು.

ಎಷ್ಟೇ ಕಾಡಿದರೂ ಬೇಡಿದರೂ ಪುರೋಹಿತರು ಒಳಗೆ ಪ್ರವೇಶ ಕೊಡಲಿಲ್ಲ. ಕೊನೆಗೆ ಮುಂಬಾಗಿಲಿನಿಂದ ಪ್ರವೇಶ ದೊರೆಯದೆ ಅವರು ಹಿಂಬದಿಗೆ ಬಂದು, ಭಕ್ತಿಶಕ್ತಿಗಳನ್ನು ಒಟ್ಟುಗೂಡಿಸಿ ಶ್ರೀಕೃಷ್ಣನನ್ನು ಪ್ರಾರ್ಥಿಸಿದರು. ಕನಕದಾಸರ ಆರ್ತಪ್ರಾರ್ಥನೆ ಕೃಷ್ಣನಿಗೆ ಮುಟ್ಟಿತು. ಅವರ ಅನನ್ಯ ಭಕ್ತಿಗೆ ಭಗವಾನ್ ಶ್ರೀಕೃಷ್ಣನೇ ಬೆರಗಾದನು. ಒಮ್ಮಿಂದೊಮ್ಮೆಲೆ ಗರ್ಭಗುಡಿಯ ಹಿಂಬದಿಯ ಗೋಡೆಯ ಸೀಳಿ ಕನಕರಿಗೆ ದರ್ಶನ ಕೊಟ್ಟನು. ಪೂರ್ವಾಭಿಮುಖನಾಗಿದ್ದ ಕೃಷ್ಣ ಅಲ್ಲಿ ಬಗೆಬಗೆಯ ಆಚರಣೆಯಲ್ಲಿ ತೊಡಗಿದ್ದ ಪುರೋಹಿತರಿಗೆ ಬೆನ್ನುಹಾಕಿ ಪಶ್ಚಿಮಾಭಿಮುಖವಾಗಿ ತಿರುಗಿದನು. ಭಕ್ತನೊಬ್ಬನ ಮೊರೆಕೇಳಿ ದೈವವು ಪೂಜಿಸುವ ದಿಕ್ಕನ್ನೇ ಬದಲಿಸಿ ದರ್ಶನ ಕೊಟ್ಟಿದ್ದನ್ನು ಕಂಡು ಭಕ್ತಜನರು ಆಶ್ಚರ್ಯಚಕಿತರಾದರು.

ಪುರೋಹಿತರು ಭಯಾತಂಕಗಳಿಂದ ಬಿಟ್ಟಕಣ್ಣು ಬಿಟ್ಟಂತೆ ನೋಡಿದರು. ಕನಕದಾಸರು ಆನಂದ ಪರವಶರಾದರು. ಭಗವಂತನು ಬಡವರ ಪಕ್ಷಪಾತಿ ಎಂಬುದನ್ನು ಪ್ರತ್ಯಕ್ಷವಾಗಿ ತೋರಿದ ಕೃಷ್ಣನ ಲೀಲೆಗೆ ಮನಸೋತರು. ದಾಸರಿಗೂ ದಾಸನಾಗಿ ದರ್ಶನಕೊಟ್ಟ ತನ್ನ ಸ್ವಾಮಿಯ ಮಹಿಮೆಯನ್ನು ಪರಿಪರಿಯಲ್ಲಿ ಕೊಂಡಾಡಿ ತಣಿದರು.

ಈಗಲೂ ಉಡುಪಿಯ ಕೃಷ್ಣ ಪಶ್ಚಿಮಾಭಿಮುಖವಾಗಿಯೇ ನಿಂತಿದ್ದಾನೆ. ಗೋಡೆ ಸೀಳಿದ ಜಾಗದಲ್ಲಿ ಕಿಟಕಿಯೊಂದು ನಿರ್ಮಿತವಾಗಿದ್ದು, ಅದು 'ಕನಕನ ಕಿಂಡಿ' ಎಂದೇ ಪ್ರಸಿದ್ಧವಾಗಿದೆ. (ಕನಕದಾಸರ ಈ ಹೋರಾಟದ ನೆನಪಿಗೋಸ್ಕರ ವಿಜಯನಗರ ಅರಸರು ಅದರ ಮುಂದೆ 'ಕನಕ ಗೋಪುರ'ವನ್ನು ನಿರ್ಮಿಸಿದರು). ಪ್ರಸ್ತುತ, ಭಕ್ತನೊಬ್ಬ ತನ್ನ ಅಪರಿಮಿತ ಭಕ್ತಿಯಿಂದ ಭಗವಂತನನ್ನೇ ತನ್ನತ್ತ ತಿರುಗಿಸಿದನೆಂಬ ಈ ಕಥೆಗೆ ರೆಕ್ಕೆಪುಕ್ಕಗಳು ಮೂಡಿವೆ. ವಿಶ್ವದಾದ್ಯಂತ ಹಲವಾರು ಪ್ರವಾಸಿಗರ ಕುತೂಹಲಕ್ಕೂ ಕಾರಣವಾಗಿದೆ.

ಉಡುಪಿಯ ದೇವಳದಲ್ಲಿ ಕನಕದಾಸರನ್ನು ಅವಮಾನಿಸಿದ ಪ್ರಸಂಗ ಹಾಗೂ ಅಲ್ಲಿ ನಡೆದ ಪವಾಡದ ಕಥೆ ಸುತ್ತಮುತ್ತಲೆಲ್ಲ ಹರಡಿತು. ಹೀಗೆ ಸಾಗುತ್ತಾ ಇದು ಸೋದೆಮಠದ ವಾದಿರಾಜರ ಕಿವಿಯನ್ನು ಮುಟ್ಟಿತು. ತಮ್ಮ ಅಧ್ಯಾತ್ಮ ಸಂಗಾತಿಯಾದ ಕನಕದಾಸರನ್ನು ಕಾಣಲು ಅಲ್ಲಿಂದ ಹೊರಟು ಉಡುಪಿಗೆ ಬಂದರು. ಅಲ್ಲಿ ಮಹಾಮಹಿಮ ಕನಕರನ್ನು

ಭೇಟಿಯಾಗಿ, ಪುರೋಹಿತರ ಜಾತಿಗರ್ವಾಂಧ ಮನಸ್ಥಿತಿಯನ್ನು ಕದಲಿಸಲಾಗದ ಅಸಹಾಯಕತೆಗೆ ಮರುಗಿದರು. ಅನಂತರ ಹಲವು ದಿನಗಳ ಕಾಲ ಇಬ್ಬರೂ ಪರಸ್ಪರ ಅಭಿಪ್ರಾಯ ಹಂಚಿಕೊಂಡರು. ಅಲ್ಲಿ ಅವರಿಗೆ ವಾದಿರಾಜರಿಂದ ವ್ಯಾಸರಾಯರು ದೈವಾಧೀನರಾದ ಸಂಗತಿ ತಿಳಿಯಿತು. ಎಷ್ಟೋ ಹೊತ್ತು ಮೌನಸ್ಥಿತಿಯಲ್ಲಿ ಕಲ್ಲಾಗಿ ಕುಳಿತ ಕನಕದಾಸರು ಚರ್ಚೆಯನ್ನು ಮೊಟಕುಗೊಳಿಸಿ ವಿಜಯನಗರದತ್ತ ಸಂಚಾರ ಕೈಗೊಂಡರು.

ಉಡುಪಿಯಿಂದ ವಿಜಯನಗರವನ್ನು ತಲುಪಿದ ಕೂಡಲೇ ಗುರುಮಠಕ್ಕೆ ಧಾವಿಸಿ ಬಂದರು. ಅಲ್ಲಿ ತಮಗೆ ಎದುರಾದ ಪುರಂದರ, ವಿಜಯೇಂದ್ರ ಮುಂತಾದ ಯತಿಗಳ ಜೊತೆ ಗುರುಗಳ ಅಂತ್ಯಕಾಲದ ವಿವರ ತಿಳಿದುಕೊಂಡರು. ತಮ್ಮ ತತ್ವಸಂಗಾತಿಗಳ ಜೊತೆ ಗುರು ತೋರಿದ ಸಮಾಜಮುಖಿ ಕಾಯಕದಲ್ಲಿ ಇನ್ನಷ್ಟು ಕಟಿಬದ್ಧರಾಗುವ ಸಂಕಲ್ಪವನ್ನು ತೊಟ್ಟರು. ತಮ್ಮ ಕಾವ್ಯಗಳ ಸಾರ್ವಕಾಲಿಕ ಮಹತ್ವವನ್ನು ಪ್ರಚಲಿತದಲ್ಲಿದ್ದ ಮಾನದಂಡಗಳ ಮೂಲಕ ಎತ್ತಿಹಿಡಿದ ಪ್ರಸಂಗದಿಂದ ವಿನೀತರಾದರು. ತಮ್ಮ ಹೊಣೆಗಾರಿಕೆಯ ಹೊರೆ ಮತ್ತಷ್ಟು ಹೆಚ್ಚಿತೆಂದು ಭಾವಿಸಿದರು. ತಾವು ಹುಟ್ಟಿ ಬೆಳೆದ ಸೀಮೆಯಲ್ಲೇ ನಿಂತು ಪರೋಪಕಾರ ಜೀವನ ನಡೆಸುವ ದಿಕ್ಕಿನಲ್ಲಿ ಆಲೋಚಿಸಿದರು. ಅಲ್ಲಿಂದ ಬೀಳ್ಕೊಂಡು ಕಾಗಿನೆಲೆಯ ಕಡೆಗೆ ಹೆಜ್ಜೆ ಹಾಕಿದರು. ದಾರಿಮಧ್ಯೆ ಗದುಗಿನ ವೀರನಾರಾಯಣ ಹಾಗೂ ಕನಕಗಿರಿಯ ಲಕ್ಷ್ಮಿನರಸಿಂಹರನ್ನು ದರ್ಶಿಸಿ ಕದರಮಂಡಲಗಿಯತ್ತ ಹೊರಟರು. ಅಲ್ಲಿ ತಮ್ಮ ಬಾಲ್ಯಕಾಲದ ಆರಾಧ್ಯಮೂರ್ತಿಯಾದ ಹನುಮನ ಅನಂತ ಗುಣಗಾನ ಮಾಡಿದರು.

ಕರ್ಮಭೂಮಿ ಕಾಗಿನೆಲೆ

ಕನಕದಾಸರು ಕಾಗಿನೆಲೆಗೆ ಮರಳುತ್ತಿರುವ ವಿಷಯ ಅಲ್ಲಿನ ಜನರಿಗೆ ಅತ್ಯಂತ ಸಂಭ್ರಮದ ಸಂಗತಿಯಾಗಿತ್ತು. ಅಷ್ಟು ಹೊತ್ತಿಗಾಗಲೇ ಅವರು ಮಹಾತ್ಮರಾಗಿ ರೂಪುಗೊಂಡ ವಿಚಾರ ಅಲ್ಲಿನ ಜನಮನದ ಮನೆಮಾತಾಗುವಷ್ಟರ ಮಟ್ಟಿಗೆ ಬೆಳೆದಿತ್ತು. ಅವರು ಕ್ಷೇತ್ರಗಳಿಂದ ಕ್ಷೇತ್ರಗಳಿಗೆ ಬರಿಗಾಲ ಸಂಚಾರ ಮಾಡುವಾಗ ಕೈಗೊಂಡ ಸುಧಾರಣಾ ಕಾರ್ಯಗಳು, ಭಾಗವತ ಧರ್ಮದ ಪ್ರಚಾರ, ಒಗಟು-ಒಡಪುಗಳ ಮೂಲಕ ಪಂಡಿತರಿಗೆ ಒಡ್ಡಿದ ಸವಾಲುಗಳು, ಸಾಂದರ್ಭಿಕ ಪ್ರತಿಕ್ರಿಯೆಯಾಗಿ ಕಟ್ಟಿದ ಸಾವಿರಾರು ಹಾಡುಗಳು ಹಾಗೂ ಕಥನ ಕಾವ್ಯಗಳು ಬಾಯಿಂದ ಬಾಯಿಗೆ ಬೆಟ್ಟದಂತೆ ಹಬ್ಬಿ ನಿಂತಿದ್ದವು. ಕನಕದಾಸರು ತಮ್ಮವರೆಂಬ ಹೆಮ್ಮೆ ಕಾಗಿನೆಲೆಯ ಮಂದಿಯಲ್ಲಿ ಸಹಜವಾಗಿ ವ್ಯಕ್ತವಾಗುತ್ತಿತ್ತು.

ಹೀಗೆ ಮಾನವೀಯ ಅಂತಃಕರಣದಿಂದ ಒಂಟಿಸಲಗದಂತೆ ಬೆಳೆದ ಜೋಗಿಜಂಗಮ ಕನಕದಾಸರನ್ನು ಕಾಗಿನೆಲೆಯ ಜನ ಪ್ರೀತಿಯಿಂದ ಆದರಿಸಿದರು. ಆ ಜನ ಸಲ್ಲಿಸುತ್ತಿದ್ದ ಗೌರವಾದರಗಳಿಗೆ ಮುಜುಗರ ಪಡುತ್ತಾ, ಅವರ ಪ್ರಶ್ನೆಗಳಿಗೆ ಸರಳವಾಗಿ ಉತ್ತರಿಸುತ್ತಿದ್ದರು:

"ಉತ್ತಮ ಅಧಮ ಎಂಬುದು ಕೇವಲ ಹುಟ್ಟಿನಿಂದ ಅಳೆಯುವುದು ಸಲ್ಲ. ಅದು ವ್ಯಕ್ತಿಯ ಸಾಧನೆಯಿಂದ, ನಡೆ-ನುಡಿಯಿಂದ, ಮಾನವೀಯ ಗುಣದಿಂದ, ತಾನು ಹುಟ್ಟಿದ ಸಮಾಜಕ್ಕೆ

ಸಲ್ಲಿಸುವ ಕೊಡುಗೆಯಿಂದ ನಿರ್ಧಾರವಾಗಬೇಕು. ಆಕಸ್ಮಿಕವಾಗಿ ಹುಟ್ಟಿದ ಜಾತಿ ಒಂದರಿಂದಲೇ ಯಾರೊಬ್ಬನೂ ಶ್ರೇಷ್ಠನಾಗಿ ಬಿಡುವುದಿಲ್ಲ ; ಹಾಗೆಯೇ ಕೀಳಾಗಿಸುವುದೂ ತರವಲ್ಲ. ಶುದ್ಧ ಆಚಾರ, ಸತತ ಸಾಧನೆಯಿಂದ ಪರಮಾತ್ಮನ ಕರುಣೆಗೆ ಪಾತ್ರನಾದ ಮೇಲೆ ಯಾವ ಕುಲ ಆದರೇನು? ಬೆಲೆ ಕೊಡಬೇಕಾದುದು ಪರಿಶುದ್ಧ ಮನುಷ್ಯತ್ವಕ್ಕೆ ಹೊರತು ಅದನ್ನು ಹಡೆದ ಕ್ಷುಲ್ಲಕ ಕುಲಕ್ಕಲ್ಲ. ಅಹಂಕಾರ ಅಳಿಯದೆ ಭಕ್ತಿಯ ಹೂವು ಅರಳದು. ಹೂವು ಅರಳದೆ ವ್ಯಕ್ತಿತ್ವ ಪರಿಮಳಿಸುವುದು ಎಂತು?" ಎಂದು ತಿಳಿಯ ಹೇಳುತ್ತಾ ಹೋದರು.

ಹರಿಯ ಬಹುರೂಪ ದರ್ಶನದ ನೆಪದಲ್ಲಿ ಕರ್ನಾಟಕದ ಬೇರೆ ಬೇರೆ ಭಾಗಗಳನ್ನು ಸುತ್ತಿಬಂದ ಅನುಭವ ಅವರನ್ನು ಒಬ್ಬ ಮೇಧಾವಿ ಕವಿಯನ್ನಾಗಿ ರೂಪಿಸಿತು. ಕೇವಲ ಭಜನೆ ಸಾಹಿತ್ಯ ಹಾಡುವ ದಾಸರ ಮಧ್ಯೆ ಕನಕರು ತಮ್ಮ ಕಾವ್ಯ ಪ್ರತಿಭೆಯಿಂದ ತಮ್ಮ ಗಂಭೀರ ಚಿಂತನೆಗಳಿಂದ ಜನಾಕರ್ಷಣೆಯ ಕೇಂದ್ರವಾದರು. ಭಕ್ತಿಪರವಾದ ರಚನೆಗಳ ಜೊತೆಗೆ ಸಮಾಜ ವಿಡಂಬನೆ, ಚಿಕಿತ್ಸಕತೆ, ಹಾಸ್ಯ, ನೀತಿ, ಬಂಡಾಯ, ಮಾನವೀಯ ಅಂತಃಕರಣವುಳ್ಳ ಕಾವ್ಯಸತ್ವದ ಕೀರ್ತನೆಗಳನ್ನು ರಚಿಸಿ ಹಾಡತೊಡಗಿದರು. ಕಾಗಿನೆಲೆ ಆದಿಕೇಶವನನ್ನು ನೆಪಮಾಡಿಕೊಂಡು, ಸಮಾಜದ ಅಂಕು-ಡೊಂಕುಗಳನ್ನು, ನಿಷ್ಠುರ-ನಿಜಗಳನ್ನು, ಬದುಕಿನ ಕತ್ತಲೆ-ಬೆಳಕನ್ನು ಕಾಣಿಸುವ ಕಾವ್ಯ ಬರೆದರು.

ಎಲ್ಲಾ ಕಾಯಕಗಳೂ ಸಮಾನ ಬೆಲೆಯುಳ್ಳವೇ. 'ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ'ಯೇ. ಆದರೂ ಅದನ್ನು ಅರಿಯದೆ ಅಜ್ಞಾನದಲ್ಲಿ ಮುಳುಗಿರುವವರನ್ನು ಎಚ್ಚರಿಸಬೇಕಿದೆ. ಆದ್ದರಿಂದ ಗೊಡ್ಡುಧರ್ಮವನ್ನು ಕುರಿತು ಚರ್ಚಿಸುವುದಕ್ಕಿಂತ, ಹಗಲಿರುಳು ದುಡಿದು ಅನ್ನ ಕೊಡುವ ಶ್ರಮಜೀವಿಗಳ ಪರ ಕಾವ್ಯ ಬರೆಯುವುದು ಮೇಲೆಂದು ಬಗೆದರು. ಅದನ್ನು ನೇರವಾಗಿ ಹೇಳದೆ ರೂಪಕಗೊಳಿಸಿ ಸಕಲರಿಗೂ ಅರ್ಥವಾಗುವಂತೆ ಹೇಳುವುದೆಂದು ಚಿಂತಿಸಿದರು.

ಇಂತಹ ವಿಶಿಷ್ಟ ಚಿಂತನೆಯಿಂದ ಒಡಮೂಡಿದ್ದೇ ಕನಕದಾಸರ ಮಹತ್ವಾಕಾಂಕ್ಷೆಯ ಕೃತಿ 'ರಾಮಧಾನ್ಯ ಚರಿತ್ರೆ'. ಅದರಲ್ಲಿ, ಸಮಾಜವನ್ನು ನಾನಾ ರೀತಿಯಲ್ಲಿ ಪೊರೆಯುವ ಶ್ರಮಜೀವಿ ಶೂದ್ರರನ್ನು ರಾಗಿಯೊಂದಿಗೆ ಸಮೀಕರಿಸಿ ಅವರ ಗುಣಾತ್ಮಕ ಮೇಲ್ಮೆಯನ್ನು ಕೊಂಡಾಡಿದರು. ಸಿರಿವಂತರು ಹಾಗೂ ಗೊಡ್ಡುಪಂಡಿತರ ಸೋಗಲಾಡಿತನವನ್ನು ಬತ್ತದ ಮೂಲಕ ಬಯಲಿಗೆಳೆದರು. ರಾಮ ಕೃಷ್ಣರೇ ಮೆಚ್ಚುವ ಭಕ್ತಮಕ್ಕಳನ್ನು ಮನುಷ್ಯಮಾತ್ರರಾದ ಪುರೋಹಿತರು ಹೀನಾಯಿಸುವ ವಿಪರೀತ ಬುದ್ಧಿಯನ್ನು ಖಂಡಿಸಿದರು. ಆ ಮೂಲಕ ಸರ್ವ ಜನರನ್ನು ಏಕರೂಪಿಯಾಗಿ ಕಾಣುವ ವಿಶಾಲ ದೃಷ್ಟಿಕೋನದ ತತ್ವವನ್ನು ಎತ್ತಿ ಹಿಡಿದರು.

ಅಲ್ಲಿಂದ ಮುಂದೆ ನಿತ್ಯವೂ ಕಾಗಿನೆಲೆ-ಕುಮ್ಮೂರು ಗಡಿಯಲ್ಲಿ ತಾವೇ ಹಿಂದೆ ಕಟ್ಟಿಸಿದ ಕೆರೆಯಲ್ಲಿ ಮಿಂದು ಬಂದು ಕೇಶವನ ಸೇವೆಯಲ್ಲಿ ನಿರತರಾಗತೊಡಗಿದರು. ಕೆರೆಯ ಒಂದು ಕೊನೆಯಲ್ಲಿ ಸುಂದರವಾದ ಹೂದೋಟವನ್ನು ನಿರ್ಮಿಸಿದರು. ಅಲ್ಲಿ ಅವರು ಬೆಳೆಸಿದ ಹಲವು ಜಾತಿಯ ಹೂವುಗಳು ಒಂದಾಗಿ ಪರಮಾತ್ಮನಿಗೆ ಒಲವಿನ ಪರಿಮಳ ಸೂಸುತ್ತಿದ್ದವು. ಅದೇ ರೀತಿ ಮನುಷ್ಯರನ್ನು ಒಂದುಗೂಡಿಸಿ, ದೇವರಿಗೆ ಸಲ್ಲುವ ಹೂವಾಗಿಸುವ ದಿಕ್ಕಿನಲ್ಲಿ ಕನಕದಾಸರು ಹಗಲಿರುಳು ಚಿಂತಿಸಿದರು. ಪ್ರತಿಯೊಬ್ಬ ಮನುಷ್ಯನ ಎದೆಯಲ್ಲಿ ದೇವರು ದೀಪದಂತೆ ಉರಿಯುತ್ತಿರುವ ಸತ್ಯವನ್ನು ಮನದಟ್ಟು ಮಾಡಿದರು. ಹೆಚ್ಚು ಮಾತಾಡದೆ, ನಿರಂತರ ಕಾಯಕದಲಿ ನಿರತರಾಗಿ, ನಡವಳಿಕೆಯ ಮುಖಾಂತರವೇ ಆದರ್ಶವಾಗುವ ಯೋಗಿಯಾಗಿ ಕಂಡವರಿಗೆ ಕಾಣಿಸಿದರು. (ಈಗಲೂ ಆ ಕೆರೆಯ ಕಾಲುವೆಯನ್ನು 'ಕನಕನಾಯಕರ ಕಾಲುವೆ' ಎಂತಲೂ, ಹೂದೋಟವನ್ನು 'ದಾಸನಕೊಪ್ಪ' ಎಂತಲೂ, ಅವರು ಕುಳಿತುಕೊಳ್ಳುತ್ತಿದ್ದ ಕಟ್ಟೆಯನ್ನು 'ಕನಕನ ಕಟ್ಟೆ' ಎಂತಲೂ ಕರೆಯುವುದನ್ನು ಕಾಣಬಹುದು).

ಕಾಗಿನೆಲೆಯಲ್ಲಿ ಕನಕದಾಸರು ಬಂದು ನೆಲೆಯಾದ ಅನಂತರ ಅವರನ್ನು ಕಾಣಲು ಬರುವ ಜನರ ಸಂಖ್ಯೆ ಹೆಚ್ಚುತ್ತಾ ಹೋಯಿತು. ಕನಕದಾಸರ ಮನಸ್ಸಿನ ಪರಿಶುದ್ಧತೆ, ನಡೆ-ನುಡಿಗಳಲ್ಲಿನ ಮುಗ್ಧತೆ, ವ್ಯಕ್ತಿತ್ವದಲ್ಲಿ ಉಂಟಾದ ಪಕ್ವತೆಯನ್ನು ಕಂಡು ಅವರು ಬೆರಗಾಗಿ ಹೋದರು.

ಕನಕದಾಸರು ಪ್ರೇಮವಿಲ್ಲದ ಬದುಕು ನಿರರ್ಥಕವೆಂದೇ ಭಾವಿಸಿದರು. ಮನುಷ್ಯರು ಬೇರೆಬೇರೆ ಪ್ರೇರಣೆಗಳಿಂದ ಅಹಂಕಾರಿಗಳಾಗಿ ಮೆರೆಯುತ್ತಿದ್ದಾರೆ. ಸ್ವಾರ್ಥಮತ್ಸರಗಳಿಂದ ಒಬ್ಬರನ್ನೊಬ್ಬರು ದ್ವೇಷಿಸುತ್ತಿದ್ದಾರೆ. ಪ್ರೇಮದ ಸೋಂಕಿಲ್ಲದೆ ಎದೆಗೂಡುಗಳನ್ನು ಮರಳುಗಾಡನ್ನಾಗಿ ಮಾಡಿಕೊಂಡು ಹಲುಬುತ್ತಿದ್ದಾರೆ. ಆದ್ದರಿಂದಲೇ ಸುತ್ತಣ ಬದುಕಿನ ಅನಂತ ವಿಸ್ಮಯಗಳನ್ನು ಕಾಣದ ಕುರುಡರಂತೆ ಬದುಕುತ್ತಿದ್ದಾರೆ.

ಕನಕದಾಸರ ನಂಬಿಕೆಯಂತೆ, ಆದಿಕೇಶವನ ಸೃಷ್ಟಿಯಲ್ಲಿ ಮೇಲುಕೀಳುಗಳೇ ಇಲ್ಲ. ಅದು ಗುಲಾಮಗಿರಿಯನ್ನು ಒಲ್ಲದ, ಅಹಂಕಾರವು ಸಲ್ಲದ ಅಪೂರ್ವ ಜಗತ್ತು. ಅಲ್ಲಿ ಕೀಳರಿಮೆಗೆ ಅವಕಾಶವಿಲ್ಲ ; ಮೇಲರಿಮೆಗೆ ಬೆಲೆಯಿಲ್ಲ. ಭಕ್ತಿಯೊಂದೇ ಆ ಬೆರಗಿನ ಜಗತ್ತಿನ ಸಾರವಸ್ತು.

ಪ್ರೇಮದ ಸ್ಪರ್ಶವಿಲ್ಲದೆ ಅಲ್ಲಿ ಭಕ್ತಿಯ ಹೂವು ಅರಳಲಾರದು. ಭಕ್ತಿಯ ಹೂವನ್ನು ಅರಳಿಸುವುದು ಸುಲಭಕ್ಕೆ ಸುಲಭ – ಕಠಿಣಕ್ಕೆ ಕಠಿಣ. 'ಬಯಲು ಆಲಯದೊಳಗೊ ಆಲಯವು ಬಯಲೊಳಗೊ' ಎಂಬಂತಹ ಅನೂಹ್ಯ ಸ್ಥಿತಿ ಅದು. ಅದಕ್ಕಾಗಿ ಹಿಡಿಯುವುದನ್ನು ಹಿಡಿಯಬೇಕು : ಬಿಡುವುದನ್ನು ಬಿಡಬೇಕು.

ಅದೊಂದು ರೀತಿಯ ಅರಿವಿನ ಹೋರಾಟ. ಅಂತರಂಗದ ಒಳಗೆ ಇಳಿದ ಕ್ಷಣದಿಂದ ಆ ಹೋರಾಟ ಶುರುವಾಗುತ್ತದೆ. ಒಳಗನ್ನು ಬೆಳಗದೆ ಹೊರಗನ್ನು ಅರಿಯುವುದು ಸಾಧ್ಯವಿಲ್ಲ. ಹಾಗಾಗಿ ಅಂತರಂಗವೇ ಸಕಲ ಧರ್ಮಗಳ ಆವಾಸಸ್ಥಾನ. ಆದರೆ ಜನರು ಮಾತ್ರ ಸ್ನಾನ–ಮಡಿ–ಪೂಜೆಗಳ ವಿಜೃಂಭಣೆಯಿಂದ ದೇವರನ್ನು ಒಲಿಸಿಕೊಳ್ಳಬಹುದೆಂಬ ಭ್ರಮೆಯಲ್ಲಿದ್ದಾರೆ. ಚರ್ಮ ತೊಳೆದರೆ ಕರ್ಮ ಹೋದೀತೆ? ಜ್ಞಾನತೀರ್ಥದಲ್ಲಿ ಸ್ನಾನ ಮಾಡಬೇಕಾಗಿರುವುದು ಅವಶ್ಯಕತೆಯಾಗಿದೆ. ಅಂಥವರ ಮುಕ್ತಿಗಾಗಿ ದಾರಿತೋರುವುದು ತಮ್ಮ ತುರ್ತು ಕರ್ತವ್ಯವೆಂದು ಬಗೆದರು. ಅದಕ್ಕಾಗಿ ಮನುಷ್ಯರನ್ನು ಸಜ್ಜುಗೊಳಿಸಲು ಕಟಿಬದ್ಧರಾದರು.

ಹೀಗೆ ಕನಕದಾಸರು ದಿನಂಪ್ರತಿ ಲೋಕಸೇವಾ ಕೈಂಕರ್ಯಗಳಲ್ಲಿ ತಲ್ಲೀನರಾಗತೊಡಗಿದರು. ಅವರಿಗೆ ಜನಜಾಗೃತಿ, ನ್ಯಾಯತೀರ್ಮಾನ, ಕಾವ್ಯರಚನೆ, ಕೀರ್ತನೆ ಗಾಯನ, ಹೂದೋಟಗಳ ಪಾಲನೆ ಪೋಷಣೆ, ಕೇಶವನ ಧ್ಯಾನ – ಇವುಗಳಲ್ಲಿ ಯಾವುದರಲ್ಲೂ ವ್ಯತ್ಯಾಸ ಕಾಣಲಿಲ್ಲ. ಈಗ ಅವರು ದೇವರು ಹಾಗೂ ಭಕ್ತರ ನಡುವೆ ಸಂಬಂಧವನ್ನು ಬೆಸೆಯುವ ರಾಯಭಾರಿಯಾದರು. ಒಂದು ಕಡೆ, 'ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೆ' ಎಂಬಂತೆ ಭಕ್ತಮಕ್ಕಳ ಪರವಾಗಿ ಮೊರೆಯಿಡುತ್ತಿದ್ದರು. ಅದೇ ಹೊತ್ತಿನಲ್ಲಿ ಇನ್ನೊಂದು ಕಡೆ, 'ತಲ್ಲಣಿಸದಿರು ಕಂಡ್ಯ ತಾಳು ಮನವೆ : ಎಲ್ಲರನು ಸಲಹುವನು ಇದಕೆ ಸಂಶಯ ಬೇಡ...' ಎಂದು ಅವರ ದಿನದಿನದ ತಲ್ಲಣಗಳಿಗೆ ಸಾಂತ್ವನದ ಮಳೆಗರೆಯುತ್ತಿದ್ದರು.

ವಯಸ್ಸು ಮತ್ತು ಚಿಂತನೆ ಮಾಗುತ್ತಾ ಮಾಗುತ್ತಾ ಕನಕದಾಸರು ಬೆಳೆಬೆಳೆದು ಬೆಟ್ಟವಾದರು. ತಮ್ಮ ಪರಿಶುದ್ಧ ನಡತೆ ಮತ್ತು ಅವರ ಕಾವ್ಯಗಾಯನಗಳಿಂದ ಸುತ್ತಮುತ್ತಲ ಪ್ರದೇಶಗಳಲ್ಲಿ ಮನೆಮಾತಾದರು. ಬಾಳಪಯಣದ ದಾರಿಯಲ್ಲಿ ಬಗೆಬಗೆಯ ಸಂಕಟಗಳಿಂದ ನೊಂದು ಬೆಂದವರು ಕನಕದಾಸರಲ್ಲಿ ಸಾಂತ್ವನಕ್ಕಾಗಿ ಎಡತಾಕುತ್ತಿದ್ದರು. ಅಂಥವರಿಗೆ ದೇವರ ಅಸ್ತಿತ್ವದ ಬಗ್ಗೆ, ಸೃಷ್ಟಿಯ ರಹಸ್ಯದ ಬಗ್ಗೆ, ಮಾನವೀಯ ಮೌಲ್ಯದ ಬಗ್ಗೆ, ಜೀವನದ ಸಾರ್ಥಕತೆಯ ಬಗ್ಗೆ ಕನಕದಾಸರು ಸಂದೇಶಗಳನ್ನು ನೀಡುತ್ತಾ ಸಮಸಮಾಜದ ಕನಸುಗಳನ್ನು ಬಿತ್ತತೊಡಗಿದರು.

ಪುರಂದರರ ಅಂತ್ಯ

ಇದೇ ರೀತಿ ಬಂದವರ ಸಂಗಡ ಅನುಭವ ಹಂಚಿಕೊಳ್ಳುತ್ತಾ, ಆ ಅನುಭವದ ಗಂಧವನ್ನು ಆದಿಕೇಶವನ ಹೃದಯುದ ಒರೆಗಲ್ಲಿಗೆ ತೀಡುತ್ತಾ, ನೂರಾರು ಕೀರ್ತನೆಗಳನ್ನು ಸಾಂದರ್ಭಿಕವಾಗಿ ಕಟ್ಟಿ ಹಾಡಿದರು. ಹೀಗಿರಲು ಜೀವದ ಗೆಳೆಯರಾದ ಪುರಂದರದಾಸರು ಅಸ್ತಂಗತರಾದ ಸುದ್ದಿ ಬಂತು. ಆ ಕೂಡಲೇ ಅವರು ವಿಜಯನಗರದತ್ತ ಧಾವಿಸಿದರು. ಅಲ್ಲಿ ಅವರ ಕಳೇಬರವನ್ನು ಕಂಡು ಚರಮಗೀತೆಯನ್ನು ಹಾಡಿ, ಹಿಂದೊಮ್ಮೆ ತಾವು ಮಾಡಿದ ವಾಗ್ದಾನದಂತೆ ಪುರಂದರದಾಸರ ತಂಬೂರಿಯನ್ನು ತಿರುಪತಿಗೆ ಒಪ್ಪಿಸಿ ಬಂದರು.

ಪುರಂದರರ ಸಾವು ಮಾನವ ಬದುಕಿನ ನಶ್ವರತೆಯ ಸತ್ಯವನ್ನು ಮತ್ತೊಮ್ಮೆ ಸಾಬೀತುಗೊಳಿಸಿತು. ಇದರೊಟ್ಟಿಗೆ ತಮ್ಮ ಮೆಚ್ಚಿನ ದೊರೆ ಕೃಷ್ಣದೇವರಾಯನ ತರುವಾಯ ವಿಜಯನಗರಕ್ಕೆ ಒದಗಿದ ಗತಿ ಅವರನ್ನು ಬಿಟ್ಟೂಬಿಡದೆ ಕಾಡಿತು. ಅಧಿಕಾರದ ಲಾಲಸೆಯಿಂದ ರಾಜಪರಿವಾರದೊಳಗೇ ಉಂಟಾದ ಕೌಟುಂಬಿಕ ಕಲಹ, ಕೊಲೆ–ಅತ್ಯಾಚಾರ–ಭ್ರಷ್ಟಾಚಾರಗಳು, ರಾಜಪದವಿಯ ಪಿತ್ತ ನೆತ್ತಿಗೇರಿ ಪ್ರಜಾಸೇವೆಯ ಹೊಣೆ ಮರೆತ ದೊರೆಗಳ ದುರಾಡಳಿತ, ಸಾಮ್ರಾಜ್ಯದ ಒಳಜಗಳಗಳು ಗಡಿದಾಟಿ ಶತ್ರುಗಳೊಂದಿಗೆ ಒಪ್ಪಂದ ಮಾಡುವಂತೆ ಪ್ರೇರೇಪಿಸಿದ ಅಧಿಕಾರ ದಾಹ, ಪರಿಣಾಮವಾಗಿ ಶತ್ರುಗಳು ಒಗ್ಗೂಡಿ ವಿಜಯನಗರವನ್ನು ಧ್ವಂಸಗೊಳಿಸಿದ ರೀತಿ, ಯುದ್ಧಗಳ ಮೇಲಾಟದಲ್ಲಿ ಬದುಕನ್ನು ಕಳೆದುಕೊಂಡ ಜನಸಾಮಾನ್ಯರ ಹೀನಸ್ಥಿತಿ, ಸಡಿಲಗೊಂಡ ಕುಟುಂಬ ಸಂಬಂಧಗಳು, ಜೂಜುಕೋರರಾದ ಯುವಕರ ಸ್ಥಿತಿಗತಿ – ಎಲ್ಲವನ್ನು ಕಣ್ಣಾರೆ ಕಂಡು ಕನಕದಾಸರಿಗೆ ಬಹು ವ್ಯಸನವಾಯಿತು.

ಇನ್ನೂರು ವರ್ಷಗಳಿಗೂ ಹೆಚ್ಚು ಕಾಲ ಸರಿಸಾಟಿ ಇಲ್ಲದೆ ಮೆರೆದ ವಿಜಯನಗರ ಸಾಮ್ರಾಜ್ಯವನ್ನು ಕಂಡು–ಕೇಳಿ ಬಲ್ಲವರು ಕನಕದಾಸರು. ಅದು ತನ್ನ ಅಧಿಕಾರದ ವಿಸ್ತರಣೆ ಹಾಗೂ ಸಂಪತ್ತಿನ ಶೇಖರಣೆಗಾಗಿ ಕೈಗೊಂಡ ಹಲವು ಯುದ್ಧಗಳಲ್ಲಿ ಭಾಗಿಯಾಗಿದ್ದವರು ಕೂಡ. ಆದರೆ ಯುದ್ಧವು ಯಾವುದೇ ಸಮಸ್ಯೆಗೆ ಮದ್ದಲ್ಲ ಎಂಬುದನ್ನು ಅವರು ಬಹುಬೇಗ ಕಂಡುಕೊಂಡರು. ಸಾಮ್ರಾಜ್ಯದ ಸಂಪತ್ತಿನಲ್ಲಿ ಅಮಾಯಕರ ರಕ್ತದ ಕಲೆ ತಗುಲಿ ಅನೈತಿಕಗೊಂಡುದರ ಅರಿವು ಅವರಿಗಿತ್ತು. ಆದರೆ ಅದರಿಂದ ಹೊರಬಂದು ವಿರಾಗಿಯಾಗಿದ್ದರೂ, ಅದರ ಏರಿಳಿತಗಳ ಕಾರಣ ಮತ್ತು ಪರಿಣಾಮಗಳನ್ನು ಸೂಕ್ಷ್ಮ ದೃಷ್ಟಿಯಿಂದ ನೋಡುತ್ತಿದ್ದರು.

ಎಂತಹ ಸಾಮ್ರಾಜ್ಯಕ್ಕೆ ಎಂತಹ ಅಂತ್ಯ! 'ರಕ್ಕಸತಂಗಡಿ' ಯುದ್ಧದ ತರುವಾಯ ವಿಜಯನಗರಕ್ಕೆ ಒದಗಿದ ಸ್ಥಿತಿ ಕಂಡು ಇಂತಹ ಉದ್ಗಾರವನ್ನೆತ್ತಿದ್ದರು. "ಹಿಂಸಾಮಾರ್ಗದಲ್ಲಿ ಸಂಪಾದಿಸುವ ಯಾವುದೇ ಆಗಿರಲಿ ; ಅದು ಯಾವತ್ತಿಗೂ ಶಾಶ್ವತವಲ್ಲ" ಎಂಬ ಸತ್ಯವನ್ನು ಮತ್ತೊಮ್ಮೆ ಮನದಟ್ಟು ಮಾಡಿಕೊಂಡರು. ತಮ್ಮ ತಲೆಯೊಳಗೆ ಬಹುಕಾಲದಿಂದ ಕೊರೆಯುತ್ತಿದ್ದ ಮಹಾಭಾರತದ ನಳದಮಯಂತಿ ಉಪಾಖ್ಯಾನಕ್ಕೆ ಇದರಿಂದ ಒಂದು ಚೌಕಟ್ಟು ಸಿಕ್ಕಿದಂತಾಯಿತು. ಈ ಬಗೆಯ ರಾಜಪ್ರಭುತ್ವದ ಅರಾಜಕತೆಯ ವಸ್ತುವನ್ನು ಸೂಚ್ಯವಾಗಿ ಪ್ರತಿಪಾದಿಸುವ ಆ ಕತೆಯನ್ನು 'ನಳಚರಿತ್ರೆ' ಎಂಬ ಹೆಸರಿನಲ್ಲಿ ರಚಿಸಲಾರಂಭಿಸಿದರು. ಅದರ ಮೂಲಕ ಆದರ್ಶ ರಾಜ್ಯಭಾರದ ಕನಸನ್ನು ಕಂಡರು ; ಪ್ರಜಾಪ್ರೇಮದ ಸದಾಶಯವನ್ನು ತನ್ಮಯತೆಯಲ್ಲಿ ಬಣ್ಣಿಸಿದರು.

ಕನಕದಾಸರು ವಿಜಯನಗರ ಸಾಮ್ರಾಜ್ಯದ ಅರಸೊತ್ತಿಗೆಯ 'ವೈಭವ' ಹಾಗೂ 'ಅವನತಿ'ಯ ಎರಡೂ ಕಾಲಘಟ್ಟಗಳಿಗೆ ಸಾಕ್ಷಿಯಾದರು. ತಮ್ಮ ಈ ಹೊಸ ಕಾವ್ಯದಲ್ಲಿ ಸಾಮ್ರಾಜ್ಯಗಳು

ಒದಗಿಸುವ ವಿಪರೀತ ಭೋಗದ ನಶ್ವರತೆಯನ್ನು ಮನದಟ್ಟು ಮಾಡಿಸುವ ಪ್ರಯತ್ನ ಮಾಡಿದರು.

ಇಂತಹ ಕಾವ್ಯಗಳಲ್ಲಿ ಕಾಲಾಂತರಗಳವರೆಗೆ ಸಲ್ಲುವ ಆಶಯವನ್ನು ಹಿಡಿದಿಡುತ್ತಲೇ, ತತ್ವಪದಗಳ ಮೂಲಕ ಸಮಕಾಲೀನ ಜೀವನದ ಏರಿಳಿತಗಳಿಗೆ ಬುದ್ಧಿವಾದವನ್ನು ಹೇಳಲು ತೊಡಗಿದರು:

ಸತ್ಯಧರ್ಮಗಳೆಲ್ಲ ಎತ್ತ ಹೋದವೋ ಕಾಣೆ
ಉತ್ತಮರ ಜೀವನಕೆ ದಾರಿಯಿಲ್ಲ
ನಿತ್ಯದಲಿ ಕಳವು ವ್ಯಭಿಚಾರವುಳ್ಳವರೆಲ್ಲ
ಅರ್ಥಸಂಪನ್ನ ಭೋಗಭಾಗ್ಯವನನುಭವಿಸುತಿಹರು

– ಹೀಗೆ ಅನೈತಿಕ ಸಂಪತ್ತಿನಿಂದ ಮೆರೆದು ಕುರುಡರಾಗಿರುವವರನ್ನು ಕುರಿತು ಕೇವಲ ವಿಡಂಬಿಸುವ ಕೆಲಸದಲ್ಲಷ್ಟೇ ತೊಡಗಲಿಲ್ಲ. ಅಂಥವರ ಮನಪರಿವರ್ತನೆಯ ಹೊಣೆಗಾರಿಕೆಯನ್ನು ಹೊತ್ತುಕೊಂಡು ಆ ನಿಟ್ಟಿನಲ್ಲೂ ಕಾರ್ಯಪ್ರವೃತ್ತರಾದರು. ಬಡತನ ತಂದೊಡ್ಡುವ ಬರ್ಬರತೆಯನ್ನು ಕಾಣಿಸುವ ಪ್ರಯತ್ನ ಮಾಡಿದರು. ಆ ದಿಸೆಯಲ್ಲಿ ಜನಸಮೂಹವನ್ನು ದಾನಧರ್ಮಕ್ಕೆ ಪ್ರೇರೇಪಿಸುವ ಹಾಡನ್ನು ಕಟ್ಟಿದರು:

ಏನೂ ಇಲ್ಲದ ಎರಡು ದಿನದ ಸಂಸಾರ
ಜ್ಞಾನದಲಿ ದಾನಧರ್ಮ ಮಾಡಿರಯ್ಯ

ಹಸಿದು ಬಂದವರಿಗೆ ಅಶನವೀಯಲು ಬೇಕು
ಶಿಶುಗಳಿಗೆ ಪಾಲ್ಬೆಣ್ಣೆಗಳ ಉಣಿಸಬೇಕು
ಹಸನಾದ ಭೂಮಿಯನು ಧಾರೆ ಎರೆಯಲು ಬೇಕು
ಹುಸಿಯಾಡದೆ ಭಾಷೆ ನಡೆಸಲೇಬೇಕು...

ಸುಲಲಿತ ಸನ್ಮಾರ್ಗ

ಕನಕದಾಸರು ಉಳಿದ ದಾಸರಂತೆ ಕೇವಲ ಹರಿಕಥೆಯನ್ನು ಹಾಡುವ ಕೀರ್ತನಕಾರರಾಗಿರಲಿಲ್ಲ ಅವರು ಒಬ್ಬ ಮಹಾಕವಿಯೂ ಆಗಿದ್ದರು. ಅವರ ಮುಖ್ಯ ಉದ್ದೇಶ ದೇವರನ್ನು ಸಾರ್ವಜನಿಕಗೊಳಿಸುವುದಾಗಿತ್ತು. ಅದಕ್ಕಾಗಿ ಅವರು ಭಕ್ತರ ಮನೆಬಾಗಿಲಿಗೆ ಭಗವಂತನನ್ನು ಕರೆದು ತಂದರು. ಪಾರಮಾರ್ಥಿಕ ಚಿಂತನೆಯನ್ನು ಜಟಿಲಗೊಳಿಸಿ ಗೊಂದಲಗೊಳಿಸಿದ್ದ ಪರಿಸರದಲ್ಲಿ ಅದನ್ನು ಸರಳನೆಲೆಯಲ್ಲಿ ಚಿತ್ರಿಸಿದವರು ಕನಕದಾಸರು. 'ಸುಲಲಿತ ತತ್ವವನು ಸುಲಭ ಮಾರ್ಗದಿ ತೋರಿಸಲು' ಜನಪರಿಚಿತವಾದ ನಿದರ್ಶನಗಳನ್ನು ಅವರು ಬಳಸುತ್ತಿದ್ದರು. ಆ ಮುಖಾಂತರ ಅನುಭಾವವನ್ನು ಮುಟ್ಟಿಸುತ್ತಿದ್ದ ರೀತಿ ನೂತನವಾಗಿತ್ತು:

ಅಡಿಗೆಯ ಮಾಡಬೇಕಣ್ಣ – ನಾನೀಗ ಜ್ಞಾನ
ದಡಿಗೆಯನು ಮಾಡಬೇಕಣ್ಣ

ಅಡಿಗೆಯನ್ನು ಮಾಡಬೇಕು
ಮಡಿಸಬೇಕು ಮದಗಳನ್ನು
ಒಡೆಯನಜ್ಞೆಯಿಂದ ಒಳ್ಳೆ
ಸಡಗರದಲಿ ಮನೆಯ ಸಾರಿಸಿ

ತನ್ನ ಗುರುವನ್ನು ನೆನೆಯಬೇಕಣ್ಣ
ತನುಭಾವವೆಂಬ ಛಿನ್ನ ಕಲ್ಮಶವಳಿಯಬೇಕಣ್ಣ
ಒನಕೆಯಿಂದ ಕುಟ್ಟಿ ಕೇರಿ ತನಗೆ ತಾನೆ ಆದ ಕೆಚ್ಚ
ನನುವರಿತು ಇಕ್ಕಬೇಕು ಅರಿವರ್ಗವೆಂಬ ತುಂಟರಳಿಸಿ

ತತ್ವಭಾಂಡವ ತೊಳೆಯಬೇಕಣ್ಣ – ಸತ್ಯಾತ್ಮನಾಗಿ
ಅರ್ತಿ ಅಕ್ಕಿಯ ಮಥಿಸಬೇಕಣ್ಣ
ಕತ್ತರಿ ಮನವೆಂಬ ಹೊಟ್ಟನು ಎತ್ತಿ ಒಲೆಗೆ ಹಾಕಿ ಇನ್ನು
ಮುತ್ತಿಕೊಂಡಿಹ ಮಮತೆಯನ್ನು ಎತ್ತಿ ಎಸರ ಹಿಂಗಿಸುತಲಿ

ಜನನ ಸೊಂಡಿಗೆ ಹುರಿಯಬೇಕಣ್ಣ – ನಿಜವಾಗಿ ನಿಂತು
ತನುವು ತುಪ್ಪವ ಕಾಸಬೇಕಣ್ಣ
ಕನಕಗಿರಿ ಕಾಗಿನೆಲೆಯಾದಿಕೇಶವನ ದಾಸ
ಕನಕನ ಕಟ್ಟಳೆಯೊಳು ನಿಂತು ಸುಖದ ಪಾಕನ ಚಂದದಿ ಸವಿದುಣ್ಣಲಿಕ್ಕೆ

ಅಡಿಗೆಯನು ಮಾಡಬೇಕಣ್ಣ
ಜ್ಞಾನದಡಿಗೆಯನು ಮಾಡಬೇಕಣ್ಣ

– ಎಂಬಂತೆ ಭಕ್ತಿಸಾಧನೆಯನ್ನು ಅಡುಗೆಯ ತಯಾರಿಗೆ ಹೋಲಿಸಿ ಭಕ್ತ ಜನರ ಅಧ್ಯಾತ್ಮದ ಹಸಿವಿನ ಕಿಚ್ಚನ್ನು ಹೆಚ್ಚಿಸಿದರೆ,

ನಾರಾಯಣ ಎಂಬ ನಾಮವ ಬೀಜವನು ನಾಲಗೆಯ
ಕೂರಿಗೆಯ ಮಾಡಿ ಬಿತ್ತಿರಯ್ಯ

– ಎಂಬ ಹಾಡಿನ ಮೂಲಕ "ಹದಗೊಳಿಸಿದ ಮನೋಭೂಮಿಯಲ್ಲಿ ದೈವಸ್ಮರಣೆಯ ಶುದ್ಧ ಬೀಜವನ್ನು ಬಿತ್ತಿ, ಭಕ್ತಿಕೃಷಿ ಮಾಡಿದರೆ ವ್ಯಕ್ತಿಯ ಆಯುಷ್ಯದ ರಾಶಿಯನ್ನು ಸಮೃದ್ಧಗೊಳಿಸುವ ಫಸಲು ಬೆಳೆಯುತ್ತದೆ" ಎಂದು ಸಾರಿದರು.

ಹಾಗೆಂದು ಕೇವಲ ಸರಳನೆಲೆಯಲ್ಲೇ ಪಾರಮಾರ್ಥಿಕವನ್ನು ನಿಲ್ಲಿಸದೆ, ಅದನ್ನು ಅತ್ಯಂತ ಎತ್ತರಕ್ಕೆ ಒಯ್ದು ಜನರನ್ನು ಗಂಭೀರವಾಗಿ ತೊಡಗುವಂತೆ ಮಾಡುತ್ತಿದ್ದರು. ಮುಗ್ಧ ಜನರನ್ನು ಜ್ಞಾನಿಗಳಾಗಿ ಪರಿವರ್ತಿಸಬೇಕೆಂಬುದು ಕನಕದಾಸರ ಬಯಕೆ. ಆದರೆ ಹಿಂದಿನವರಂತೆ ಜ್ಞಾನದ ಹೆಸರಿನಲ್ಲಿ ಜನರನ್ನು ಭಯಭೀತರಾಗಿಸದೆ, ಅದನ್ನು ಕೈವಶಮಾಡಿಕೊಳ್ಳುವ ದಾರಿಗಳನ್ನು ಶೋಧಿಸುತ್ತಿದ್ದರು. ಆ ನಿಟ್ಟಿನಲ್ಲಿ ಪಾರಮಾರ್ಥಿಕ ಅನುಭಾವ ಚಿಂತನೆಯನ್ನು ಸರಳವಾಗಿ ಆರಂಭಿಸಿ, ಹಂತಹಂತವಾಗಿ ಬೆಳೆಸುತ್ತ ಗಹನವಾಗಿಸಿ,

ಅಪೂರ್ವ ಘನಗಂಭೀರ ವಿಚಾರ ಹೊರಹೊಮ್ಮುವಂತೆ ಮಾಡುವ ಸೃಜನಶೀಲ ಶಕ್ತಿ ಅವರಿಗೆ ಸಿದ್ಧಿಸಿತ್ತು.

ಲೌಕಿಕ ಜೀವನದಲ್ಲಿ ಪರಿಶುದ್ಧ ನೀತಿಮಾರ್ಗದಿಂದ ಬಾಳಿದರೆ ಸದ್ಗತಿ ದೊರಕುವುದೆಂದು ಕನಕದಾಸರು ಬೋಧಿಸಿದರು. ಅವರ ಬೋಧನೆಯ ಪ್ರಕಾರ, ಬದುಕಿನಲ್ಲಿ ಎದುರಾಗುವ ಪರಿಸ್ಥಿತಿಗಳಿಗೆ ತಲ್ಲಣಗೊಳ್ಳದೆ ದೇವರ ಕೃಪೆಯನ್ನು ನಂಬುವುದು ; ಧರ್ಮದ ಚೌಕಟ್ಟಿನೊಳಗೆ ಪುರುಷಾರ್ಥಗಳನ್ನು ಸಾಧಿಸುವುದು ; ಕಾಮ, ಕ್ರೋಧ, ಮದ, ಮತ್ಸರ, ಮೋಹ, ಲೋಭಗಳೆಂಬ ಅರಿಷಡ್ವರ್ಗಗಳನ್ನು ತೊರೆದು ನಿರ್ಮಲವಾಗುವುದು ; ನೆರೆಹೊರೆಯವರನ್ನು ಪ್ರೀತಿಸುವುದು – ಇವು ದೇವರನ್ನು ಮೆಚ್ಚಿಸಲು ಇರುವ ಆತ್ಯಂತಿಕ ದಾರಿಗಳು. ಅದಕ್ಕೆ ಸಂಪತ್ತಿನ ಒಡೆತನವಾಗಲಿ, ಜಾತಿಕುಲದ ಹಿನ್ನೆಲೆಯಾಗಲಿ, ಅಧಿಕಾರ–ಅಂತಸ್ತುಗಳ ಬೆನ್ನಾಸರೆಯಾಗಲಿ ಬೇಕಾಗಿಲ್ಲವೆಂಬುದು ಅವರ ಪ್ರಾಮಾಣಿಕ ಅಭಿಮತವಾಗಿತ್ತು.

ಕೊನೆಯ ದಿನಗಳು

ಕನಕದಾಸರಿಗೆ ತಮ್ಮ ಜೀವನದ ಅಂತ್ಯವು ಸುಖಕರವೆನಿಸಲಿಲ್ಲ. ಅವರಿಗೆ ಪ್ರಿಯರಾಗಿದ್ದ ಗುರು ವ್ಯಾಸರಾಯರು ಮತ್ತು ಪುರಂದರದಾಸರು ಕಾಲವಾಗಿದ್ದರು. ಹಾಗಾಗಿ ಅವರ ಯೋಗಿಜೀವನದಲ್ಲೂ ಅನಾಥಭಾವ ಕಾಣಿಸಿಕೊಂಡಿತು. ಆ ನಂತರವೂ ಹಲವು ವರ್ಷಗಳ ಕಾಲ ದೇವರ ಹೆಸರಿನಲ್ಲಿ ಭಕ್ತರ ಸೇವೆ ಮಾಡುತ್ತಾ ಜೀವಿಸಿದರು. ಈಗ ಅವರಿಗೆ ತೊಂಬತ್ತು ತುಂಬಿ ಜೀವಭಾವ ಹಣ್ಣುಹಣ್ಣಾಗಿ ಮಾಗಿತ್ತು.

ತತ್ವಜ್ಞಾನಿ ಕನಕದಾಸರು ವಯಸ್ಸು ಇಳಿದಂತೆ ಮೌನಿಯಾಗತೊಡಗಿದರು. "ನಾಲಿಗೆಗೆ ಆದ ಗಾಯವನ್ನು ಮಾಯಿಸಬಹುದು ; ಆದರೆ ನಾಲಿಗೆಯಿಂದ ಉಂಟಾಗುವ ಗಾಯವನ್ನು ವಾಸಿ ಮಾಡಲಾಗದು" ಎಂಬ ಸತ್ಯಕ್ಕೆ ತಮ್ಮನ್ನು ತೆತ್ತುಕೊಂಡವರಂತೆ ಇರುತ್ತಿದ್ದರು. ಆ ಮೌನದ ಸಂದರ್ಭದಲ್ಲಿ ಮನದ ಒಳಗಿಳಿದು ತಾವು ನಡೆದು ಬಂದ ಜೀವಿತದ ಏಳುಬೀಳುಗಳ ಚಿತ್ರವನ್ನು ಕಣ್ಣಮುಂದೆ ತಂದುಕೊಳ್ಳುತ್ತಿದ್ದರು. ಎಲ್ಲಿಂದ ಎಲ್ಲಿಗೋ ಕರೆದೊಯ್ಯುವ ಹರಿಯ ಮಹಿಮೆಯನ್ನು ನೆನೆದು ಕೊರಳು ತುಂಬಿಕೊಂಡರು. ತನ್ನಂತೆ ಎಲ್ಲ ಜೀವಗಳನ್ನೂ ನಿರರ್ಥಕ ಜಂಜಾಟಗಳಿಂದ ದೂರಸಾಗಿಸಿ ಮೋಕ್ಷಸಿದ್ಧಿ ಒದಗಿಸಬೇಕಲ್ಲ ಎಂದು ಕನವರಿಸಿದರು. ಹೀಗೆ ಕನವರಿಸುತ್ತಾ ಸದಾಕಾಲ ತಾವು ಕಟ್ಟಿಸಿದ ಕಾಗಿನೆಲೆಯ ಆದಿಕೇಶವನ ಗುಡಿಯಲ್ಲೇ ಕಾಲ ಕಳೆಯತೊಡಗಿದರು. ಅಲ್ಲಿ ತಮ್ಮ ನೆಚ್ಚಿನ ಅಧಿದೈವ ಕೇಶವನ ಪಾದವನ್ನು ಬಿಟ್ಟು ಕದಲದಾದರು. 'ತೊರೆದು ಜೀವಿಸಬಹುದೇ ಹರಿ ನಿನ್ನ ಚರಣಗಳ' ಎಂಬುದು ಅವರ ಸದ್ಯದ ಜೀವಿತದ ಏಕೈಕ ಮಂತ್ರವಾಯಿತು.

ದಿನೇ ದಿನೇ ವೃದ್ಧಾಪ್ಯದ ಪರಿಣಾಮ ಕನಕದಾಸರು ನಿಶ್ಶಕ್ತರಾದರು. ಹಲವು ರೀತಿಯಲ್ಲಿ ಎಡೆಬಿಡದೆ ಹೋರಾಡಿದ ಅವರ ಪುಣ್ಯಶರೀರ ಜೀರ್ಣವಾಗಿ ಹೋಗಿತ್ತು. ತಮ್ಮ ಜೀವಿತದ

ಸುದೀರ್ಘ ಹಿನ್ನೆಲೆಯನ್ನು ನೆನೆದು ಹನಿಗಣ್ಣಾದರು. ಕಾಡುಗಲ್ಲಾಗಿದ್ದ ತಮ್ಮನ್ನು ಉದ್ದಕ್ಕೂ ತಿದ್ದಿ ತೀಡಿ 'ಭಾಗವತ'ನನ್ನಾಗಿಸಿದ ಹರಿಕರುಣೆಗೆ ಸಾಟಿಯಿಲ್ಲ ಎಂದುಕೊಂಡರು. ಅವರ ಭಕ್ತಿ ವೈರಾಗ್ಯ ಸದಾಚಾರಗಳ ಹೃದಯಕ್ಕೆ ರೆಕ್ಕೆ ಮೂಡಿ ಗರಿಹಗುರವಾದಂತಾಯಿತು. ಸದಾಕಾಲ ತನ್ನನ್ನು ಜಾಗೃತವಾಗಿಸಿದ ಜನ್ಮಬಂಧು ಆದಿಕೇಶವನ ಎದುರು ಅನಂತ ಶ್ರದ್ಧೆಯಿಂದ ಸಖ–ವಾತ್ಸಲ್ಯ–ಪ್ರೇಮ–ದಾಸಭಾವದಲ್ಲಿ ಅಂತಿಮ ನಮನ ಸಲ್ಲಿಸಿದರು:

ಹೇಗಿದ್ದು ಹೇಗಾದೆಯೊ ಆತ್ಮ
ಹೇಗಿದ್ದು ಹೇಗಾದೆಯೊ ...

ಬಸಿರ ಹಳ್ಳಿಗೆ ಬಂದು ಮಾಸನೂರಲಿ ನಿಂದು
ಕುಸುಕಾಡಿ ನುಡಿದು ನೆಲಬಟ್ಟೆವಿಡಿದು
ಕಿಸುಕದರಿವೆಯ ಪೊದ್ದು ಮಲಮೂತ್ರದಲಿ ಬಿದ್ದು
ವಸುಧೆಯಲಿ ದಿನಗಳೆದೆಯಲ್ಲ ಆತ್ಮ

ಎಳೆಗೆರೆಯಲಿ ಆಡಿ ಯೌವನದೂರಿಗೆ ಬಂದು
ಥಳಥಳಿಪ ಹಸ್ತಾದ್ರಿ ನೆಳಲ ಸೇರಿ
ಅಳಲುಸುತ ಬೆಳೆದು ದಾರಿದ್ರ್ಯ ಪೇಟೆಗೆ ಬಂದು
ಹಳೆಯ ಬೀಡಿಗೆ ಪಯಣವೇ ಆತ್ಮ

***

ದೀನ ನಾನು
ಸಮಸ್ತಲೋಕಕೆ ದಾನಿ ನೀನು
ವಿಚಾರಿಸಲು ಮತಿಹೀನ ನಾನು
ಮಹಾಮಹಿಮ ಕೈವಲ್ಯ ಪತಿ ನೀನು
ಏನ ಬಲ್ಲೆನು ನಾನು
ನೆರೆ ಸುಜ್ಞಾನ ಮೂರುತಿ ನೀನು
ನಿನ್ನ ಸಮಾನರುಂಟೆ ದೇವ...

***

ಮುಕುತರಾದರು ಎನ್ನ ನೂರೊಂದು ಕುಲದವರು
ಮುಕುತಿ ಮಾರ್ಗಕೆ ಯೋಗ್ಯ ನಾನಾದೆನೊ
ಅಕಳಂಕ – ಶ್ರೀ ಹರಿ ಭಕುತಿಗಳನು ಮನ ಬೆಳೆದು
ರುಕುಮಿಣಿಯರಸ ಕೈವಶವಾದನೆನಗೆ...

ಎನ್ನುತ್ತಾ ತಮ್ಮ ಬದುಕು ಸಾಗಿದ ಏರಿಳಿತದ ದಾರಿಗಳನ್ನು ನೆನೆನೆನೆದು ಧನ್ಯತೆಯನ್ನು ಅನುಭವಿಸಿ ಪರವಶರಾದರು. ಕೊನೆಗೆ, ತಮ್ಮ ಇಷ್ಟದೈವದ ಬಳಿ ಅಂತಿಮ ಆಸೆಯನ್ನು ಕೋರಿಕೊಳ್ಳುವಂತೆ:

ಮಣ್ಣಿನಲಿ ಬಂಧಿಸಿದ ದೇಹವ
ಮಣ್ಣುಗೂಡಿಸಬೇಡ ; ಜ್ಞಾನದ
ಕಣ್ಣ ದೃಷ್ಟಿಯನಿಟ್ಟು ರಕ್ಷಿಸು ನಮ್ಮನು ಅನವರತ

– ಎಂದು ಮೈದುಂಬಿಕೊಂಡು ಹಾಡುತ್ತಾ ಹಾಡುತ್ತಾ ಆದಿಕೇಶವನ ಪಾದಗಳ ಮೇಲೆ ತಣ್ಣಗೆ ಮಲಗಿದರು. ದೇವರಿಗೆ ಮುಡಿಪಾದ ಹೂವೊಂದು ಸಕಲ ಪರಿಮಳದೊಂದಿಗೆ ಗಿಡದಿಂದ ಉದುರಿ ಮಣ್ಣಿಗಿಳಿದಂತಾಯಿತು. (ಕ್ರಿ.ಶ. 1488ರ ಸುಮಾರಿನಲ್ಲಿ ಹುಟ್ಟಿದ ಕನಕದಾಸರು 90ಕ್ಕೂ ಹೆಚ್ಚು ಸಾರ್ಥಕ ವಸಂತಗಳನ್ನು ಪೂರೈಸಿ, ಕ್ರಿ.ಶ. ಸುಮಾರು 1578ರಲ್ಲಿ ಕಾಗಿನೆಲೆಯಲ್ಲಿ ಕೊನೆಯುಸಿರೆಳೆದರು).

ಕಲಿಯಾಗಿ, ವಿರಕ್ತನಾಗಿ, ಭಕ್ತನಾಗಿ, ದಾಸನಾಗಿ, ದಾರ್ಶನಿಕನಾಗಿ, ಕೀರ್ತನಕಾರನಾಗಿ, ಮಹಾಕವಿಯಾಗಿ, ಸಮಾಜ ವಿಜ್ಞಾನಿಯಾಗಿ, ಬಂಡಾಯ ಮನೋಧರ್ಮಿಯಾಗಿ, ಸ್ವ-ವಿಮರ್ಶಕನಾಗಿ, ಸಂಸ್ಕೃತಿ ಚಿಂತಕನಾಗಿ, ಜನಪದರಲೊಬ್ಬನಾಗಿ ಕನಕದಾಸರು ಕನ್ನಡ ಸಂಸ್ಕೃತಿ ಮತ್ತು ಮಾನವ ಸಮಾಜಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ಅವರ ಹಲವು ವ್ಯಕ್ತಿತ್ವಗಳು ಏಕೀಭವಿಸಿಕೊಂಡ ಒಟ್ಟಾರೆ ದರ್ಶನ ಕಾಲ-ಧರ್ಮದೊಂದಿಗೆ ಪ್ರವಹಿಸುತ್ತಲೇ ಬರುತ್ತಿದೆ. ಇದೇ ಮಹಾಸಂತಕವಿ ಕನಕದಾಸರ ಅನನ್ಯತೆ ; ಶ್ರೇಷ್ಠತೆ. ಹಾಗಾಗಿ ಅವರು ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ಚಿರಸ್ಥಾಯಿ ಧ್ರುವತಾರೆ.

******

ಕನಕ ಕಾವ್ಯ–ಕೀರ್ತನೆಗಳು

ಕನಕದಾಸರ ಇದುವರೆಗಿನ ಜೀವನಚಿತ್ರಣವನ್ನು ನೋಡಿದಾಗ ಅವರು ಹಲವು ಮಜಲುಗಳಲ್ಲಿ ಬೆಳೆದುಬಂದ ಸಂತಶ್ರೇಷ್ಠರು ಎಂಬುದು ತಿಳಿಯುತ್ತದೆ. ಭಕ್ತಿಯೆಂಬ ಜೀವತತ್ವದಲಿ ಕಾಯಾವಾಚಾಮನಸಾ ನೆಲೆನಿಂತು ಪರಿಪಕ್ವಗೊಂಡ ಅವರ ವ್ಯಕ್ತಿತ್ವ ನಮಗೆಲ್ಲ ಆದರ್ಶಪ್ರಾಯವಾದುದು. ಏಕೆಂದರೆ, ಅವರು ನಿರಂತರ ಸಾಧನೆಯ ದಾರಿಯಲ್ಲಿ ಕಂಡುಕೊಂಡ ತಿಳಿವಳಿಕೆಯನ್ನು ತಮ್ಮೊಳಗೇ ಲಯವಾಗಲು ಬಿಡಲಿಲ್ಲ. ಅದನ್ನು ಲೋಕದ ಜೊತೆ ಹಂಚಿಕೊಳ್ಳಲು ನಿಶ್ಚಯಿಸಿದರು. ಅದಕ್ಕಾಗಿ ಅವರು ಸಾಹಿತ್ಯವನ್ನು ಲೋಕಸಂವಾದದ ಮಾಧ್ಯಮವನ್ನಾಗಿ ಬಳಸಿಕೊಂಡರು. ಅದರಲ್ಲಿ ಹಲವು ರೀತಿಯ ಹೊಸ ಪ್ರಯೋಗಗಳನ್ನು ಕೂಡ ಮಾಡಿದರು.

ಹಾಗಾಗಿ ಕನಕದಾಸರು ಕೇವಲ ಸಂತರು ಮಾತ್ರವಲ್ಲ. ಅವರೊಬ್ಬ ಅಪರೂಪದ ಕವಿಯೂ ಆಗಿದ್ದವರು. ಬಾಲ್ಯಕಾಲದಿಂದಲೂ ಕಾವ್ಯ–ಸಂಗೀತ ಗೋಷ್ಠಿಗಳಲ್ಲಿ ಪಾಲ್ಗೊಂಡಿದ್ದರಿಂದ, ಶ್ರೇಷ್ಠ ಕಾವ್ಯಗಳ ಸತತ ಅಧ್ಯಯನ ನಡೆಸಿದ್ದರಿಂದ, ವ್ಯಾಸಂಗದ ಅವಧಿಯಲ್ಲಿ ಛಂದಸ್ಸು–ಅಲಂಕಾರ–ಶಾಸ್ತ್ರ–ಪುರಾಣಗಳನ್ನು ಆಸಕ್ತಿಪೂರ್ಣವಾಗಿ ಅರಿತಿದ್ದರಿಂದ ಹಾಗೂ ಇವೆಲ್ಲಕ್ಕಿಂತ ಮುಖ್ಯವಾಗಿ ಕಣ್ಣೆದುರಿನ ಕಷ್ಟಸುಖಗಳಿಗೆ ಸ್ಪಂದಿಸುವ ಸೂಕ್ಷ್ಮತೆ ಹೊಂದಿದ್ದರಿಂದ ಅವರು ಸಹಜವೆಂಬಂತೆ ಕವಿಯಾಗಿ ಹೊರಹೊಮ್ಮಿದರು. ಜೊತೆಗೆ ಸಾಧಕ ಬದುಕಿನ ಋಷಿತನವೂ ಮೇಳೈಸಿ ತಮ್ಮ ಸಾಹಿತ್ಯದ ಅಭಿವ್ಯಕ್ತಿಗೊಂದು ಹೊಸ ಆಯಾಮವನ್ನು ಸೃಷ್ಟಿಸಿಕೊಂಡರು.

ಕೀರ್ತನೆಗಳು

ಸಾಹಿತ್ಯದ ಬೇರೆಬೇರೆ ಪ್ರಕಾರಗಳಲ್ಲಿ ಕೃಷಿ ಮಾಡಿದ ಕನಕದಾಸರು, ಸಮಾಜವನ್ನು ಮೊದಲಿಗೆ ಮುಖಾಮುಖಿಯಾದದ್ದು ವೈವಿಧ್ಯಮಯ ಕೀರ್ತನೆಗಳ ಮುಖಾಂತರ. ದಂಡನಾಯಕ ಪದವಿ ತ್ಯಜಿಸಿ, ಶ್ರೀಹರಿಯ ದಾಸರಾಗಿ ಸಂಚಾರ ಕೈಗೊಳ್ಳುವ ಹೊತ್ತಿನಲ್ಲಿ ಅವರಿಗೆ ಭಕ್ತಿ ಸಮರ್ಪಣೆಗೆ ಹಾಡಿನ ಧಾಟಿಯೊಂದು ಬೇಕಿತ್ತು. ಅದು ಸರಳವೂ ಸ್ಪಂದನಶೀಲವೂ ಆಗಬೇಕಾದುದು ಅವಶ್ಯಕವಾಗಿತ್ತು. ಅದರಂತೆ ಆಗ ತಂಬೂರಿ–ತಾಳಗಳ ಮೇಳದೊಂದಿಗೆ ಅವರ ಹೃದಯದಿಂದ ಅರಳಿದ ಭಾವಗಳೇ ಕೀರ್ತನೆಗಳು.

ಕನಕದಾಸರ ದೈವಭಕ್ತಿಯ ಭಾವುಕತೆ ತುಂಬುತೊರೆಯಾಗಿ ಅವರ ಅಸಂಖ್ಯ ಕೀರ್ತನೆಗಳಲ್ಲಿ ಹೊರಸೂಸಿ ಹರಿದಿರುವುದನ್ನು ನಾವು ಕಾಣಬಹುದು. ಅಂದಮಾತ್ರಕ್ಕೆ ಅವರು ಬರಿಯ ಅಂತರಂಗದ ಭಾವುಕತೆಯಷ್ಟಕ್ಕೇ ಭಕ್ತಿಯನ್ನು ಸೀಮಿತ ಮಾಡಲಿಲ್ಲ. ಅದನ್ನು ಮೀರಿ ತಮ್ಮ ಸುತ್ತಲಿನ ಸಮಾಜದ ಮುಗ್ಧತೆ, ಮೌಢ್ಯ, ಬೂಟಾಟಿಕೆ, ಅಜ್ಞಾನ, ಅತ್ಯಾಚಾರಗಳನ್ನು ಮುಟ್ಟುವ ಪ್ರಯತ್ನ ಮಾಡಿದರು. ಈ ದಿಕ್ಕಿನಲ್ಲಿ ಅದನ್ನೊಂದು ವೈಚಾರಿಕ ಅಸ್ತ್ರವನ್ನಾಗಿ ಬಳಸಿಕೊಂಡರು.

ಕನಕದಾಸರು ತಮ್ಮ ಅಂತರಂಗದ ಭಕ್ತಿಯನ್ನು ಸಮಾಜೀಕರಣಗೊಳಿಸಿ ಸಾರ್ವತ್ರಿಕಗೊಳಿಸಿದ್ದು ಅವರ ವಿಶಿಷ್ಟತೆ. ಅದಕ್ಕಾಗಿ ಅವರು ಕೀರ್ತನೆಗಳಲ್ಲೇ ಹಲವು ಬಗೆಯ ಪ್ರಯೋಗಗಳನ್ನು ಮಾಡಿದರು. ಜನಸಾಮಾನ್ಯರ ಅಭಿವ್ಯಕ್ತಿ ಕಲೆಗಳಾದ ಕೋಲಾಟ, ಲಾವಣಿ, ಡೊಳ್ಳುಪದ, ತತ್ವಪದ – ಮುಂತಾದ ಪ್ರಕಾರಗಳನ್ನು ಸಮರ್ಥವಾಗಿ ದುಡಿಸಿಕೊಂಡರು. ಅವರು ಸಾಮಾನ್ಯ ತಳವರ್ಗದಿಂದ ಬಂದ ಅನುಭವದ ಹಿನ್ನೆಲೆಯಲ್ಲಿ ಇದು ಬೇರೆಯವರಿಗಿಂತ ಹೆಚ್ಚು ಸುಗಮವಾಯಿತು. ಇದರ ಜೊತೆಗೆ ಭಕ್ತಿವೇದಾಂತವನ್ನು ಎಲ್ಲ ರಾಗತಾಳಗಳಲ್ಲಿ ಹಾಡಬಹುದಾದ 'ಉಗಾಭೋಗ'ಗಳನ್ನೂ, ಸುಲಭದ ಹಾದಿಯಲ್ಲಿ ವಿಚಾರಗಳನ್ನು ತಲುಪಿಸುವ 'ಸುಳಾದಿ'ಗಳನ್ನೂ, ಕೆಣಕಿದವರನ್ನು ತಿಣಕಾಡಿಸುವಂತೆ ಶಬ್ದಚಮತ್ಕಾರದಲಿ ಸವಾಲು ಎಸೆಯುವ 'ಮುಂಡಿಗೆ'ಗಳನ್ನೂ ರಚನೆ ಮಾಡಿದರು. ಹೀಗೆ ಈ ಎಲ್ಲ ಪ್ರಯೋಗಗಳ ಮೂಲಕ ಸಾಹಿತ್ಯಕ್ಕೆ ರಾಗತಾಳಗಳ ಕಸಿ ಮಾಡಿ ಕರ್ಣಾಟಕ ಹಾಗೂ ಭಾರತೀಯ ಶಾಸ್ತ್ರಸಂಗೀತ ಪರಂಪರೆಗೆ ವಿಶೇಷ ಮಟ್ಟುಗಳನ್ನು ಕೊಡುಗೆಯಾಗಿ ಕೊಟ್ಟರು.

ಹೀಗೆ ಕನಕದಾಸರು ಸಾಮಾಜಿಕ, ಪೌರಾಣಿಕ, ಪಾರಮಾರ್ಥಿಕ ಅಂಶಗಳನ್ನು ಒಳಗೊಂಡ ಸುಮಾರು 300ಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿದರು. ಕೀರ್ತನೆಗಳನ್ನಲ್ಲದೆ, ನಾಲ್ಕು ಅಪರೂಪದ ಕಾವ್ಯಕೃತಿಗಳನ್ನೂ ರಚಿಸಿದರು. ಕೀರ್ತನೆಗಳು ಕನಕದಾಸರ ಸೃಜನಶೀಲತೆಯ ಒಂದು ಮಗ್ಗುಲಾದರೆ, ಕಾವ್ಯಕೃತಿಗಳು ಅವರ ಸಾಧನೆಯ ಇನ್ನೊಂದು ಮುಖ್ಯ ಮಗ್ಗುಲನ್ನು ತೆರೆದಿಡುತ್ತವೆ. ಕೀರ್ತನೆಗಳು ಲೌಕಿಕ ಜೀವನದ ಜಂಜಾಟ ಮತ್ತು ಅಲೌಕಿಕ ಭಕ್ತಿಗೆ ಹಿಡಿದ ಭಾವೋನ್ಮಾದದ ಕನ್ನಡಿಯಾದರೆ, ಕಾವ್ಯಗಳು ಅವರೊಬ್ಬ ಸಾಮಾಜಿಕ ಸ್ಪಂದನೆಯ ವಿದ್ವಾಂಸ – ಕವಿ ಎಂಬುದನ್ನು ತೋರಿಸುವ ಕೈದೀಪವಾಗಿದೆ. ಅವರು ರಚಿಸಿದ ಕಾವ್ಯಕೃತಿಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಲಾಗಿದೆ.

ಮೋಹನ ತರಂಗಿಣಿ

ಬಹುಶಃ ಇದು ಕನಕದಾಸರು ತಮ್ಮ ತಾರುಣ್ಯಕಾಲದ ಸ್ಫೂರ್ತಿಯಲ್ಲಿ ಬರೆದ ಮೊದಲ ಕಾವ್ಯಕೃತಿ. ಆ ಹೊತ್ತಿನ ವಯೋಸಹಜವಾದ ಕಲ್ಪನಾವಿಲಾಸ, ರಸಿಕತನ, ಯುದ್ಧವೀರಗುಣಗಳ ಸಂಗಮವನ್ನು ಇದರಲ್ಲಿ ಗಾಢವಾಗಿ ಕಾಣಬಹುದು. ಈ ಕಾವ್ಯಕ್ಕೆ ಕಥಾವಸ್ತುವನ್ನು ಮಹಾಭಾರತ, ಹರಿವಂಶ, ಭಾಗವತ, ಪುರಾಣಗಳಿಂದ ಆರಿಸಲಾಗಿದೆ. ನಲವತ್ತೆರಡು ಸಂಧಿ(ಅಧ್ಯಾಯ)ಗಳ ವಿಶಾಲ ಭಿತ್ತಿಯಲ್ಲಿ ಸು.2800ಕ್ಕೂ ಹೆಚ್ಚು ಪದ್ಯಗಳಿಂದ ಈ ಕಾವ್ಯದ ಮಹಾಸೌಧವನ್ನು ಕಟ್ಟಲಾಗಿದೆ. ಸಂಗೀತದ ಲಯ–ಮಾಧುರ್ಯವನ್ನು ಹೊಮ್ಮಿಸುವ ದೇಸೀಯವಾದ 'ಸಾಂಗತ್ಯ' ಛಂದಸ್ಸಿನಲ್ಲಿ ಇದನ್ನು ರಚಿಸಲಾಗಿದೆ.

ಪೀಠಿಕಾ ಭಾಗದಲ್ಲಿ:

> ಕೃತಿವೇಳ್ದ ಕನಕದಾಸೋತ್ತಮು. ಕೇಳ್ದವಳು
> ಅತಿ ಸುಜ್ಞಾನವಧೂಟಿ

ಕೃತಿಗೆ ಕರ್ತನು ಕಾಗಿನೆಲೆಯಾದಿಕೇಶವ
ಕೃತಿಯ ಕೇಳ್ದರೆ ಪುಣ್ಯವಹುದು

– ಎಂಬ ಕವಿ ಕಾವ್ಯ ನೆಲೆಯ ಪ್ರಾಥಮಿಕ ವಿವರಗಳಿವೆ.

ಇದೊಂದು ಶೃಂಗಾರ ಪ್ರಧಾನವಾದ ಕಾವ್ಯ. ಕೃಷ್ಣ ರುಕ್ಮಿಣಿ, ರತಿ ಮನ್ಮಥ, ಉಷಾ ಅನಿರುದ್ಧ – ಈ ಮೂರು ತಲೆಮಾರುಗಳ ಪ್ರಣಯ ಹಾಗೂ ವಿರಹ ಜೀವನದ ರಸಕ್ಷಣಗಳನ್ನು ಇದರಲ್ಲಿ ಅದ್ಭುತರಮ್ಯವಾಗಿ ಚಿತ್ರಿಸಲಾಗಿದೆ. ರತಿ–ಮನ್ಮಥರ ಜನ್ಮಾಂತರಗಳ ಪ್ರೇಮಕಥನವೇ ಕಾವ್ಯದ ಕೇಂದ್ರವಾಗಿರುವುದರಿಂದ ಶೃಂಗಾರರಸದ ತೊರೆ ಹೊನಲಾಗಿ ಹರಿದಿದೆ. ಜೊತೆಗೆ ಸಾಹಿತ್ಯ, ಶಾಸ್ತ್ರ, ಮೀಮಾಂಸೆಗಳ ನಿರಂತರ ಅನುಸಂಧಾನದಿಂದ ಗಳಿಸಿಕೊಂಡ ಪಾಂಡಿತ್ಯ ; ಸಾಂಪ್ರದಾಯಿಕ ಪುರಾಣದ ಚೌಕಟ್ಟು ಹಾಗೂ ತನ್ನ ಕಾಲದ ಸಾಮಾಜಿಕ ವ್ಯವಸ್ಥೆಯನ್ನು ಪ್ರತಿಬಿಂಬಿಸುವ ಜಾಣ್ಮೆಯಿಂದಾಗಿ 'ಮೋಹನತರಂಗಿಣಿ'ಗೆ ಬೃಹತ್ತೂ ಮಹತ್ತೂ ಪ್ರಾಪ್ತವಾಗಿದೆ.

ಇದನ್ನು ಕನಕದಾಸರು ಪ್ರೀತಿಗೌರವದಿಂದ 'ಕೃಷ್ಣಚರಿತೆ' ಎಂದು ಕರೆದಿದ್ದಾರೆ. ಕೃಷ್ಣನೇ ಈ ಕಾವ್ಯದ ಹೃದಯ. ಕಾವ್ಯದ ಶೀರ್ಷಿಕೆಯಿಂದ ಅಂತ್ಯದವರೆಗೆ ಕೃಷ್ಣನ ಲೀಲೆಗಳೇ ಸಂಪೂರ್ಣ ಆವರಿಸಿಕೊಂಡಿದೆ. ಕುಮಾರವ್ಯಾಸನ ಕೃತಿಯಂತೆ ಹೆಜ್ಜೆಹೆಜ್ಜೆಗೆ ಕೃಷ್ಣಪಾರಮ್ಯವನ್ನು ಹೊಗಳದೆ ಅವರಿಗೆ ತೃಪ್ತಿಯಿಲ್ಲ. ಆ ಅರ್ಥದಲ್ಲಿ ಇದೊಂದು ಭಕ್ತಿಕಾವ್ಯ.

ಅಷ್ಟು ಮಾತ್ರವಲ್ಲದೆ, ಕೃಷ್ಣಭಕ್ತಿಯ ಮುಸುಕಿನಲ್ಲಿ ತನ್ನ ಪ್ರಿಯದೊರೆ ಕೃಷ್ಣದೇವರಾಯನ ವರ್ಣಮಯ ವ್ಯಕ್ತಿತ್ವವನ್ನು ಸಮೀಕರಿಸಿ, ವಿಜಯನಗರ ಕಾಲದ ಜನಜೀವನವನ್ನು ಚಿತ್ರಿಸಲಾಗಿದೆ. ಅದಕ್ಕೆ ಸಾಕ್ಷಿ ಎಂಬಂತೆ ತಮ್ಮ ಕಾಲದ ಅರಮನೆ–ಪುರಭವನ, ಯುದ್ಧ–ಸಂಧಾನ ತಂತ್ರ, ವ್ಯಾಪಾರ–ವಹಿವಾಟು, ಮಹಿಳೆಯರ ಶೃಂಗಾರ ಸಾಧನ, ಆಹಾರ–ವಸತಿ, ಉಡುಗೆ–ತೊಡುಗೆ ಇತ್ಯಾದಿಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಕರ್ನಾಟಕದ ಮಟ್ಟಿಗೆ ಮಧ್ಯಯುಗದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಬಲ್ಲವರಿಗೆ ಸಾಕಷ್ಟು ಪೂರಕ ಸಾಮಗ್ರಿ ಒದಗಿಸುತ್ತದೆಂಬುದೇ ಈ ಕಾವ್ಯದ ಹೆಗ್ಗಳಿಕೆ.

ಇನ್ನೊಂದು ಬಹಳ ಮುಖ್ಯವಾದ ಅಂಶವೆಂದರೆ, ಈ ಕಾವ್ಯದಲ್ಲಿ ಎದ್ದು ಕಾಣುವ ಧರ್ಮ ಸಮನ್ವಯ ಗುಣ. ಆ ಕಾಲದಲ್ಲಿ ನಿರಂತರವಾಗಿ ಸಂಭವಿಸುತ್ತಿದ್ದ ಶೈವ–ವೈಷ್ಣವ ಧರ್ಮಗಳ ಸಂಘರ್ಷಕ್ಕೆ ಪರಿಹಾರ ಸೂತ್ರವನ್ನು ಸೂಚಿಸಲು ಈ ಕಾವ್ಯ ಪ್ರಯತ್ನ ಪಟ್ಟಂತಿದೆ. ಶೈವ ಬಾಣಾಸುರನ ಮಗಳನ್ನು ಕೃಷ್ಣನ ಮೊಮ್ಮಗ ಅನಿರುದ್ಧ ಪ್ರೀತಿಸುವ ನೆಲೆಯಲ್ಲಿ ಅದನ್ನು ಮುಖಾಮುಖಿಗೊಳಿಸಲಾಗಿದೆ. ಇಲ್ಲಿ ಕೃಷ್ಣನೇ ನಾಯಕ ; ಬಾಣಾಸುರ ಖಳನಾಯಕ. ಅವರಿಬ್ಬರ ನಡುವಣ ಯುದ್ಧದ ತಾರಕ ಸಂದರ್ಭದಲ್ಲಿ ಶಿವನನ್ನು ಸಾಕ್ಷಿಯಾಗಿಟ್ಟುಕೊಂಡು ತಳೆಯುವ 'ಹರಿ–ಹರ ಸಮನ್ವಯ ನಿಲುವು' ಆದರ್ಶಪ್ರಾಯವಾಗಿದೆ. ಒಟ್ಟಾರೆ ಶೈವ–ವೈಷ್ಣವರ ನಂಟನ್ನು ಉಂಟುಮಾಡುವ ಮೂಲಕ ಧರ್ಮಸಂಘರ್ಷವನ್ನು

ಕೊನೆಗಾಣಿಸುವ ಗುರಿ ಕಾವ್ಯಕ್ಕಿರುವುದು ಅದರ ಹೆಚ್ಚುಗಾರಿಕೆಯಾಗಿದೆ. (ಐತಿಹಾಸಿಕ ಧ್ವನಿಯುಳ್ಳ ಈ ಕಾವ್ಯವನ್ನು ಕನಕದಾಸರು ಕದರಮಂಡಲಗಿಯ ಕಾಂತೇಶನ ಸನ್ನಿಧಿಯಲ್ಲಿ ಕುಳಿತು ಬರೆದರೆಂಬ ಪ್ರತೀತಿ ಇದ್ದು, ಈಗಲೂ ಅಲ್ಲಿ ಇದರ ಇತ್ತೀಚಿನ ಹಸ್ತಪ್ರತಿಯನ್ನು ಸಂರಕ್ಷಿಸಿಡಲಾಗಿದೆ).

ಹರಿಭಕ್ತಿಸಾರ

ಇದೊಂದು ಭಕ್ತಿ ಪಾರಾಯಣ ಕಾವ್ಯ. ಇದರಲ್ಲಿ 'ವಿಷ್ಣುವಿನ ಸುಗುಣ ಸಚ್ಚಾರಿತ್ರ ಕಥನ'ವನ್ನು 110 ಭಾಮಿನಿ ಷಟ್ಪದಿಗಳಲ್ಲಿ ಎದೆತುಂಬಿ ಬಣ್ಣಿಸಲಾಗಿದೆ. ಉತ್ಕಟವಾದ ಹರಿಧ್ಯಾನ ಈ ಕಾವ್ಯದ ಜೀವಾಳವಾದರೆ ; ನೀತಿಬೋಧೆ, ಶೀಲವಿಕಾಸ, ವೈರಾಗ್ಯದರ್ಶನ ಇದರ ಮೂಲ ಉದ್ದೇಶವಾಗಿದೆ. ಅದಕ್ಕಾಗಿ ಭಾಗವತ, ವಿಷ್ಣುಪುರಾಣ, ರಾಮಾಯಣ, ಮಹಾಭಾರತಗಳಿಂದ ದೃಷ್ಟಾಂತಗಳನ್ನು ಹೆಕ್ಕಿ ಹರಿಭಕ್ತಿ 'ಸಾರ'ವೆಂಬ ಸುಂದರ ಮಣಿ 'ಹಾರ'ವನ್ನು ಹೆಣೆಯಲಾಗಿದೆ. ವಿದ್ವಾಂಸರು ಸಾಹಿತ್ಯ ಪ್ರಕಾರದ ಹಿನ್ನೆಲೆಯಲ್ಲಿ, ಇದನ್ನು 'ಸ್ತುತಿಕಾವ್ಯ'ವೆಂತಲೂ 'ಶತಕ ಸಾಹಿತ್ಯ'ವೆಂತಲೂ ಕರೆದಿದ್ದಾರೆ.

ನಿರ್ಮಲ ಹೃದಯದ ಭಕ್ತನೊಬ್ಬನು ತನ್ನ ಇಷ್ಟದೈವದ ಎದುರು ಅಂತರಂಗವನ್ನು ಪರಿಪರಿಯಾಗಿ ತೆರೆದಿಡುವ ತಂತ್ರದಲ್ಲಿ ಇದು ರಚನೆಗೊಂಡಿದೆ. ಬದುಕಿನ ಭವಬಂಧನಗಳಿಂದ ತೊಳಲಿ-ಬಳಲಿ ಅಲ್ಲಿಂದ ಬಹುದೂರ ಸಾಗಬೇಕೆಂಬ ಮಹತ್ವಾಕಾಂಕ್ಷೆಯನ್ನು ಕಾವ್ಯದ ಉದ್ದಕ್ಕೂ ಕಾಣಬಹುದು. ಅಂತಹ ಪ್ರಾಮಾಣಿಕ ಭಕ್ತನ ಸಾತ್ವಿಕ ಮೊರೆಯನ್ನು ಕನಕದಾಸರು ತಾವು ಜೀವ ಹಾಗೂ ದೇವರುಗಳ ನಡುವಣ ರಾಯಭಾರಿಯಂತೆ ನಿಂತು ಮನಮುಟ್ಟುವಂತೆ ಕಟ್ಟಿದ್ದಾರೆ. ಇದರಲ್ಲಿನ 'ರಕ್ಷಿಸು ನಮ್ಮನು ಅನವರತ' ಎಂಬ ಅನುಪಲ್ಲವಿ ಭೂಮಿಯ ಮೇಲಿನ ಸಹಮಾನವರ ಸಾರ್ವಕಾಲಿಕ ಆರ್ತ ಪ್ರಾರ್ಥನೆಯಾಗಿರುವುದು ಮನನೀಯ.

ಕಾವ್ಯದ ಆರಂಭದಲ್ಲಿ ಕನಕದಾಸರೇ ಹೇಳುವಂತೆ, 'ಅಚ್ಯುತನ ನಾಮವ ನೂತನದಿ ವಸುಧಾತಳದಲಿ ಬಣ್ಣಿಸಲು' ಇದನ್ನು ರಚಿಸಲಾಗಿದೆ. ಆದರೆ ಅದು ಅಲ್ಲಿಗೆ ಮಾತ್ರ ನಿಲ್ಲದೆ. ದೇವರ ಹೆಸರಿನಲ್ಲಿ ತಾರತಮ್ಯ ಮಾಡುವ ಕುಲಶ್ರೇಷ್ಠರನ್ನು ತಣ್ಣಗೆ ವಿಚಾರಿಸಿಕೊಳ್ಳುತ್ತದೆ. 'ಇಲ್ಲಿಹನು ಅಲ್ಲಿಲ್ಲವೆಂಬ ಸೊಲ್ಲು ಸಲ್ಲದು' ಎಂದು ತರ್ಕಿಸುವ ಕಾವ್ಯ, 'ದೇಹದೊಳು ನೀ ನೆಲೆಸಿರಲು ಹೊಲೆಯುಂಟೆ?' ಎಂಬ ಪ್ರಶ್ನೆಯನ್ನು ನಯವಾಗಿ ಕೇಳುತ್ತದೆ. ಹೀಗೆ ಇದು ಕೇವಲ ಹರಿಯ ಲೀಲಾಮಹಿಮೆಗಳನ್ನು ಹಾಡಿ ಹೊಗಳುವುದರಲ್ಲೇ ಮೈಮರೆಯುವುದಿಲ್ಲ. ದೇವರ ಹೆಸರಿನಲ್ಲಿ ಜಾತಿ. ಹೊಲೆ, ಕರ್ಮಸಿದ್ಧಾಂತ – ಇತ್ಯಾದಿಗಳನ್ನು ಗಟ್ಟಿಗೊಳಿಸುವ ವಂಚಕರನ್ನು ತರಾಟೆಗೆ ತೆಗೆದುಕೊಳ್ಳುತ್ತದೆ. ಕನ್ನಡ ಭಕ್ತಿ ಸಾಹಿತ್ಯದಲ್ಲಿಯೇ ಕನಕದಾಸರ 'ಹರಿಭಕ್ತಿಸಾರ' ಮೊದಲ ಸಾಲಿನಲ್ಲಿ ನಿಲ್ಲುತ್ತದೆ ಎಂದು ಕವಿಚರಿತೆಕಾರರು ಗುರುತಿಸಿದ್ದಾರೆ.

ನಳಚರಿತ್ರೆ

ಕನಕದಾಸರ ಶ್ರೇಷ್ಠ ಕಾವ್ಯಕೃತಿಗಳಲ್ಲಿ ನಳಚರಿತ್ರೆಗೆ ಮುಖ್ಯ ಸ್ಥಾನವಿದೆ. ಮಹಾಭಾರತದ ವನಪರ್ವದಲ್ಲಿ ಬರುವ 'ನಳೋಪಾಖ್ಯಾನ' ಇದರ ಮೂಲ ಕಥಾವಸ್ತು. ಅದೇ ಕಥಾವಸ್ತುವನ್ನು ಆಧಾರವಾಗಿಟ್ಟುಕೊಂಡು ಕನ್ನಡದಲ್ಲಿ ಹಲವು ಕವಿಗಳು ಕಾವ್ಯ ರಚಿಸಿದ್ದಾರೆ. ಆದರೆ ಕನಕದಾಸರ ನಳಚರಿತ್ರೆಯ ಕತೆಗಿರುವ ಜನಪ್ರಿಯತೆ ಉಳಿದವುಗಳಿಗೆ ಇಲ್ಲ ಎನ್ನುವುದು ಅದರ ಮಹತ್ವವನ್ನು ಎತ್ತಿಹಿಡಿಯುತ್ತದೆ. ನಳದಮಯಂತಿಯರ ಚರಿತ್ರೆಯನ್ನು ಕನ್ನಡಿಗರ ಮನೆ ಮಾತಾಗಿಸಿದ ಹಿರಿಮೆ ಕನಕದಾಸರದು. ಮಹಾಭಾರತದಲ್ಲಿ ಪ್ರಾಸಂಗಿಕವಾಗಿ ಬರುವ ನಳ ಮಹಾರಾಜ ಹಾಗೂ ದಮಯಂತಿ ದೇವಿಯರ ದಾಂಪತ್ಯಕತೆಯನ್ನು ಅವರು ತಿಳಿಗನ್ನಡದಲ್ಲಿ ಹೃದಯಂಗಮವಾಗಿ ಹೇಳಿದ್ದಾರೆ. ಹಾಗಾಗಿ ಅದು ಚಿಕ್ಕದಾದರೂ (ಕೇವಲ 481 ಪದ್ಯಗಳು / 9 ಸಂಧಿಗಳು) ಕಾವ್ಯಸತ್ವದಲ್ಲಿ ಹಿರಿದಾದ ಕೃತಿಯಾಗಿದೆ.

ಇದೊಂದು ಸುಂದರವಾದ ಲೌಕಿಕ ಕಥನಕಾವ್ಯ. ಇಲ್ಲಿ ನಳ–ದಮಯಂತಿಯರ ನಿರ್ಮಲ ದಾಂಪತ್ಯದ ಮೂಲಕ ಬಿತ್ತರಿಸುತ್ತಿರುವ ಜೀವನಮೌಲ್ಯ ದೊಡ್ಡದು. "ವಿದರ್ಭ ದೇಶದ ಭೀಮ ನೃಪಾಲನ ಪುತ್ರಿ ದಮಯಂತಿ. ಆಕೆಯನ್ನು ನಿಷಧ ದೇಶದ ರಾಜ ನಳನು ಹಂಸವೊಂದರ ಸಹಾಯದಿಂದ ಪ್ರೇಮಿಸಿ, ಸ್ವಯಂವರದ ಮೂಲಕ ಮದುವೆ ಆಗುತ್ತಾನೆ. ಆಕೆ ತನ್ನ ಈ ಸ್ವಯಂವರ ಕಾಲದಲ್ಲಿ ದೇವತೆಗಳನ್ನು ತಿರಸ್ಕರಿಸಿದಳೆಂಬ ಕಾರಣಕ್ಕೆ ಕುಪಿತನಾದ ಕಲಿಪುರುಷ, ನಳನನ್ನು ಜೂಜಿನಲ್ಲಿ ದಾಯಾದಿಯಿಂದಲೇ ಸೋಲಿಸುತ್ತಾನೆ. ಅಷ್ಟಕ್ಕೇ ಬಿಡದೆ ವನವಾಸದಲ್ಲಿ ಅವರಿಬ್ಬರಿಗೂ ನಾನಾತರದ ಕಷ್ಟಗಳನ್ನು ಕೊಟ್ಟು ನರಳಿಸುತ್ತಾನೆ. ಕೊನೆಗೆ ನಳನು ರಾಜ್ಯವನ್ನೂ ದಮಯಂತಿಯನ್ನೂ ಪುನಃ ಪಡೆದು ಸುಖ ಸಂಸಾರಕ್ಕೆ ತೊಡಗುವಲ್ಲಿಗೆ ಕಾವ್ಯ ಸುಖಾಂತ್ಯವಾಗುತ್ತದೆ." ಇವಿಷ್ಟು ಈ ಪುಟ್ಟ ಕಾವ್ಯದ ಚೌಕಟ್ಟು. ಇದನ್ನು ಭಾಮಿನಿ ಷಟ್ಪದಿಯ ಸರಳ ಲಯದಲ್ಲಿ ಕಟ್ಟಲಾಗಿದೆ.

ತ್ಯಾಗಮೂಲವಾದ ಪ್ರೇಮ ; ಅದನ್ನು ನಾಶಪಡಿಸಲು ಮುಂದಾಗುವ ಪ್ರಭುತ್ವಶಕ್ತಿಯ ಸ್ವಾರ್ಥ ಮತ್ತು ದೇವಲೋಕದವರ ಕುಟಿಲ ತಂತ್ರಗಳು ; ಅದನ್ನು ಮೀರಿ ಕಾಯುವ ಪರಿಶುದ್ಧ ಭಕ್ತಿ – ಈ ಮೂರರ ಸುತ್ತ ಕಾವ್ಯ ಬಿಟ್ಟೂಬಿಡದೆ ಸುತ್ತುತ್ತದೆ. ಪ್ರಭುತ್ವಶಾಹಿಯ ಅರಾಜಕತೆಯ ಕಥಾವಸ್ತು ಇಟ್ಟುಕೊಂಡು 'ಪ್ರಭುವಿನ ವಿಮಲ ಚರಿತ'ದ ಕನಸು ಕಾಣುತ್ತದೆ. ಆ ಮೂಲಕ, ಆಳುವ ಶಕ್ತಿಕೇಂದ್ರಕ್ಕೆ ಅತ್ಯವಶ್ಯಕವಾಗಿ ಇರಬೇಕಾದ ಪ್ರಜಾಸಮೂಹದ ಸಂಕಷ್ಟಗಳನ್ನು ಆಲಿಸುವ ಸೂಕ್ಷ್ಮತೆಯ ಬಗ್ಗೆ ನಮ್ಮ ಗಮನ ಸೆಳೆಯುತ್ತದೆ. ಆ ಸಂಬಂಧದಲ್ಲಿ ಇಲ್ಲಿನ ಹಂಸದ ಬಾಯಿಂದ ನುಡಿಸುವ "ತರವೆ ಬಿಡು ಪರಹಿಂಸೆ ಸಲ್ಲದು", "ಪರರ ದುಃಖವ ಪರಿಹರಿಸುವುದೆ ಪರಮಪುಣ್ಯ", "ಕೈ ಸದರದವರನು ಕೊಲುವುದು ಉಚಿತವೆ?" – ಎಂಬ ಮಾತುಗಳು ಆತಂಕಿತರ ಒಡಲಧ್ವನಿಯಂತೆ ಕೇಳುವುದು ಗಮನಾರ್ಹ. ಮತ್ತೊಂದು ಮುಖ್ಯ ಸಂಗತಿ ಎಂದರೆ: ಇದು ನಳನ ಹೆಸರನ್ನು ಹೊತ್ತಿರುವ ಕೃತಿಯಾದರೂ ಅದರ ಪುಟಪುಟದಲ್ಲಿಯೂ ದಮಯಂತಿಯ ವಿಷಯವೇ ಪ್ರಧಾನವಾಗಿದೆ.

ರಾಮಧಾನ್ಯ ಚರಿತ್ರೆ

ಇದು ಕನಕದಾಸರ ಸಮಾಜಮುಖೀ ಆಲೋಚನೆಯಿಂದ ಒಡಮೂಡಿದ ವಿಶಿಷ್ಟ ಕೃತಿ. ಕೇವಲ 158 ಭಾಮಿನಿಷಟ್ಪದಿಗಳಲ್ಲಿ ರಚಿಸಲಾಗಿರುವ ಈ ಕಾವ್ಯಕೃತಿ ಪ್ರಾಸಂಗಿಕವಾಗಿ ರಾಮಕಥೆಯಿಂದ ಆರಂಭಿಸಿ, ಈ ನೆಲದ ನಿಜವಾದ ಕತೆಯನ್ನು ಹೇಳುತ್ತದೆ. ನವಧಾನ್ಯಗಳಲ್ಲಿ ಪ್ರಧಾನವಾದ ರಾಗಿ ಮತ್ತು ಬತ್ತಗಳ ನಡುವೆ ಯಾರು ಶ್ರೇಷ್ಠರೆಂಬುದನ್ನು ಕುರಿತು ಏರ್ಪಡುವ ಸಂಘರ್ಷ ಕಾವ್ಯದ ಕೇಂದ್ರವಸ್ತು. ಅದನ್ನು ಪರೀಕ್ಷಿಸಿ ತೀರ್ಪು ಕೊಡುವವನು ನ್ಯಾಯಮೂರ್ತಿ ಶ್ರೀರಾಮ. ಇಂತಹ ಮಹತ್ವಪೂರ್ಣ ಸಂದರ್ಭಕ್ಕೆ ಸಾಕ್ಷಿಯಾಗಿರುವವರು ದೇವರು, ಮಾನವರು ಹಾಗೂ ಸಕಲ ವಿದ್ಯಾ ಪಾರಂಗತರಾದ ಜ್ಞಾನಿಗಳು. ಇಷ್ಟು ಸ್ಥೂಲರೂಪದ ವಸ್ತುವನ್ನು 'ಜನಸ್ತೋಮವೆಲ್ಲ ಆದರಿಸುವಂದದಿ ಭೂಮಿಗಚ್ಚರಿಯಾಗಿ' ಹೇಳಿ 'ಮಹಾಕಥೆ'ಯಾಗಿಸಬೇಕೆಂಬುದು ಕನಕದಾಸರ ಕನಸು.

ಇಂತಹ ಆರೋಗ್ಯಕರ ಕನಸಿನ ಕತೆ ಹೀಗಿದೆ

"ರಾವಣ ಸಂಹಾರದ ತರುವಾಯ ಸೀತಾರಾಮರು ಅಯೋಧ್ಯೆಗೆ ಹಿಂತಿರುಗುವ ಮಾರ್ಗಮಧ್ಯೆ ಗೌತಮಮುನಿಯ ಆಶ್ರಮದಲ್ಲಿ ಆತಿಥ್ಯ ಸ್ವೀಕರಿಸುತ್ತಾರೆ. ಅಲ್ಲಿ ಏರ್ಪಟ್ಟ ಭೋಜನಕೂಟದಲ್ಲಿ ನವಧಾನ್ಯಗಳ ಸಾರಸತ್ವ ಕುರಿತು ಚರ್ಚೆ ನಡೆದು, ಕಡೆಯಲ್ಲಿ ಗೌತಮರು ಸರ್ವಧಾನ್ಯಗಳಲ್ಲಿ ರಾಗಿಯೇ 'ಶ್ರೇಷ್ಠ'ವೆಂಬಂತೆ ಮೆಚ್ಚಿ ಮಾತನಾಡುತ್ತಾರೆ. ಆಗ ಕೋಪಗೊಂಡ ಬತ್ತ ತಾನು 'ಶ್ರೇಷ್ಠ'ನಾದವನೆಂದು ಹೊಗಳಿಕೊಂಡು ರಾಗಿಗೆ – ನೀನು ಬ್ರಾಹ್ಮಣರ ಯಾವುದೇ ಶುಭ ಸಮಾರಂಭಗಳಿಗೆ ಬೇಡವಾದ ಹೀನ, ಅಶುಭರಿಗೆ ಮಾತ್ರ ಸಲ್ಲುವ 'ಶೂದ್ರಾನ್ನ' ಎಂದು ಹೀಯಾಳಿಸುತ್ತದೆ.

ಅದಕ್ಕೆ ಪ್ರತಿಯಾಗಿ ರಾಗಿ – ತಾನು ದೀನ ದಲಿತರಿಗೆ ಅಚ್ಚುಮೆಚ್ಚೆಂದು, ಕ್ಷಾಮ ಕಾಲದಲ್ಲಿ ಬಡವ ಹಾಗೂ ಬಲ್ಲಿದರೆಂದು ಭೇದವೆಣಿಸದೆ ಎಲ್ಲರಿಗೂ ನಾನೇ ಗತಿಯೆಂದು ಹೇಳಿಕೊಳ್ಳುತ್ತದೆ. ಹೀಗೆ ಎರಡು ಧಾನ್ಯಗಳೂ ಒಬ್ಬರಿಗೊಬ್ಬರು ವಾಗ್ವಾದಕ್ಕಿಳಿಯುತ್ತಾರೆ. ಆಗ ಇವರಿಬ್ಬರ ಅರ್ಹತೆಯನ್ನು ತಿಳಿಯಲು ಶ್ರೀರಾಮ ಇಬ್ಬರನ್ನೂ ಆರು ತಿಂಗಳ ಕಾಲ ಸೆರೆಮನೆಯಲ್ಲಿ ಇರಿಸುತ್ತಾನೆ. ಆಮೇಲೆ ತರಿಸಿ ನೋಡಿದಾಗ ಬತ್ತ ರೂಪುಗೆಟ್ಟು ಕಾಂತಿಹೀನವಾಗಿದ್ದರೆ, ರಾಗಿ ಮಾತ್ರ ದೃಢವಾಗಿರುತ್ತದೆ. ಆಗ ಶ್ರೀರಾಮ ರಾಗಿಯ ಹಿರಿಮೆಯನ್ನು ಎತ್ತಿ ಹಿಡಿದು ಅದಕ್ಕೆ ತನ್ನ ಹೆಸರನ್ನೇ(ರಾಘವ) ಅಭಿದಾನ ಮಾಡಿ 'ರಾಮಧಾನ್ಯ' ಎಂದು ಹೊಗಳುತ್ತಾನೆ. ಈ ತೀರ್ಮಾನದಿಂದ ಸೋತು ಅವಮಾನಗೊಂಡ ಬತ್ತ ತಲೆತಗ್ಗಿಸಿ ನಿಂತಾಗ ಗೆದ್ದ ರಾಗಿ ಅದರ ಬಳಿ ಹೋಗಿ, ನೀನು ಕುಗ್ಗಬೇಕಾಗಿಲ್ಲ. ನಮ್ಮಲ್ಲಿ ಯಾರೂ ಮೇಲಲ್ಲ – ಯಾರೂ ಕೀಳಲ್ಲ. ನಾವೆಲ್ಲರೂ ಸಮಾನರು ಎಂದು ಸಮಾಧಾನ ಮಾಡುತ್ತದೆ. ಅದೇ ರೀತಿಯಲ್ಲಿ ರಾಮ ಕೂಡ 'ಧರೆಯೊಳಗೆ ಇಬ್ಬರು ಅತಿ ಹಿತದಲಿ ನೀವಿಹುದು' ಎಂದು ಸಮಾಧಾನಪಡಿಸುತ್ತಾನೆ". ಹೀಗೆ ಕತೆ ಕೊನೆಗೊಳ್ಳುತ್ತದೆ. ಕನಕದಾಸರ ವಿಶಿಷ್ಟತೆ ಎಂದರೆ 'ಇಲ್ಲಿ ಯಾರೂ ಮೇಲಲ್ಲ ಯಾರೂ ಕೀಳಲ್ಲ ಎಲ್ಲರೂ

ಸಮಾನರು' ಎಂದು ಸಮಸಮಾಜದ ಕನಸನ್ನು ಬಹು ಪರಿಣಾಮಕಾರಿಯಾಗಿ ಧ್ವನಿಸುವುದು ಗಮನಾರ್ಹ.

ಇದೊಂದು ರೂಪಕ ಕಾವ್ಯ: ನಮ್ಮ ಸಾಮಾನ್ಯ ಜನರ ಜೀವನಾಧಾರವಾದ 'ರಾಗಿ'ಯನ್ನು ರೂಪಕವಾಗಿಸಿದ ಬಹುಶಃ ಏಕೈಕ ಕಾವ್ಯವಿದು. ಕನಕದಾಸರು ತಮ್ಮ ಸಮಾಜಪರ ಚಿಂತನೆಯನ್ನು ರಾಗಿಯ ಮೂಲಕ ಹೀಗೆ ವ್ಯಕ್ತಪಡಿಸಲು ಯತ್ನಿಸಿದ್ದಾರೆ. (ಪೌರಾಣಿಕ ವಸ್ತುವಿನ ಜೊತೆ ಜನಪದ ವಿಷಯವನ್ನು ಸೇರಿಸಿ ವಿಡಂಬನಾತ್ಮಕವಾಗಿ ರಚಿಸಿದ ಕನ್ನಡ ಸಾಹಿತ್ಯ ಅಷ್ಟೇ ಅಲ್ಲ, ಭಾರತೀಯ ಸಾಹಿತ್ಯದಲ್ಲಿ ಪ್ರಥಮ ಕಾವ್ಯ – ವಿಶೇಷ ಎನ್ನಬಹುದು). ಇದು ಅವರ ಸಾಧಕ ಬದುಕಿನುದ್ದಕ್ಕೂ ಜಾತಿವರ್ಗ ಕಾರಣವಾಗಿ ಅನುಭವಿಸಿದ ಅವಮಾನ, ದುಃಖ–ದುಮ್ಮಾನಕ್ಕೆ ಕೊಟ್ಟ ದಿಟ್ಟ ಉತ್ತರದಂತಿದೆ. ಅದನ್ನು ಇಲ್ಲಿನ ದಿನನಿತ್ಯದ ಬದುಕಿನೊಡನೆ ಹಾಸು ಹೊಕ್ಕಾಗಿರುವ ಬತ್ತ–ರಾಗಿಯಂಥ ಜನಪದ ವಸ್ತುಗಳ ಮುಖಾಂತರ ಮುಟ್ಟಿಸುತ್ತಿರುವುದು ವಿಶಿಷ್ಟ ಕಲ್ಪನೆಯಾಗಿದೆ. ಈ ಕಲ್ಪನೆ ಅವರ ಸ್ವಂತದ್ದಾಗಿರಬಹುದು ; ಅಥವಾ ಜನಪದ ಕಥೆಗಳಿಂದ ಪಡೆದುಕೊಂಡಿದ್ದೇ ಆಗಿರಬಹುದು. ಅದೇನೆ ಇರಲಿ, ಅದನ್ನು ಹೀಗೆ ಒಂದು ವಿಶಿಷ್ಟ ಸಾಮಾಜಿಕ ಉದ್ದೇಶಕ್ಕೆ ಬಳಸಿರುವ ರೀತಿ ಅಪೂರ್ವವಾಗಿದೆ. ಹಾಗಾಗಿ ಕನಕದಾಸರ 'ರಾಮಧಾನ್ಯ ಚರಿತ್ರೆ'ಗೆ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಬಹುಮಹತ್ವದ ಸ್ಥಾನವಿದೆ.

ನೃಸಿಂಹಸ್ತವ

ಈ ಕೃತಿ ನಮಗಿನ್ನೂ ಸಿಕ್ಕಿಲ್ಲ. ಕವಿಚರಿತೆಕಾರರ ಪ್ರಕಾರ, ಇದೊಂದು ಭಕ್ತಿಕಾವ್ಯ ; ಸುಮಾರು 97 ಸಾಂಗತ್ಯ ಛಂದಸ್ಸಿನ ಪದ್ಯಗಳ ಸ್ತುತಿಮಾಲೆ. ಊಹಿಸಿ ಹೇಳಬಹುದಾದರೆ, ಇದರಲ್ಲಿ ಕನಕದಾಸರು ತಮ್ಮ ಬಾಲ್ಯಕಾಲದಿಂದ ಆರಾಧಿಸುತ್ತಿದ್ದ ಕಾಗಿನೆಲೆಯ ನರಸಿಂಹಸ್ವಾಮಿಯನ್ನು ನೆನೆದು ಹಾಡಿದ ಸ್ತುತಿ ಪದ್ಯಗಳಿವೆ. ಅದು ಲಭ್ಯವಾದ ಅನಂತರವಷ್ಟೇ ಅದು 'ಹರಿಭಕ್ತಿಸಾರ'ಕ್ಕಿಂತ ಹೇಗೆ ಭಿನ್ನವಾಗಿದೆ, ಅದರ ಕಾವ್ಯಸತ್ವಗಳೇನು ಎಂಬುದನ್ನು ತಿಳಿದು ಬೆಲೆಕಟ್ಟಬಹುದು.

******

ಕನಕ ದರ್ಶನ

ಕನಕದಾಸರು ಸಾಕಷ್ಟು ದೂರ ವಿವಿಧ ಕ್ಷೇತ್ರಗಳನ್ನು ಸಂದರ್ಶಿಸಿ ತತ್ವಪ್ರಚಾರ ಮಾಡಿದ ಬರಿಗಾಲ ಸಂತ. ಈ ಹೊತ್ತಿಗೂ ಅದಕ್ಕೆ ಸಾಕ್ಷಿಯಾಗಿ ತಮಿಳುನಾಡಿನ ತಂಜಾವೂರಿನಲ್ಲಿ 'ಕನಕನ ಕೊಳ'ವನ್ನು ನಾವು ಕಾಣಬಹುದು. ರಾಜಸ್ತಾನದಲ್ಲಿ ಸ್ವತಃ ರಾಣಾಪ್ರತಾಪನೇ ಕಟ್ಟಿಸಿದ 'ಕನಕ ಬೃಂದಾವನ'ವಿದೆ. ಆಂಧ್ರದ ಕವಿಯೊಬ್ಬ ಅವರನ್ನು ಕುರಿತು ಹೇಳಿರುವ, 'ಕನಕ ಮೀರು ಬಂಗಾರ ತುನಕ ; ಕನ್ನಡ ಕವುಲೆಲ್ಲ ನೂವೆನಕ' ಎಂಬ ಪ್ರಶಂಸೆಯ ಮಾತುಗಳು ಜನಪ್ರಿಯವಾಗಿವೆ. ತಿರುಪತಿಯಲ್ಲಿ ಕನಕದಾಸರನ್ನು ನೆನಪಿಸುವ ಹಲವು ಪವಾಡ ಕತೆಗಳು ಈಗಲೂ ಬೆಳೆಯುತ್ತಿವೆ. ಉಡುಪಿಯ 'ಕನಕನ ಕಿಂಡಿ'ಯಂತೂ ವಿಶ್ವಪ್ರಸಿದ್ಧ ಸಂಗತಿಯೆನಿಸಿದೆ. ಇವೆಲ್ಲವುಗಳನ್ನು ನೋಡಿದರೆ ಕನಕದಾಸರು ನಮ್ಮ ಅಲ್ಲಮನಂತೆ, ಕನ್ನಡದ ಭಕ್ತಿಚಳವಳಿಯು ಕಟ್ಟಿಕೊಟ್ಟ ವಿವೇಕವನ್ನು ದೇಶದುದ್ದಕ್ಕೂ ಪಸರಿಸಿದ ಸಂತಶ್ರೇಷ್ಠರು ಎಂಬುದು ಅರಿವಾಗುತ್ತದೆ. ಈ ನೆಲೆಯಲ್ಲಿ ಕೂಡ ಅವರು ಉಳಿದ ಹರಿದಾಸರಿಗಿಂತ ಅತ್ಯಂತ ಎತ್ತರದ ಸ್ಥಾನದಲ್ಲಿದ್ದಾರೆ.

ಹಾಗೆ ಎಲ್ಲಿಂದ ಎಲ್ಲಿಗೇ ಸುತ್ತಾಡಿ ಬಂದರೂ ಕಡೆಗೆ ಅವರು ನೆಲೆನಿಂತದ್ದು ಕಲ್ಯಾಣ ಕರ್ನಾಟಕದ ಕಾಗಿನೆಲೆಯಲ್ಲಿ. ಕಾಗಿನೆಲೆ ಕನಕದಾಸರ ಕರ್ಮಭೂಮಿ. ಅದು ಪ್ರಾಚೀನ ಕಾಲದಿಂದ ಹಲವು ರಾಜಸಂಸ್ಕೃತಿಯ ಆಡಳಿತಕ್ಕೆ ಒಳಪಟ್ಟ ಪ್ರಮುಖ ಕ್ಷೇತ್ರ. ಕದಂಬರ ಕಾಲದಿಂದಲೂ ಇದಕ್ಕೆ ವಿಶೇಷವಾದ ಹೆಸರಿದೆ. ವಿಜಯನಗರ ಅರಸರು ಇದಕ್ಕೆ ಕಾಯಕಲ್ಪ ನೀಡಿ ಒಂದು ವಿಶೇಷ ಸ್ಥಾನಮಾನ ನೀಡಿದರು. ಅದರ ಕುರುಹಾಗಿ ಕಾಗಿನೆಲೆಯಲ್ಲಿ ಇಂದಿಗೂ ನಾವು ಕೋಟೆ ಕೊತ್ತಳಗಳು, ಹಳೆಯ ಗುಡಿಗಳು, ವೀರಗಲ್ಲು-ಶಾಸನಗಳನ್ನು ಯಥೇಚ್ಛವಾಗಿ ಕಾಣಬಹುದು. ಅದಕ್ಕಿಂತ ಮುಖ್ಯವಾಗಿ ಜೈನ, ವೈಷ್ಣವ, ವೀರಶೈವ, ಇಸ್ಲಾಂ ಮುಂತಾದ ಸರ್ವಧರ್ಮ ಸಂಸ್ಕೃತಿಗಳ ಸಂಗಮಕ್ಷೇತ್ರವಾಗಿರುವುದು ಇದರ ವಿಶೇಷ. ಇವೆಲ್ಲಕ್ಕೂ ಕಳಶವಿಟ್ಟಂತೆ ಸಂತಕವಿ ಕನಕದಾಸರ ಬದುಕು ಮತ್ತು ಚಿಂತನೆಯ ಮಿಂಚುಗಳು ಬೆಳಗಿದ್ದು, ವಿಶ್ವಕ್ಕೆ ಪಾರಮಾರ್ಥಿಕ ಭಕ್ತಿಸಂದೇಶವನ್ನು ಸಾರಿದ್ದು - ಕಾಗಿನೆಲೆಯಿಂದ ಎಂಬುದು ಚಾರಿತ್ರಿಕ ಮಹತ್ವದ ಸಂಗತಿ ಆಗಿದೆ.

ಕಾಗಿನೆಲೆ ಕ್ಷೇತ್ರವು ಭಾರತದ ಭೂಪಟದಲ್ಲಿ ಹೆಸರಾಗಿರುವುದೇ ಕನಕದಾಸರಿಂದ. ಅದು ಅವರ ಸಾಧಕ ಬದುಕಿನ ಉದ್ದಕ್ಕೂ ಮಹತ್ವಪೂರ್ಣ ಪಾತ್ರವನ್ನು ವಹಿಸಿದೆ. ಅಲ್ಲಿನ ಪರಿಸರ, ದೈವನೆಲೆಗಳು, ಸಂಸ್ಕೃತಿಯ ಕುರುಹುಗಳು, ಧರ್ಮಸಮನ್ವಯತೆ - ಕನಕದಾಸರಿಗೆ ತಮ್ಮ ಜ್ಞಾನ ಮತ್ತು ವಿವೇಕವನ್ನು ಪ್ರಜ್ವಲವಾಗಿ ಬೆಳಗಿಕೊಳ್ಳಲು ಬೆನ್ನಾಸರೆಯಾಗಿ ಒದಗಿಬಂದಿದೆ. ಹಾಗಾಗಿ ಕಾಗಿನೆಲೆಯು ಅವರ ಬಾಲ್ಯಕಾಲದಲ್ಲಿ ಸ್ಫೂರ್ತಿ ತುಂಬಿದ ಚೈತನ್ಯಕ್ಷೇತ್ರವೂ, ದಾಸ ಬದುಕಿಗೆ ದೀಕ್ಷೆ ಕೊಟ್ಟ ಸಾಕ್ಷಾತ್ಕಾರ ಕ್ಷೇತ್ರವೂ, ಮಾನವಮತವನ್ನು ಸಾರಲು ಪ್ರೇರಣೆ ಒದಗಿಸಿದ ತಪೋವನವೂ, ಬಹುರೂಪಿ ಕೃತಿಗಳ ಸೃಷ್ಟಿಗೆ ಕಾರಣವಾದ

ಕಾವ್ಯಗಂಗೋತ್ರಿಯೂ ಆಗಿದೆ. ಆದ್ದರಿಂದಲೇ ತಮ್ಮ ತತ್ವಚಿಂತನೆಯ ತಾಯಿಬೇರಾದ ಕಾಗಿನೆಲೆಯ ಆದಿಕೇಶವನನ್ನು ಹೆಜ್ಜೆಹೆಜ್ಜೆಗೆ ಅಭಿಮಾನದಿಂದ ಕೊಂಡಾಡಿದ್ದಾರೆ. ಹಾಗೆ ನೋಡಿದರೆ ಕಾಗಿನೆಲೆಯ ಆದಿಕೇಶವನು ಸಹ ಅವರ ಆತ್ಮಾಭಿಮಾನದ ಸಂಕೇತವೇ ಆಗಿದ್ದಾನೆ.

******

ಒಟ್ಟಿನಲ್ಲಿ ಸಂತಮಹಾಕವಿ ಕನಕದಾಸರ ಜೀವನವೇ ಒಂದು ಮಹಾಕೃತಿಯಂತಿದೆ. ಜೀವವೊಂದು ನಿರಂತರ ವಿಕಾಸ ಪಥದಲ್ಲಿ ಬೆಳೆಬೆಳೆದು ಪರಿಪಕ್ವಗೊಳ್ಳುವ ರೀತಿಯಲ್ಲಿದೆ ಅವರ ಬಾಳ ಪಯಣ. ಕನ್ನಡ ದಾಸಕೂಟದ ಸುವರ್ಣಯುಗವನ್ನು ನಿರ್ಮಾಣ ಮಾಡಿದವರಲ್ಲಿ ಕನಕರದು ದೊಡ್ಡ ಪಾಲು. ಅಲ್ಲಿನ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ತತ್ವಗಳ ಮೇಲಾಟದಲ್ಲಿ ಅವರು ಯಾವುದೊಂದನ್ನು ತಿರಸ್ಕರಿಸದೆ ಅವುಗಳಲ್ಲಿಯ ಭಕ್ತಿತತ್ವಕ್ಕೆ ಶರಣಾದರು. ಜೊತೆಗೆ ಶೈವ-ವೈಷ್ಣವವನ್ನು ಸಮಾನವಾಗಿ ಗೌರವಿಸಬೇಕೆಂಬ ಸೌಹಾರ್ದತತ್ವವನ್ನು ಕಲಿಸಿದರು. ಮಾನವಧರ್ಮದ ಶ್ರೇಷ್ಠತೆಯನ್ನು ಎತ್ತಿಹಿಡಿದು ಸಾರಿದರು.

ಕನಕದಾಸರು ತಾವು ಕೆಳವರ್ಗದಲ್ಲಿ ಹುಟ್ಟಿದರು. ಆ ಕಾರಣಕ್ಕಾಗಿ ಮೇಲ್ವರ್ಗದವರಿಂದ ಪಡಬಾರದ ತೊಂದರೆ ಪಟ್ಟರು. ಆದರೆ ಎಂದೂ ಅವರು ಆ ಕಾರಣಕ್ಕಾಗಿ ಎದೆಗುಂದಲಿಲ್ಲ. ಇನ್ನೊಬ್ಬರ ಬಗ್ಗೆ ಹೀನಾಯವಾಗಿ ನಡೆದುಕೊಳ್ಳಲಿಲ್ಲ. ಹುಟ್ಟಿನಿಂದಾದ ಕಲ್ಪಿತ ಕುಲವನ್ನು ಮುಂದುಮಾಡಿ, ವ್ಯಕ್ತಿತ್ವಗಳನ್ನು ಮೇಲುಕೀಳಾಗಿಸುತ್ತಿದ್ದ ಸಮಾಜದ ಬಗ್ಗೆ ಅವರಿಗೆ ವಿಷಾದವಿತ್ತು. ಅದರೆ ಆಕ್ರೋಶವಿರಲಿಲ್ಲ. ಸತತ ಅಧ್ಯಯನದ ಪರಿಶ್ರಮದಿಂದ ತಾವು ಮೇಲೇರಿ ಬಂದರು. ಅಷ್ಟು ಮಾತ್ರವಲ್ಲದೆ, ತಮ್ಮ ಸುತ್ತಲಿನ ಸಮುದಾಯವನ್ನು ಮೇಲೆತ್ತುವ ಹೊಣೆ ಹೊತ್ತು ಕಾರ್ಯಪ್ರವೃತ್ತರಾದರು. ಆದ ಕಾರಣದಿಂದಲೇ ಅವರು ಕನ್ನಡ ನೆಲದ ಮನೆ ಮಾತಾದರು.

ಹೀಗೆ ಐದುನೂರಕ್ಕೂ ಹೆಚ್ಚು ವರ್ಷಗಳ ಕಾಲದಿಂದ ಕನ್ನಡ ಜನಮನದಲ್ಲಿ ಪ್ರಸಿದ್ಧರಾಗಿ ಉಳಿದಿರುವ ಕನಕದಾಸರು, ಯಾವ ಒಂದು ಮತಕ್ಕೂ ಅಂಟಿಕೊಳ್ಳದೆ ಅನಂತತತ್ವವನ್ನು ಒಪ್ಪಿಕೊಂಡು ಅದನ್ನು ಅಪ್ಪಿಕೊಂಡು ವಿಶ್ವಮಾನವತ್ವದ ನೆಲೆಗೆ ತುಡಿದ ವಿಭೂತಿ ಪುರುಷರು. ಅವರ ನೆನಪಿನಲ್ಲಿ ಕರ್ನಾಟಕ ಸರ್ಕಾರವು ಪ್ರತಿವರ್ಷ ನವೆಂಬರ್ ಅಥವಾ ಡಿಸೆಂಬರ್ ತಿಂಗಳಲ್ಲಿ 'ಕನಕದಾಸ ಜಯಂತಿ'ಯ ಮೂಲಕ ಗೌರವ ಸಲ್ಲಿಸುತ್ತಿದೆ. ಕನಕದಾಸರ ಜೀವನ - ಸಂದೇಶ ಸಾರುವುದರ ಜೊತೆಗೆ ಅವರ ಹುಟ್ಟೂರು, ಐಕ್ಯರಾದ ಊರು ಹಾಗೂ ಸುತ್ತಮುತ್ತಲಿನ ಪರಿಸರವನ್ನು ಅಭಿವೃದ್ಧಿಪಡಿಸಿ ಸ್ಮಾರಕವಾಗಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ಅವರ ಸಮಾಧಿ ಸ್ಥಳವಿರುವ ಕಾಗಿನೆಲೆಯಲ್ಲಿ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಸ್ಥಾಪಿಸಿದೆ. ಕನಕದಾಸರ ಜೀವನದರ್ಶನ, ಸಂದೇಶ ಮತ್ತು ಸಾಹಿತ್ಯ ಕುರಿತಂತೆ ಹೊಸ ಹೊಸ ಸಂಶೋಧನೆಗಳು, ಅಧ್ಯಯನಗಳು, ಪ್ರಕಟಣೆಗಳು ಹಾಗೂ ಪ್ರಸಾರದಂತಹ

ಕಾರ್ಯಕ್ರಮಗಳನ್ನು ಉತ್ತೇಜಿಸುವ ಸಲುವಾಗಿ ಬೆಂಗಳೂರಿನಲ್ಲಿ ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿ ಸ್ವಾಯತ್ತ ಸಂಸ್ಥೆಯ ಅಸ್ತಿತ್ವ ನೀಡಿ ಅನುದಾನ ನೀಡುತ್ತಿದೆ. ಈ ಅಧ್ಯಯನ ಕೇಂದ್ರವು ಹೊಸ ಹೊಸ ದೃಷ್ಟಿಕೋನದಿಂದ ಅಧ್ಯಯನಶೀಲ ವಿದ್ವಾಂಸ, ಸಂಶೋಧನಾರ್ಥಿಗಳಿಗೆ ಫೆಲೋಶಿಪ್ ನೀಡಿಕೆ, ಅಧ್ಯಯನಗಳಿಗೆ ಅನುದಾನ, ರಾಜ್ಯ-ರಾಷ್ಟಮಟ್ಟದಲ್ಲಿ ವಿಚಾರ ಸಂಕಿರಣ ಹಾಗೂ ಸಂವಾದಗೋಷ್ಠಿಗಳ ಏರ್ಪಾಟು, ವಿವಿಧ ಮಾಧ್ಯಮಗಳಲ್ಲಿ ಕನಕದಾಸರ ತತ್ವಾದರ್ಶಗಳ ಪ್ರದರ್ಶನ-ಪ್ರಸಾರಕಾರ್ಯ, ವಿವಿಧ ಭಾಷೆಗಳಿಗೆ ಕನಕದಾಸರ ಸಮಗ್ರ ಸಾಹಿತ್ಯ ಅನುವಾದ, ತೌಲನಿಕ ಅಧ್ಯಯನದ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳು, ಕರ್ನಾಟಕ ತತ್ವಪದಕಾರರ ಸಮಗ್ರ ಸಾಹಿತ್ಯ ಪ್ರಕಟಣೆ, ಯುವಜನ - ವಿದ್ಯಾರ್ಥಿ ಸಮುದಾಯಕ್ಕಾಗಿ ಕನಕ ಸಂಸ್ಕೃತಿ ಕಮ್ಮಟ-ರಸಗ್ರಹಣ ಶಿಬಿರಗಳ ಸಂಘಟನೆ, ಹಿರಿಯ ಹಾಗೂ ಯುವ ವಿದ್ವಾಂಸರಿಗೆ ಪುರಸ್ಕಾರ ಮುಂತಾದ ಹಲವಾರು ರಚನಾತ್ಮಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೊಳಿಸುತ್ತಿದೆ. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನಕದಾಸ ಸಂಶೋಧನಾ ಕೇಂದ್ರವನ್ನು ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಕನಕ ಅಧ್ಯಯನ ಪೀಠವನ್ನು ಹಾಗೂ ಉಡುಪಿಯ ಎಂ.ಜಿ.ಎಂ ಕಾಲೇಜಿನಲ್ಲಿ ಕನಕ ಅಧ್ಯಯನ ಸಂಶೋಧನಾ ಪೀಠವನ್ನು ತೆರೆದಿದ್ದು ಅವುಗಳು ಕನಕದಾಸರ ಕುರಿತಂತೆ ವಿವಿಧ ದಿಕ್ಕಿನಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿವೆ. ಇದಲ್ಲದೆ ಕರ್ನಾಟಕ ಸರ್ಕಾರವು ಸ್ವತಃ ಕನಕದಾಸರ ಮತ್ತು ಹರಿದಾಸ ಸಾಹಿತ್ಯದ ಬಗ್ಗೆ ಅನನ್ಯ ಸೇವೆ ಸಲ್ಲಿಸಿದ ವಿದ್ವಾಂಸರಿಗೆ ಪ್ರತಿ ವರ್ಷ ನೀಡಲು ಕನಕದಾಸರ ಹೆಸರಿನಲ್ಲಿ 'ಕನಕಶ್ರೀ' ಪ್ರಶಸ್ತಿ ಸ್ಥಾಪಿಸಿದೆ.

ಇಂದಿಗೂ ಕಾಗಿನೆಲೆಯ ಕೆರೆದಂಡೆಯ ಮೇಲೆ ಅವರ ಗದ್ದುಗೆ (ಸಮಾಧಿ) ಇದೆ. ಅಲ್ಲಿ 'ಕನಕಮಂದಿರ' ನಿರ್ಮಾಣವಾಗಿದೆ. ಇದರ ಮಗ್ಗುಲಲ್ಲಿ ಕನಕದಾಸರ ಕಾಲದ ಸುವಿಶಾಲ ಅರಳಿ ಮರವಿದ್ದು, ಮಹಾಸಂತರ ವಿಕಾಸಜೀವನಕ್ಕೆ ಸಾಕ್ಷಿಯಾಗಿ ನಿಂತಿದೆ. ಅದರ ನೆರಳಲ್ಲಿ ಪ್ರತಿವರ್ಷ ಅವರ ಜನ್ಮದಿನವನ್ನು ಕನಕಗುರು ಪೀಠದ ನೇತೃತ್ವದಲ್ಲಿ ಕನಕ-ಕೇಶವರ ತೇರನ್ನು ಎಳೆಯುವುದರ ಮೂಲಕ ಸಾಂಕೇತಿಕವಾಗಿ ಆಚರಿಸುತ್ತಾ ಬರಲಾಗುತ್ತಿದೆ. ಇವೆಲ್ಲದರ ಜೊತೆಗೆ, ಕರ್ನಾಟಕದ ಉದ್ದಕ್ಕೂ ಕನಕದಾಸರ ಹೆಸರನ್ನು ಒಳಗೊಂಡ ನೂರಾರು ಊರುಕೇರಿಗಳು ನಿರಂತರ ಅವರ ಹೆಜ್ಜೆಗುರುತುಗಳನ್ನು ಸ್ಮರಣೆಯಲ್ಲಿ ಇಟ್ಟಿವೆ. ಇದು ಯಾವುದೇ ನಾಡು ಮತ್ತು ನಾಡವರು ಅಲ್ಲಿನ ಸಾಂಸ್ಕೃತಿಕ ನಾಯಕರಿಗೆ ಸಲ್ಲಿಸುವ ಅರ್ಥಪೂರ್ಣ ಗೌರವವಾಗಿದೆ.

■

ಅನುಬಂಧ

ಕನಕದಾಸರ ಬದುಕಿನ ಹೆಜ್ಜೆಗಳು

ಹೆಸರು: ಹುಟ್ಟುಹೆಸರು ತಿಮ್ಮಪ್ಪ. ಕಾಲಕ್ರಮೇಣ ತಿಮ್ಮರಸ, ತಿಮ್ಮಪ್ಪನಾಯಕ, ಕನಕಪ್ಪ, ಕನಕಪ್ಪನಾಯಕ, ಕನಕದಾಸ – ಎಂಬುದಾಗಿ ಪ್ರಖ್ಯಾತಿ.

ಜನ್ಮಸ್ಥಳ: ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ 'ಬಾಡ'.

ತಂದೆ: ಬೀರಪ್ಪ. ಜನ 'ಬೀರಪ್ಪನಾಯಕ' ಎಂದೂ ಕರೆಯುತ್ತಿದ್ದರು. ಅವನು ಊರಿನ 'ದಣ್ಣಾಯಕ'. ಅಂದರೆ 'ನಾಡಗೌಡ'. ಬಾಡ ಹಾಗೂ ಬಂಕಾಪುರ ಭಾಗದ ಒಟ್ಟು 78 ಗ್ರಾಮಗಳ ನಾಡಗೌಡಿಕೆ ಆತನದ್ದಾಗಿತ್ತು.

ತಾಯಿ: ಕಾಗಿನೆಲೆಯ 'ಬಚ್ಚಮ್ಮ'.

ಮತ: ಬೀರಪ್ಪನಾಯಕ ಮತ್ತು ಅವನ ಪೂರ್ವಿಕರು ಹಾಲುಮತದ ಅಂಡೆ ಕುರುಬರು. ಮೂಲತಃ ಶೈವರಾಗಿದ್ದ ಅವರು ಶಿವದೇವರನ್ನು 'ಬೀರಲಿಂಗ', 'ಬೀರದೇವ', 'ಬೀರಪ್ಪ'ನೆಂದು ಕರೆಯುತ್ತಿದ್ದರು.

ಹುಟ್ಟಿದ ವರ್ಷ: ಕ್ರಿ.ಶ. ಸುಮಾರು 1488.

ವಿದ್ಯಾಗುರು: ಬಂಕಾಪುರದ ಶ್ರೀನಿವಾಸಾಚಾರ್ಯರು.

ಅವರ ಬಳಿ ತಿಮ್ಮಪ್ಪ ಕೌಟಿಲ್ಯನ ಅರ್ಥಶಾಸ್ತ್ರ, ಧರ್ಮಸೂಕ್ತ, ತರ್ಕ–ಮೀಮಾಂಸೆ–ಛಂದಸ್ಸು–ವ್ಯಾಕರಣ ಶಾಸ್ತ್ರ ಮುಂತಾದ ಜ್ಞಾನಪಾಠಗಳನ್ನೂ ರಾಮಾಯಣ, ಮಹಾಭಾರತ, ಭಾಗವತ ಮೊದಲಾದ ಕಾವ್ಯಪುರಾಣಗಳನ್ನೂ ಕಲಿತನು. ಜೊತೆಗೆ ಕ್ಷತ್ರಿಯೋಚಿತ ವಿದ್ಯೆಗಳಾದ ಕತ್ತಿವರಸೆ, ಕುದುರೆಸವಾರಿ, ಬಿಲ್ವಿದ್ಯೆ – ಮೊದಲಾದ ಸಮರ ಕಲೆಗಳನ್ನು ಕರಗತ ಮಾಡಿಕೊಂಡ.

ತಂದೆಯ ಸಾವು: ತಿಮ್ಮಪ್ಪನ ಕಲಿಕೆಯೆಲ್ಲ ಮುಗಿಯುವ ಹೊತ್ತಿಗೆ ಬೀರಪ್ಪನಾಯಕ ಮರಣ ಹೊಂದಿದ. ಅಪ್ಪನ ಹೊಣೆಗಾರಿಕೆ ತಿಮ್ಮಪ್ಪನ ಕೊರಳಿಗೆ ಬಿತ್ತು.

ತಿಮ್ಮಪ್ಪ–ಕನಕಪ್ಪನಾಯಕ: ಒಮ್ಮೆ ನೆಲವನ್ನು ಅಗೆಸುತ್ತಿದ್ದಾಗ ಬಂಗಾರ ತುಂಬಿದ ಏಳು ಕೊಪ್ಪರಿಗೆಗಳು ದೊರೆತವು.

ಅಲ್ಲಿ ಸಿಕ್ಕ ಅಷ್ಟೂ ಹೊನ್ನನ್ನು ವೃಥಾ ದುಂದುವೆಚ್ಚ ಮಾಡದೆ ಸಾರ್ವಜನಿಕ ಸೇವೆಗಾಗಿ ವಿನಿಯೋಗ ಮಾಡಿದ. ಜನರು 'ಕನಕಪ್ಪ', 'ಕನಕನಾಯಕ' ಎಂದು ಕರೆಯತೊಡಗಿದರು.

ಮದುವೆ-ಸಂಸಾರ: ಈ ಮಧ್ಯೆ, ತುಂಬು ತಾರುಣ್ಯದ ಕಲಿಯಾಗಿದ್ದ ಕನಕನಾಯಕನಿಗೆ 'ಲಕ್ಷ್ಮೀದೇವಿ' ಎಂಬ ಕನ್ಯೆಯೊಂದಿಗೆ ಮದುವೆಯಾಯಿತು. ಈ ದಂಪತಿಗಳಿಗೆ ಗಂಡುಮಗು ಜನನವಾಯಿತು.

ಮೋಹನ ತರಂಗಿಣಿ ರಚನೆ: 'ಕೃಷ್ಣಚರಿತ್ರೆ' ಎಂದು ಕರೆದುಕೊಂಡ ಮೋಹನ ತರಂಗಿಣಿ ಕನಕದಾಸರ ಮೊದಲ ಕಾವ್ಯ. ವಿಜಯನಗರದ ವೈಭವ ಮತ್ತು ಅದರಾಚೆಯ ಜನಜೀವನದ ವೈವಿಧ್ಯಮಯ ರಾಗರಸಭಾವಗಳ ಸಹಿತ ಬರೆದ ಮಹಾಕಾವ್ಯ.

ಸಾವು-ನೋವು: ಸಂಸಾರ ಸುಖಸಾಗರದಲ್ಲಿ ಸಾಗಿರುತ್ತ, ಒಂದು ದಿನ ತನ್ನ ಮಮತಾಮಯಿ ತಾಯಿ ತೀರಿಕೊಂಡಳು. ಇದಾಗಿ ವರ್ಷ ಕಳೆಯುವುದರ ಒಳಗಾಗಿ ಕರುಳಕುಡಿಯಾಗಿದ್ದ ಮಗು ತೀರಿಕೊಂಡಿತು. ಈ ಸಾಲುಸಾಲು ಸಾವುಗಳು ಆತನ ಮಡದಿಯ ಮೇಲೆ ಘೋರ ಪರಿಣಾಮವನ್ನು ಉಂಟುಮಾಡಿತು. ಅವಳೂ ತೀರಿಕೊಂಡಳು.

ಕೊನೆಯ ಯುದ್ಧ: ಒಂದು ಘನಘೋರ ಯುದ್ಧದಲ್ಲಿ ಕನಕನಾಯಕನಿಗೆ ದೊಡ್ಡ ಆಘಾತವಾಯಿತು. ರಕ್ತದ ಕಾಲುವೆ-ಹೆಣದ ರಾಶಿಗಳ ಮಧ್ಯೆ ಪ್ರಜ್ಞೆಯಿಲ್ಲದೆ ಏಕಾಂಗಿಯಾದ.

ಯುದ್ಧದ ನಿರರ್ಥಕತೆ: ಯುದ್ಧದಲ್ಲಿ ಸೋತು ನಿತ್ರಾಣನಾದ ಕನಕನಾಯಕನಿಗೆ "ಸಾಕು ಈ ಲೌಕಿಕ, ದಾಸನಾಗು. ಪರಮ ಆನಂದದ ಮೋಕ್ಷಸಾಧನೆಯತ್ತ ಸಾಗು ಬಾ" ಎಂದು ಯಾರೋ ಕರೆದಂತಾಯಿತು.

ವಿರಕ್ತಿಮಾರ್ಗ: ಲೌಕಿಕವನ್ನು ಕುರಿತ ಜುಗುಪ್ಸೆ ಕನಕನಾಯಕನ ಬದುಕಿನ ದಿಕ್ಕುದೆಸೆಯನ್ನೇ ಬದಲಿಸಿತು. ಧರ್ಮ, ತತ್ವ, ಪುರಾಣಶಾಸ್ತ್ರಗಳ ಸಂಸ್ಕಾರ ಪಡೆದಿದ್ದ ಮನಸ್ಸು ವಿರಕ್ತಿಯ ಕಡೆಗೆ ವಾಲಿತು. ಆಗಾಗ ಕನಸಿನಲ್ಲಿ ಕಾಣಿಸಿಕೊಳ್ಳುತ್ತಿದ್ದ ದೈವದ ಅಶರೀರವಾಣಿಗೊಂದು ಸಾಕಾರ ರೂಪ ದೊರೆತಂತಾಯಿತು.

ತಾತಾಚಾರ್ಯರ ಭೇಟಿ: ತಾತಾಚಾರ್ಯರ ಭೇಟಿಯ ಮೂಲಕ 'ಹರಿಯೇ ಸರ್ವೋತ್ತಮ' ಎಂಬ ತಿರುಳನ್ನು ಒಳಗೊಂಡಿದ್ದ ಶ್ರೀವೈಷ್ಣವ ತತ್ವಕ್ಕೆ ಕನಕ ಆಕರ್ಷಿತನಾದ.

ಹರಿದಾಸನಾದ: ಹರಿದಾಸನಾಗಬೇಕೆಂದು ನಿಶ್ಚಯಿಸಿದ ಬಳಿಕ ಅಧಿಕಾರ, ಅಂತಸ್ತು, ಅರಮನೆ, ಬಂಧು-ಬಳಗ ಎಲ್ಲವನ್ನು ತೊರೆದು ಲೌಕಿಕ ಲೋಕದ ವೇಷಭೂಷಣಗಳನ್ನು ಕಳಚಿ ಭಾಗವತನಾಗಿ ಬಯಲಿಗೆ ನಡೆದರು.

ಕಾಗಿನೆಲೆಯಲ್ಲಿ ಲಕ್ಷ್ಮೀನರಸಿಂಹ ದೈವಸನ್ನಿಧಿಯ ಒಂದು ಪಾರ್ಶ್ವದಲ್ಲಿ, ಬಾಡದಿಂದ ತಂದಿದ್ದ ತಮ್ಮ ನೆಚ್ಚಿನ ಶ್ರೀರಂಗನಾಥಸ್ವಾಮಿ ಮೂರ್ತಿಯನ್ನು 'ಆದಿಕೇಶವ'ನ ಹೆಸರಿನಲ್ಲಿ ಪ್ರತಿಷ್ಠಾಪಿಸಿದರು.

ವ್ಯಾಸರಾಯರ ಗರಡಿಯಲ್ಲಿ: ಆ ಮೇಲೆ ವ್ಯಾಸರಾಯರನ್ನು ಮದನಪಲ್ಲಿಯ ಸಮೀಪದ ಕಂದಕೂರಿನಲ್ಲಿ 'ವ್ಯಾಸ ಸಮುದ್ರ' ಎಂಬ ಹೆಸರಿನ ಕೆರೆಯೊಂದನ್ನು ಕಟ್ಟಿಸುವ ಸಂದರ್ಭದಲ್ಲಿ ಭೇಟಿಯಾದರು. ಕೆಲವು ಕಾಲ ಅವರ ಮಠದಲ್ಲಿ ಕಳೆದರು. ಮಾರ್ಗದರ್ಶನ ಪಡೆದರು. ಅಲ್ಲಿ ಅವರ ಜ್ಞಾನ ಪ್ರಕಟಣೆಗೆ ಹಲವು ಪ್ರಸಂಗಗಳನ್ನು ಎದುರಿಸಿ ಗೆದ್ದರು.

ಕ್ಷೇತ್ರದರ್ಶನ: ಹಂಪೆಯಿಂದ ಆರಂಭಿಸಿ ತಿರುಪತಿ, ಕನಕಗಿರಿ, ಶ್ರೀರಂಗ, ಬೇಲೂರು, ಮೇಲುಕೋಟೆ, ಶ್ರೀರಂಗಪಟ್ಟಣ, ಶಿವನಸಮುದ್ರ, ಮಹಾದೇವಪುರ, ಸೋಸಲೆ, ಪುರಿ, ಗಯಾ, ಮಥುರಾ, ದ್ವಾರಕೆ, ರಾಜಸ್ತಾನ, ಉಡುಪಿ ಮುಂತಾದ ಕ್ಷೇತ್ರಗಳನ್ನು ಸಂದರ್ಶಿಸಿದರು.

ಹರಿಭಕ್ತಿಸಾರ: ತೀರ್ಥಯಾತ್ರೆಯ ಆರಂಭದಲ್ಲೇ ಹಂಪೆಯಲ್ಲಿ 'ನೃಸಿಂಹಸ್ತವ' ಎಂಬ ಸ್ತುತಿಕಾವ್ಯವನ್ನೂ, ಬೇಲೂರಿನಲ್ಲಿ 'ಹರಿಭಕ್ತಿಸಾರ' ಎಂಬ ಪ್ರಾರ್ಥನ ಕಾವ್ಯವನ್ನೂ ರಚಿಸಿದರು.

ಕರ್ಮಭೂಮಿಯಲ್ಲಿ: ಹೀಗೆ ನಾಡಿನ ಉದ್ದಗಲಕ್ಕೂ ಕ್ಷೇತ್ರಗಳಿಂದ ಕ್ಷೇತ್ರಗಳಿಗೆ ಸಂಚಾರ ಮಾಡಿ ಕೊನೆಗೆ ಕಾಗಿನೆಲೆಯನ್ನು ಕರ್ಮಭೂಮಿಯಾಗಿಸಿಕೊಂಡರು.

ವ್ಯಾಸರಾಯರು-ಪುರಂದರರ ಮರಣ: ಗುರು ವ್ಯಾಸರಾಯರು ಹಾಗೂ ಸಹಚಿಂತಕರಾಗಿದ್ದ ಪುರಂದರದಾಸರು ತೀರಿಕೊಂಡರು. ಬಹುಕಾಲ ಮೆರೆದ ವಿಜಯನಗರ ಸಾಮ್ರಾಜ್ಯವು ತನ್ನ ಆಂತರಿಕ ತಿಕ್ಕಾಟಗಳಿಂದ ಪತನವಾಯಿತು.

ನಳಚರಿತ್ರೆ-ರಾಮಧಾನ್ಯ ಚರಿತ್ರೆ: ಈ ನಡುವೆ 'ನಳಚರಿತ್ರೆ' ಕಾವ್ಯವನ್ನು ರಚಿಸಿದರು. ಜೊತೆಗೆ ಹಗಲಿರುಳು ದುಡಿದು ಅನ್ನ ಕೊಡುವ ಶ್ರಮಜೀವಿಗಳ ಪರವಾಗಿ 'ರಾಮಧಾನ್ಯ ಚರಿತ್ರೆ' ಎಂಬ ವಿಶಿಷ್ಟ ರೂಪಕ ಕಾವ್ಯ ರಚಿಸಿದರು.

ಕೀರ್ತನೆಗಳು: ಸಾಮಾಜಿಕ ಮತ್ತು ಪಾರಮಾರ್ಥಿಕ ಚಿಂತನೆಗಳನ್ನೊಳಗೊಂಡ ಕೀರ್ತನೆಗಳು ಬರೆದರು. ಉಗಾಭೋಗ ಮುಂಡಿಗೆಗಳು ಸೇರಿ ಸುಮಾರು 300ಕ್ಕೂ ಹೆಚ್ಚು ರಚನೆಗಳು ಕನಕದಾಸರ ಹೆಸರಿನಲ್ಲಿ ದೊರಕಿವೆ.

ಆದಿಕೇಶವನ ಸೇವೆ: ಅಲ್ಲಿಂದ ಮುಂದೆ ನಿತ್ಯವೂ ಕಾಗಿನೆಲೆ-ಕುಮ್ಮೂರು ಗಡಿಯಲ್ಲಿ ತಾವೇ ಹಿಂದೆ ಕಟ್ಟಿಸಿದ ಕೆರೆಯಲ್ಲಿ ಮಿಂದು ಬಂದು ಕೇಶವನ ಸೇವೆಯಲ್ಲಿ ನಿರತರಾಗತೊಡಗಿದರು. ಈಗಲೂ ಆ ಕೆರೆಯ ಕಾಲುವೆಯನ್ನು 'ಕನಕನಾಯಕರ ಕಾಲುವೆ' ಎಂತಲೂ, ಹೂದೋಟವನ್ನು 'ದಾಸನಕೊಪ್ಪ' ಎಂತಲೂ, ಅವರು ಕುಳಿತುಕೊಳ್ಳುತ್ತಿದ್ದ ಕಟ್ಟೆಯನ್ನು 'ಕನಕನ ಕಟ್ಟೆ' ಎಂತಲೂ ಕರೆಯುವುದನ್ನು ಕಾಣಬಹುದು.

ಅಂತಿಮ ದಿನಗಳು: ಸುಮಾರು 9 ದಶಕಗಳ ಕಾಲ ತುಂಬು ಜೀವನ ನಡೆಸಿದರು. ಆಗ ತಾವು ಕಟ್ಟಿಸಿದ ಕಾಗಿನೆಲೆಯ ಆದಿಕೇಶವನ ಗುಡಿಯಲ್ಲೇ ಕಾಲ ಕಳೆಯತೊಡಗಿದರು. 'ತೊರೆದು ಜೀವಿಸಬಹುದೇ ಹರಿ ನಿನ್ನ ಚರಣಗಳ' ಎಂಬುದು ಅವರ ಜೀವಿತದ ಏಕೈಕ ಮಂತ್ರವಾಯಿತು.

ಮರಣ: ಕ್ರಿ.ಶ. 1488ರ ಸುಮಾರಿನಲ್ಲಿ ಹುಟ್ಟಿದ ಕನಕದಾಸರು 90 ಸಾರ್ಥಕ ವಸಂತಗಳನ್ನು ಪೂರೈಸಿ, ಕ್ರಿ.ಶ. ಸುಮಾರು 1578ರಲ್ಲಿ ಕಾಗಿನೆಲೆಯಲ್ಲಿ ಕೊನೆಯುಸಿರೆಳೆದರು.

■

ಆಧಾರ ಗ್ರಂಥಗಳು

ಕನಕವಿರಚಿತ ಕಾವ್ಯಕೃತಿಗಳು

1. ಮೋಹನ ತರಂಗಿಣಿ – ಸಂ. ಆರ್.ಸಿ. ಹಿರೇಮಠ
2. ರಾಮಧಾನ್ಯ ಚರಿತ್ರೆ – ಸಂ. ದೇ. ಜವರೇಗೌಡ
3. ನಳಚರಿತ್ರೆ – ಸಂ. ಹಾತೂರು ಶಂಕರನಾರಾಯಣ ಭಟ್ಟ
4. ಹರಿಭಕ್ತಿಸಾರ – ಸಂ. ಎಸ್. ರಂಗನಾಥ ಶರ್ಮ
5. ಕೀರ್ತನೆಗಳು – ಸಂ. ಸುಧಾಕರ

ಜೀವನಚರಿತ್ರೆಗಳು

1. ಕವಿ ಕನಕದಾಸರು – ಕಟ್ಟಿ ಶೇಷಾಚಾರ್ಯ
2. ಕರ್ನಾಟಕದ ಮಹಾಸಂತ ಕನಕದಾಸ – ಚನ್ನಪ್ಪ ಎರೇಸೀಮೆ
ಎಂ. ಬಸವರಾಜು
3. ಕನಕದರ್ಶನ – ದೇಜಗೌ
4. ಕನಕ ರೂಪಕ – ಸುಧಾಕರ
5. ವಿಶ್ವಮಾನವ ಕನಕದಾಸರು – ನಿಂಗಣ್ಣ ಸಣ್ಣಕ್ಕಿ
6. ಕನಕದಾಸ – ನಾಗರತ್ನ ಟಿ.ಎನ್
7. ಶ್ರೀ ಕನಕದಾಸರು – ಬಸವರಾಜ ನಾಯ್ಕರ್
8. ವಿಶ್ವಮಾನವ ಸಂತಕವಿ ಶ್ರೀ ಕನಕದಾಸರು – ಒಡೆಯರ್ ಡಿ. ಹೆಗ್ಗಡೆ

ಸೃಜನಶೀಲ ಕೃತಿಗಳು

1. ಕಾಲಜ್ಞಾನಿ ಕನಕ – ಕಿ.ರಂ. ನಾಗರಾಜ
2. ವಧೂಟಿ – ಕಾ.ತ. ಚಿಕ್ಕಣ್ಣ

ವಿಮರ್ಶಾ ಬರಹಗಳು

1. ಕನಕಸಾಹಿತ್ಯ ದರ್ಶನ ಸಂಪುಟಗಳು – ಪ್ರ. ಕನ್ನಡ ಸಂಸ್ಕೃತಿ ನಿರ್ದೇಶನಾಲಯ
2. ಕನಕ ಕಿರಣ – ಸಂ. ಕಾ.ತ. ಚಿಕ್ಕಣ್ಣ
3. ಹಳ್ಳಿಅಧ್ಯಯನ : ಕಾಗಿನೆಲೆ – ಸಂ. ಹೊರೆಯಾಲ ದೊರೆಸ್ವಾಮಿ
4. ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ – ಸಂ. ಬಿ. ಶಿವರಾಮ ಶೆಟ್ಟಿ
5. ಅನುಭಾವ ಸಾಹಿತ್ಯದ ವಿಭಿನ್ನ ನೆಲೆಗಳು – ಜಿ.ಎಸ್. ಉಪಾಧ್ಯ

6. ಮುತ್ತು ಬಂದಿದೆ ಕೇರಿಗೆ – ಸಂ. ಎನ್. ಸುರೇಶ ನಾಗಲಮಡಿಕೆ
7. ಕನಕದಾಸ ಸಾಂಸ್ಕೃತಿಕ ಅನುಸಂಧಾನ – ಸಂ. ಹೆಚ್.ಎಂ. ಸ್ವಾಮಿಗೌಡ

ಪ್ರಮುಖ ಲೇಖನಗಳು

1. ಕನಕದಾಸರ ಕಾಲ, ದೇಶ, ಮತ ಮತ್ತು ಜೀವನ – ಜಿ. ವರದರಾಜರಾವ್
2. ಕನಕದಾಸರ ಜೀವನ ವಿಚಾರ – ಜ್ಯೋತಿ ಹೊಸೂರ
3. ಕನಕದಾಸರು : ಕೆಲವು ಚಿಂತನೆಗಳು – ಜಿ.ಎಸ್. ಶಿವರುದ್ರಪ್ಪ
4. ಕನಕನ ಕಿಂಡಿ ಮತ್ತು ವಿಠಲ ಪರಂಪರೆ – ನೀಲಗಂಗಯ್ಯ ಪೂಜಾರ
5. ಕನಕದಾಸರ ಕೆಲವು ಐತಿಹ್ಯಗಳ ಅರ್ಥವ್ಯಾಪ್ತಿ – ಅರವಿಂದ ಮಾಲಗತ್ತಿ
6. ಪರಂಪರೆಯನ್ನು ಅರ್ಥಮಾಡಿಕೊಳ್ಳುವ ದಾರಿ ಯಾವುದು? – ರಹಮತ್ ತರೀಕೆರೆ
7. ಪರಂಪರೆಯಲ್ಲಿ ಭಕ್ತಿ ಪಂಥಗಳ ಪಾತ್ರವೇನು? – ಬಂಜಗೆರೆ ಜಯಪ್ರಕಾಶ
8. ಕನಕದಾಸರು ಮತ್ತು ಅನುಭಾವಪಂಥ – ಕೆ.ವಿ. ಸುಬ್ಬಣ್ಣ
9. 'ರಾಮಧಾನ್ಯ ಚರಿತ್ರೆ'ಯ ರೂಪಕ ವಿವೇಕ ಮರುಚಿಂತನೆ – ಎಸ್.ಜಿ. ಸಿದ್ಧರಾಮಯ್ಯ
10. ಕನಕದಾಸರ ಕೀರ್ತನೆಗಳು ಮತ್ತು ಆಧುನಿಕ ಮೌಲ್ಯಗಳು – ಕೆ.ವಿ. ನಾರಾಯಣ
11. ಕನಕನೆಂಬ ವರ್ತಮಾನದ ತುರ್ತು – ಬಸವರಾಜ ಕಲ್ಗುಡಿ
12. ಕನಕದಾಸರ ತಾತ್ವಿಕತೆಯ ಅನುಸಂಧಾನ ಹೊಸ ಓದು – ನಟರಾಜ ಬೂದಾಳು
13. ಕನಕದಾಸರ ಕೀರ್ತನೆಗಳು : ಸಾಮಾಜಿಕ ಮುಖ – ಎಚ್.ಜೆ. ಲಕ್ಕಪ್ಪಗೌಡ
14. ಕನಕ : ವರ್ತಮಾನದ ನಿರೂಪಣೆಗಳು – ಜಯಪ್ರಕಾಶ್‌ಶೆಟ್ಟಿ ಹೆಚ್

■



ಭಕ್ತ ದಾಸ ಸಂತ ಯೋಗಿ ಭೋಗಿ ಕಲಿ
ಕವಿ ದಾರ್ಶನಿಕ ದ್ರಷ್ಟಾರ ನುಡಿಗಾರುಡಿಗ
ಸಂಸ್ಕೃತಿಚಿಂತಕ ಸಮಾಜವಿಜ್ಞಾನಿ
ಜನಪದಜಿಜ್ಞಾಸು ಬಂಡಾಯ
ಮನೋಧರ್ಮಿ ಮಾನವೀಯ
ಅಂತಃಕರಣಿ–ಬಹುಮುಖೀ ವ್ಯಕ್ತಿತ್ವಗಳ
ಕನಕದಾಸರು ತಮ್ಮ ಕಾವ್ಯಾಭಿವ್ಯಕ್ತಿ ಮತ್ತು
ಜೀವನದರ್ಶನಗಳ ಮೂಲಕ ಭಿನ್ನ ಭಿನ್ನ
ಬಗೆಯ ಓದು–ವ್ಯಾಖ್ಯಾನಗಳಿಗೆ ಆಕರ
ಸಾಮಗ್ರಿ ಒದಗಿಸಬಲ್ಲ ಶಕ್ತಿ–ಸಮರ್ಥರು.
ಪರಂಪರೆ ಮತ್ತು ಆಧುನಿಕ
ದಿನಮಾನಗಳೆರಡನ್ನೂ
ಏಕೀಭವಿಸಿಕೊಂಡು ಬಹುತ್ವದೆಡೆಗಿನ
ಜಂಗಮ ನಡೆ ಇದು.

ಹೀಗೆ ಕನಕದಾಸರ ಸಾಹಿತ್ಯಕ ಸಾಂಸ್ಕೃತಿಕ
ಸಾಮಾಜಿಕವಾದ ಚಲನಶೀಲ
ಅಭಿವ್ಯಕ್ತಿಗಳಿಗೆ ಅವಕಾಶ ಕಲ್ಪಿಸುವ
ಆಶಯ ರಾಷ್ಟ್ರೀಯ ಸಂತಕವಿ ಕನಕದಾಸ
ಅಧ್ಯಯನ ಮತ್ತು ಸಂಶೋಧನಾ
ಕೇಂದ್ರದ ಉದ್ದೇಶ.

ಈ ದಿಸೆಯಲ್ಲೊಂದು ಹೆಜ್ಜೆ–ಸಂತಕವಿ
ಕನಕದಾಸರು ಕೃತಿ. ಓದುಗರಿಗೆ ಸರಳವಾಗಿ
ವಿವರಿಸಿಕೊಳ್ಳಲೆಂದು ಸಿದ್ಧವಾದ
ಜನಪ್ರಿಯ ಆವೃತ್ತಿ.

– ಪ್ರಧಾನ ಸಂಪಾದಕ

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ
2ನೆಯ ಮಹಡಿ, ಚಾಲುಕ್ಯ ವಿಭಾಗ, ಕನ್ನಡ ಭವನ, ಬೆಂಗಳೂರು-560 002.
Telephone: 080-22113147, Website: www.saintpoetkanaka.in
E-mail: kanakaresearchcentre@gmail.com